# ಪ್ರಸ್ತಾವನೆ

ಕುಂತು ಕುಣಿಗಲ್ ಗೆದ್ದ । ನಿಂತು ಮದುಗವ ಗೆದ್ದ
ಮಾತಿನಲಿ ಗೆದ್ದ ಮಧುಗಿರಿ । ತುಂಬೆಯ ಹೂವಿನಲಿ ಗೆದ್ದ ತುಮಕೂರು

ಇದು ತುಮಕೂರು ಸೀಮೆಯ ಹಿರಿಮೆ-ಗರಿಮೆಯನ್ನು ಸಾರುವ ಪುಟ್ಟ ಪದ್ಯ. ರಾಜ-ಮಹಾರಾಜರು, ವೀರ ಯೋಧರು, ಸಾಧು ಸಂತರು ಬಾಳಿ ಬೆಳಗಿದ ಹಿರಿಮೆ ತುಮಕೂರಿಗಿದೆ. ಶೌರ್ಯ, ಪರಾಕ್ರಮ, ತ್ಯಾಗ, ಬಲಿದಾನಗಳ ರೋಚಕ ಚಿತ್ರ ತುಮಕೂರಿನ ಇತಿಹಾಸದಲ್ಲಿ ಹಾಸುಹೊಕ್ಕಾಗಿದೆ. ಅಪೂರ್ವ ಜಾನಪದ ಸಂಸ್ಕೃತಿ, ಅನನ್ಯ ಕವಿ ಪರಂಪರೆ, ಮೈ ನವಿರೇಳಿಸುವ ಗುಡಿ-ಗೋಪುರಗಳು, ಸರ್ವಧರ್ಮ ಸಹಿಷ್ಣುತೆಗಳಿಂದ ತುಮಕೂರು ಭಾರತೀಯ ಸಂಸ್ಕೃತಿಯಲ್ಲಿ ಅನನ್ಯತೆ ಗಳಿಸಿದೆ. ಜಾನಪದ ಮಹಾಕಾವ್ಯ, ಹಾಡು, ಕುಣಿತ, ಮೂಡಲಪಾಯ ಯಕ್ಷಗಾನ ವಿಶಿಷ್ಟ ಉಡುಗೆ-ತೊಡುಗೆ, ಅಡಿಗೆ, ಊಟೋಪಚಾರ, ಜಾತ್ರೆ, ತೇರು, ಸೃಜನ ಪರಂಪರೆಯ ಸಮೃದ್ಧ ಸಾಹಿತ್ಯ, ಕಲಾವಂತಿಕೆಯಿಂದ ತುಮಕೂರು ಸಾಂಸ್ಕೃತಿಕವಾಗಿಯೂ ಭವ್ಯತೆ ಹೊಂದಿದೆ. ಕರ್ನಾಟಕದ ರಾಜಧಾನಿ ಬೆಂಗಳೂರಿಗೆ ತಲೆಬಾಗಿಲಂತಿರುವ ತುಮಕೂರಿನಿಂದ ಬೆಂಗಳೂರಿಗೆ 69 ಕಿ.ಮೀ. ದೂರದಲ್ಲಿದೆ. ತೆಂಗು, ಕಂಗು, ಅಡಿಕೆ, ಬಾಳೆ, ಹಲಸು, ಮಾವು, ಹೊಲ-ಗದ್ದೆಗಳ ಹಚ್ಚ ಹಸಿರಿನ ಹೊದಿಕೆಯೊಂದಿಗೆ ಸದಾ ತಂಪು ನೀಡುತ್ತವೆ. ಬೆಟ್ಟ, ಬನ, ಗಿರಿ, ದುರ್ಗ, ನದಿ, ಕೆರೆ-ಕಟ್ಟೆಗಳಿಂದ ಆವೃತ್ತವಾಗಿರುವ ತುಮಕೂರು ಚಾರಿತ್ರಿಕವಾಗಿಯೂ ಹಿರಿಮೆ ಹೊಂದಿದೆ. ಗುಡಿ-ಗೋಪುರ, ವಾಸ್ತುಶಿಲ್ಪ, ಶಾಸನಗಳಿಗೆ ಇದು ತವರುಮನೆಯಂತಿದೆ. ಮಠ, ಮಂದಿರಗಳಿಗೂ ಇಲ್ಲಿ ವಿಶೇಷ ಸ್ಥಾನಮಾನದ ಗೌರವವಿದೆ.

## ಭೌಗೋಳಿಕ ವಿನ್ಯಾಸ:

ತುಮಕೂರು ಜಿಲ್ಲೆಯು ಸಮುದ್ರ ಮಟ್ಟಕ್ಕಿಂತ 2700 ಅಡಿಗಳಷ್ಟು ಎತ್ತರದಲ್ಲಿದ್ದು ಉತ್ತರ-ದಕ್ಷಿಣವಾಗಿ 102 ಮೈಲಿ ಹಾಗೂ ಪೂರ್ವ-ಪಶ್ಚಿಮವಾಗಿ 67 ಮೈಲಿಗಳಷ್ಟು ವಿಸ್ತಾರವಾಗಿ ಚೆಲ್ಲಿಕೊಂಡಿದೆ. ತುಮಕೂರು ಜಿಲ್ಲೆಯ ಒಟ್ಟು ಭೌಗೋಳಿಕ ವಿಸ್ತೀರ್ಣವು 4073.7 ಚದರ ಮೈಲಿಗಳು ಅಥವಾ 10550.9 ಚದರ ಕಿ.ಮೀ.ನಷ್ಟು ವ್ಯಾಪಿಸಿದೆ. ತುಮಕೂರು ಜಿಲ್ಲೆಯ ಅಕ್ಷಾಂಶ 12.45 ಮತ್ತು 14.20 ಉತ್ತರ ಅಕ್ಷಾಂಶ 76.20 ಮತ್ತು 77.31 ಪೂರ್ವ ಅಕ್ಷಾಂಶ ಹೊಂದಿದೆ.

ತುಮಕೂರು ಜಿಲ್ಲೆಯ ಉತ್ತರ ಭಾಗದ ಪಾವಗಡ ಆಂಧ್ರಪ್ರದೇಶಕ್ಕೆ ಸೇರಿದ ಅನಂತಪುರ ಜಿಲ್ಲೆಯಿಂದ ಸುತ್ತುವರಿದಿದೆ. ಪೂರ್ವಕ್ಕೆ ಬೆಂಗಳೂರು ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳಿವೆ. ದಕ್ಷಿಣಕ್ಕೆ ರಾಮನಗರ, ಮಂಡ್ಯ ಜಿಲ್ಲೆಗಳು, ಪಶ್ಚಿಮಕ್ಕೆ ಚಿತ್ರದುರ್ಗ, ಚಿಕ್ಕಮಗಳೂರು ಮತ್ತು ಹಾಸನ ಜಿಲ್ಲೆಗಳಿವೆ. ಹತ್ತು ತಾಲ್ಲೂಕು ಕೇಂದ್ರ, ಮೂರು ವಿಭಾಗೀಯ ವಲಯಗಳನ್ನು ಹೊಂದಿದೆ. ಮಧುಗಿರಿ, ಸಿರಾ, ಪಾವಗಡ, ಕೊರಟಗೆರೆ, ತುಮಕೂರು, ಕುಣಿಗಲ್, ಗುಬ್ಬಿ, ತಿಪಟೂರು, ಚಿಕ್ಕನಾಯಕನಹಳ್ಳಿ ಹಾಗೂ ತುರುವೇಕೆರೆ ಇವು ತುಮಕೂರು ಜಿಲ್ಲೆಯ ಹತ್ತು ತಾಲ್ಲೂಕು ಕೇಂದ್ರಗಳು. ಈ ಹತ್ತು ತಾಲ್ಲೂಕುಗಳು ತುಮಕೂರಿನ ಒಟ್ಟು ಸಂಸ್ಕೃತಿಗೆ ಹೊಂದಿಕೊಂಡಂತಿದ್ದರೂ ಪ್ರಾದೇಶಿಕ ವೈವಿಧ್ಯತೆಗಳಿಂದ ಸಾಂಸ್ಕೃತಿಕ ವಿಶಿಷ್ಟತೆಗಳಿಂದ ಅನನ್ಯತೆಯನ್ನು ಕಾಯ್ದುಕೊಂಡು ತುಮಕೂರು ಎಲ್ಲ ತಾಲ್ಲೂಕುಗಳ ಪ್ರಾದೇಶಿಕ ನೆಲೆಗಳ ತನುಜಾತೆಯಂತಿದೆ.

ತುಮಕೂರು ಜಿಲ್ಲೆಯ ಉತ್ತರಕ್ಕಿರುವ ಪಾವಗಡ, ತುಮಕೂರು ಜಿಲ್ಲೆಯ ಗಡಿಗೆ ಹೊಂದಿಕೊಳ್ಳದಂತೆ ಆಂಧ್ರಪ್ರದೇಶದ ಅನಂತಪುರ ಜಿಲ್ಲೆಯಿಂದ ಸುತ್ತುವರಿದಿದೆ. ಪಾವಗಡಕ್ಕೆ ತುಮಕೂರಿನಿಂದ ಪಯಣಿಸುವವರು ಅನಂತಪುರ ಜಿಲ್ಲೆಯ ಮಡಕಶಿರಾದ ಭೂಪ್ರದೇಶವನ್ನು ದಾಟಿಯೇ ಪಾವಗಡ ತಾಲ್ಲೂಕು ನೆಲೆಗೆ ಕಾಲಿಡಬೇಕಿದೆ. ಇದು ಒಂದು ಬಗೆಯ ವಿಶೇಷವಾಗಿದೆ. ಪಾವಗಡ ತಾಲ್ಲೂಕಿನ ಪಶ್ಚಿಮ ಭಾಗದ ಒಂದು ಕಿರು ಅಂಚು ಮಾತ್ರ ಕರ್ನಾಟಕದ ಚಿತ್ರದುರ್ಗ ಜಿಲ್ಲೆಯ ವಾಯವ್ಯ ದಿಕ್ಕಿನ ಭೂಭಾಗಕ್ಕೆ ಹೊಂದಿಕೊಂಡಿದೆ. ಈ ಹಿನ್ನೆಲೆಯಿಂದಲೂ ಪಾವಗಡ ತುಮಕೂರು ಜಿಲ್ಲೆಯ ಭೌಗೋಳಿಕ ವ್ಯಾಪ್ತಿಯಿಂದ ಹೊರಭಾಗದಲ್ಲಿದೆ. 1886 ರ ತನಕ ಪಾವಗಡ ಚಿತ್ರದುರ್ಗ ಜಿಲ್ಲೆಗೆ ಸೇರಿದ್ದು, ಹಲವು ರಾಜಕೀಯ ಪಲ್ಲಟಗಳಿಂದಾಗಿ 1832 ರಲ್ಲಿ ತುಮಕೂರು ಕಮೀಷನರ್ ಆಳ್ವಿಕೆಗೆ ಒಳಪಟ್ಟಿತು. 1863 ರಲ್ಲಿ ತುಮಕೂರು ಡಿವಿಜನ್ ರದ್ದಾಗಿ, ನಂದಿದುರ್ಗ ಡಿವಿಜನ್‌ಗೆ ಸೇರಿತು. ನಂತರ 1886 ರಲ್ಲಿ ಚಿತ್ರದುರ್ಗ ಜಿಲ್ಲೆಯಾಗಿ ರಚನೆಯಾಗಿ, ಪಾವಗಡ ಚಿತ್ರದುರ್ಗ ಡಿವಿಜನ್‌ನಿಂದ ಹೊರಗೆ ಬಂದು ತುಮಕೂರಿಗೆ ಸೇರಿಸಲ್ಪಟ್ಟಿತು. ಇದೇ ಸಂದರ್ಭದಲ್ಲಿ ತುಮಕೂರಿಗೆ ಜಿಲ್ಲೆಯ ಸ್ಥಾನಮಾನ ನೀಡಲಾಯಿತು. ಮತ್ತು ಮೈಸೂರು ರಾಜ್ಯದ ಒಂಬತ್ತು ಜಿಲ್ಲೆಗಳಲ್ಲಿ ತುಮಕೂರು ಜಿಲ್ಲೆಯೂ ಒಂದು ಜಿಲ್ಲೆಯಾಗಿ ಪ್ರತ್ಯೇಕ ಜಿಲ್ಲಾ ಕೇಂದ್ರದ ಸ್ಥಾನಮಾನ ಪಡೆದುಕೊಂಡಿತು.

ಹತ್ತು ತಾಲ್ಲೂಕು ಕೇಂದ್ರಗಳಲ್ಲಿ ಹಂಚಿಹೋಗಿರುವ ತುಮಕೂರು ಜಿಲ್ಲೆಯ ಒಟ್ಟು ಜನಸಂಖ್ಯೆ 26,78,980. ಇದರಲ್ಲಿ ಪುರುಷರು 13,50,594 ಇದ್ದು, ಮಹಿಳೆಯರು 13,28,386 ಇದ್ದಾರೆ (ಭಾರತೀಯ ಜನಗಣತಿ 2011 ಆಧಾರ). ಆಡಳಿತಾತ್ಮಕವಾಗಿ ಜಿಲ್ಲಾ ಪಂಚಾಯ್ತಿ, ತಾಲ್ಲೂಕು ಪಂಚಾಯ್ತಿ, ಗ್ರಾಮ ಪಂಚಾಯ್ತಿ, ಮಹಾನಗರಪಾಲಿಕೆ, ನಗರಪಾಲಿಕೆ. ಮುನ್ಸಿಪಲ್, ಪಟ್ಟಣ ಪಂಚಾಯ್ತಿ ಹೀಗೆ ವರ್ಗೀಕರಿಸಿದ್ದು ತುಮಕೂರು ನಗರ, ಗ್ರಾಮಾಂತರ, ಮಧುಗಿರಿ, ಗುಬ್ಬಿ, ಚಿಕ್ಕನಾಯಕನಹಳ್ಳಿ, ತಿಪಟೂರು, ತುರುವೇಕೆರೆ ತಾಲ್ಲೂಕುಗಳನ್ನು ಸೇರಿಸಿ ತುಮಕೂರು ಲೋಕಸಭಾ ಕೇಂದ್ರವಾಗಿದೆ. ಕುಣಿಗಲ್ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಲೋಕಸಭೆಯ ವ್ಯಾಪ್ತಿಗೆ ಸೇರಿದ್ದರೆ ಸಿರಾ, ಪಾವಗಡ ತಾಲ್ಲೂಕುಗಳನ್ನು ಚಿತ್ರದುರ್ಗ ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಸೇರಿಸಲಾಗಿದೆ. ಹಾಗಾಗಿ ತುಮಕೂರು ಮೂರು ಲೋಕಸಭಾ ಕ್ಷೇತ್ರಗಳಿಗೂ ಹಂಚಿಕೆಯಾಗಿರುವುದು ಇಲ್ಲಿನ ವಿಶೇಷವಾಗಿದೆ.

## ತುಮಕೂರು ಜಿಲ್ಲೆಯ ತಾಲ್ಲೂಕುವಾರು ಜನಸಂಖ್ಯೆ ವಿವರ:

| **ತಾಲ್ಲೂಕುಗಳು** | **ಭೌಗೋಳಿಕ ವಿಸ್ತೀರ್ಣ** | **ಗಂಡಸರು** | **ಹೆಂಗಸರು** | **ಒಟ್ಟು** |
|---|---|---|---|---|
| ಚಿಕ್ಕನಾಯಕನಹಳ್ಳಿ | 1113 ಚ.ಕಿ.ಮೀ | 105583 | 106547 | 212130 |
| ಗುಬ್ಬಿ | 1221 ಚ.ಕಿ.ಮೀ. | 132102 | 130416 | 262518 |
| ಕೊರಟಗೆರೆ | 652 ಚ.ಕಿ.ಮೀ. | 84349 | 83242 | 167591 |
| ಕುಣಿಗಲ್ | 981 ಚ.ಕಿ.ಮೀ. | 112803 | 112980 | 225783 |
| ಮಧುಗಿರಿ | 1131 ಚ.ಕಿ.ಮೀ | 134670 | 133196 | 267866 |
| ಪಾವಗಡ | 1358 ಚ.ಕಿ.ಮೀ. | 123680 | 121514 | 245194 |
| ಸಿರಾ | 1552 ಚ.ಕಿ.ಮೀ. | 158978 | 154780 | 313758 |
| ತಿಪಟೂರು | 785 ಚ.ಕಿ.ಮೀ. | 111282 | 111467 | 222749 |
| ತುಮಕೂರು | 1026 ಚ.ಕಿ.ಮೀ. | 303197 | 289200 | 592397 |
| ತುರುವೇಕೆರೆ | 778 ಚ.ಕಿ.ಮೀ. | 83950 | 85044 | 168994 |
| **ಒಟ್ಟು** | **10550.9 ಚ.ಕಿ.ಮೀ.** | **1350594** | **1328386** | **2678980** |

ಈ ಅಂಕಿ-ಅಂಶಗಳನ್ನು ಭಾರತೀಯ ಜನಗಣತಿ 2011 ರ ಅಂಕಿ-ಅಂಶಗಳನ್ನು ಆಧರಿಸಿ ನೀಡಲಾಗಿದೆ.

ಮಳೆ ಆಧಾರಿತ ಬದುಕು ಇಲ್ಲಿನದು. ಕೃಷಿಯೇ ಕಾಯಕ. ತಿಪಟೂರು, ತುರುವೇಕೆರೆ ಅರೆಮಲೆನಾಡಿನ ಸೆರಗಿಗೆ ಸೇರಿದ್ದರೆ ಪಾವಗಡ, ಸಿರಾ, ಮಧುಗಿರಿ ಅಪ್ಪಟ ಬಯಲುಸೀಮೆ. ಇಲ್ಲಿ ಬಿಸಿಲು ಅಧಿಕ, ಮಳೆಯೂ ಕಡಿಮೆ. ಏಪ್ರಿಲ್-ಮೇ ತಿಂಗಳಲ್ಲಿ ಇಲ್ಲಿನ ಬಿಸಿಲಿನ ತಾಪಮಾನ 38-41 ಡಿಗ್ರಿ ಸೆಂಟಿಗ್ರೇಡ್ ಇರುತ್ತದೆ. ಚಳಿ 10-14 ಡಿಗ್ರಿ ಸೆಂಟಿಗ್ರೇಡ್ ಇರುತ್ತದೆ. ವಾರ್ಷಿಕ ಮಳೆಯ ಪ್ರಮಾಣ 568.4 ಮಿ.ಮೀ ಆಗಿದೆ. ಕಳೆದ 10 ವರ್ಷಗಳಲ್ಲಿ (2003-14) ಅತಿ ಹೆಚ್ಚು ಮಳೆ 2010 ರಲ್ಲಿ 837 ಮಿಮೀ ಆಗಿದ್ದು, ಅತಿ ಕಡಿಮೆ ಮಳೆ ಬಿದ್ದಿರುವ ವರ್ಷ 2003 ರಲ್ಲಿ 417 ಮಿಮೀ ಆಗಿದೆ. ಇದು ತುಮಕೂರು ಜಿಲ್ಲೆಯಲ್ಲಿ ಬಿದ್ದಿರುವ ಸರಾಸರಿ ಮಳೆಯ ಪ್ರಮಾಣವಾಗಿದೆ.

## ಮಣ್ಣು, ಗುಡ್ಡ, ಬೆಟ್ಟ:

ತುಮಕೂರು ಜಿಲ್ಲೆ ಕುರುಚಲು ಕಾಡು, ಬೆಟ್ಟ-ಗುಡ್ಡ, ಹಳ್ಳ-ಕೊರಕಲುಗಳಿಂದ ಕೂಡಿದ್ದು ಉತ್ತರದಲ್ಲಿ ಪಾವಗಡ ತಾಲ್ಲೂಕಿನ ನಿಡುಗಲ್ ಬೆಟ್ಟದಿಂದ ದಕ್ಷಿಣಕ್ಕೆ ಕುಣಿಗಲ್ ತಾಲ್ಲೂಕಿನ ಹುಲಿಯೂರುದುರ್ಗ, ಹುತ್ರಿದುರ್ಗದತನಕ ಪೂರ್ವದಲ್ಲಿ ದೇವರಾಯನದುರ್ಗದಿಂದ ಶಿವಗಂಗೆ ಬೆಟ್ಟದ ತನಕ ಇಲ್ಲಿನ ಬೆಟ್ಟಸಾಲು ವಿಸ್ತಾರವಾಗಿ ಹರಡಿಕೊಂಡಿದೆ. ಮಿಡಿಗೇಶಿ ಬೆಟ್ಟ, ಮಧುಗಿರಿ ಬೆಟ್ಟ, ಸಿದ್ದರಬೆಟ್ಟ, ಚನ್ನರಾಯನದುರ್ಗ, ಕೊರಟಗೆರೆ ಬೆಟ್ಟ ಹಾಗೆಯೇ ಜಿಲ್ಲೆಯ ಪಶ್ಚಿಮಕ್ಕೆ ತಿಪಟೂರು ತಾಲ್ಲೂಕಿನ ಹತ್ಯಾಳು ನರಸಿಂಹಸ್ವಾಮಿ ಬೆಟ್ಟಗಳು ಪ್ರಮುಖ ಗಿರಿಧಾಮಗಳು. ಮಧುಗಿರಿ ಏಕಶಿಲಾ ಬೆಟ್ಟವು ಏಷ್ಯಾ ಖಂಡದಲ್ಲಿಯೇ ಅತ್ಯಂತ ಎತ್ತರವಾದ ಏಕಶಿಲಾ ಬೆಟ್ಟ ಎಂಬ ಹಿರಿಮೆಗೆ ಪಾತ್ರವಾಗಿದೆ. ಇದು ಸಮುದ್ರ ಮಟ್ಟದಿಂದ 1192 ಮೀ. ಎತ್ತರದಲ್ಲಿದೆ. ಕೊರಟಗೆರೆ ತಾಲ್ಲೂಕಿನ ಕುರಂಕೋಟೆ ಸಮೀಪದಲ್ಲಿರುವ ಸಿದ್ದರಬೆಟ್ಟ ಭಾರತದ ವನಸ್ಪತಿಗಳ ಆಗರ, ಪುರಾತನ ಗಿಡಮೂಲಿಕೆ, ಔಷಧಿ ಸಸ್ಯಗಳ ತೋಟ ಮಾತ್ರವಲ್ಲ ಶ್ರೀ ಗವಿಸಿದ್ದೇಶ್ವರನ ಪವಿತ್ರ ನೆಲೆ. ಎತ್ತರವಾದ ಬೆಟ್ಟದ ತುತ್ತ ತುದಿಯಲ್ಲಿ ಕುರಂಗರಾಯನೆಂಬ ರಾಜನು ನಿರ್ಮಿಸಿದ ಒಂದು ಕಲ್ಲಿನ ಕೋಟೆಯಿದೆ. ಪಕ್ಕದಲ್ಲಿ ನೀರಿಗಾಗಿ ಕಟ್ಟಿದ ದೊಡ್ಡ ದೋಣೆಯನ್ನು ಕಾಣಬಹುದು.

ಇದಲ್ಲದೆ ಸಿರಾ ತಾಲ್ಲೂಕಿನ ಮರಡಿಗುಡ್ಡ, ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಕುಪ್ಪೂರು ಮಲ್ಲಿಕಾರ್ಜುನಸ್ವಾಮಿ ಬೆಟ್ಟ, ರಾಮದೇವರ ಬೆಟ್ಟ, ಸೀತಕಲ್ಲು ಬೆಟ್ಟ, ದೊಡ್ಡನಾರವಂಗಲ ಗುಡ್ಡ, ತರೂರು ಗುಡ್ಡ ಇವು ತುಮಕೂರು ಜಿಲ್ಲೆಯ ಗಿರಿಧಾಮಗಳಾಗಿ, ಅವುಗಳ ಸುತ್ತ ಹಲವು ಬಗೆಯ ಪ್ರಾಣಿಸಂಕುಲ, ಸಸ್ಯ ಸಂಕುಲಕ್ಕೆ ಪ್ರೇರಕವಾಗಿವೆ.

**ಆಡಳಿತ:**

ತುಮಕೂರಿನ ಹೆಸರಿನ ನಿಷ್ಕರ್ಷೆ ವ್ಯಾಪಕವಾಗಿ ನಡೆದಿದೆ. ತುಂಬೆ ಹೂವಿನ ಮೂಲದಿಂದ ತುಮಕೂರು ಎಂದು ಹೆಸರು ಬಂದಿದೆಯೆಂದು ಕೆಲವರು ವಾದಿಸಿದರೆ ಟುಮಕಿ > ತಮಟೆ ವಾದ್ಯದ ಮೂಲದಿಂದಾಗಿ ಟುಮಕಿ + ಊರು ಟುಮಕೂರು – ತುಮಕೂರು ಆಗಿದೆ ಎಂಬ ಅಭಿಪ್ರಾಯವೂ ಇದೆ. ಇಂದಿಗೂ ಗ್ರಾಮ ರೂಪದಲ್ಲಿ ಟುಮಕೂರು ಎಂದು ಕರೆಯುವುದೂ ಉಂಟು. ಆದರೂ ಈ ಎರಡೂ ಹೆಸರಿನ ಮೂಲಕ್ಕೆ ಖಚಿತವಾದ ಕಾರ್ಯಕಾರಣ ಸಂಬಂಧವಿದೆ ಎಂಬುದು ಮಹತ್ವದ ಸಂಗತಿ. ಹಾಗಾಗಿ ಒಂದು ಹೆಸರಿಗೆ ಶಾಸನ ಮೂಲ ತುಂಬೆವೂರು ತುಮಕೂರು ಆದರೆ ಮತ್ತೊಂದು ಚಾರಿತ್ರಿಕ ದಾಖಲೆಯ ವಾದ್ಯಮೂಲದ ಐತಿಹ್ಯ ಕಾರಣವಾಗಿದೆ. ಕ್ರಿ.ಶ.955 ರ ಶಾಸನದಲ್ಲಿ ಇದು ತುಮಕೂರಿನ ಸೋಮೇಶ್ವರ ದೇವಾಲಯದ ಆವರಣದಲ್ಲಿದ್ದು ಅದು ಗಂಗರ ಕಾಲದ ಶಾಸನವಾಗಿದೆ. ಇಮ್ಮಡಿ ಭೂತುಗನು ಈ ಶಾಸನದ ಕಾರಣಕರ್ತನಾಗಿದ್ದು ಇದರಲ್ಲಿ ತುಮಕೂರನ್ನು ತಮ್ಮೆಗೂರು ಎಂದು ಕರೆಯಲಾಗಿದೆ.

'... ಶಕವರ್ಷ 877 ... ಕ್ಷಸನೆಂಬ ದೊಳ್ತುಮ್ಮೆಗೂರ ಕೆಉಲೆಯ ವೊಳೆಯೊಉಲೆಣ್ಬರ ಬೆಸದೊಳೆ ಕನಮ' ಎಂದಿದೆ. ಇದರಲ್ಲಿ ಸೋಮೇಶ್ವರ ಕಟ್ಟೆಯನ್ನು ಇಮ್ಮಡಿ ಭೂತುಗನು ನಿರ್ಮಿಸಿ, ಅದರ ಉಸ್ತುವಾರಿಯನ್ನು ನೋಡಿಕೊಳ್ಳಲು ಬಿಟ್ಟಿಯಣ್ಣ ಎಂಬುವವನನ್ನು ಅಧಿಕಾರಿಯನ್ನಾಗಿ ನೇಮಿಸಿ, ಅವನಿಗೆ 12 ಖಂಡುಗ ಬಿತ್ತುವಟ್ಟು (ಭೂಮಿಯನ್ನು) ಬ್ರಹ್ಮಪುತ್ರ ಎಂಬ ಬಿರುದನ್ನು ಸಹ ಕಂದಮಯ್ಯನ ಮಗ ಅಜ್ಜವಯ್ಯನು ಕೊಟ್ಟನೆಂದೂ ಉಲ್ಲೇಖಿಸಿದೆ. ಇದರ ಅರ್ಥ ಕ್ರಿ.ಶ.955ರ ಪೂರ್ವದಲ್ಲಿಯೇ ತುಂಬೆಗೂರು, ತುಮಕೂರು ಪದ ಬಳಕೆಯಲ್ಲಿತ್ತು ಎಂಬುದು ತಿಳಿಯುತ್ತದೆ.

ಇನ್ನೊಂದು ಮೂಲದ ಪ್ರಕಾರ ಗಂಗವಾಡಿ ಈಗಿನ ಗೂಳೂರು (ಕ್ರೀಡಾಪುರ) ಸಾಮಂತರಿಗೂ ಹೇಮಾವತಿ (ಹೆಂಜೇರು ಮಡಕಶಿರಾ ತಾಲ್ಲೂಕು ಅಮರಾಪುರ ಸಮೀಪದ ಈಗಿನ ಹೆಂಜೇರು ಸಿದ್ದೇಶ್ವರನ ಕ್ಷೇತ್ರ) ಇಲ್ಲಿ ನೊಳಂಬರು ಆಳ್ವಿಕೆ ಮಾಡುತ್ತಿದ್ದು ಮೇಲಿಂದ ಮೇಲೆ ನೊಳಂಬರಿಗೂ ಗಂಗರಿಗೂ ಕಲಹವಾಗುತ್ತಿತ್ತು. ಅಂತಹ ಸಂದರ್ಭದಲ್ಲಿ ನೊಳಂಬರ ಧಾಳಿಯನ್ನು ತಡೆಯಲು ಈಗಿನ ಬಟವಾಡಿಯ ಸಮೀಪ ಗಂಗವಾಡಿಯ ಸಾಮಂತರು ಕಾವಲುಗಾರರನ್ನು ಇಡುತ್ತಿದ್ದರು. ಯಾರಾದರೂ ಶತ್ರುಗಳು ಬಂದಾಗ, ತಮ್ಮ ಸೈನಿಕರನ್ನು ಒಗ್ಗೂಡಿಸುವ ಸಲುವಾಗಿ ಟುಮಕಿ ಎಂಬ ವಾದ್ಯವನ್ನು ನುಡಿಸುವ ಮೂಲಕ ಸೇವೆಯನ್ನು ಸಾಮಂತ ಪರಿವಾರದವರನ್ನು ಸಂಘಟಿಸುತ್ತಿದ್ದರೆಂಬುದು ಇನ್ನೊಂದು ವಾದ. ಹೀಗಾಗಿ ತುಮಕೂರಿಗೆ ಟುಮಕಿ ವಾದ್ಯ ಮೂಲದಿಂದಲೇ ಟುಮಕೂರು, ತುಮಕೂರು ಆಗಿದೆ ಎನ್ನಲಾಗಿದೆ.

ತುಮಕೂರು ಕೆರೆಯ ಸಮೀಪ ಒಂದು ಗರುಡಗಂಭವಿದ್ದು ಅದರ ಉಲ್ಲೇಖದ ಪ್ರಕಾರ ವಿಜಯನಗರದ ಅರಸ ಕೃಷ್ಣದೇವರಾಯನ ಮಹಾ ದಂಡನಾಯಕ ತುಂಬೆಗ ತುಮಕೂರಿಗೆ ದಂಡೆತ್ತಿ ಬಂದಿದ್ದು ಈತನೇ ತುಮಕೂರಿನ ಕೆರೆಯನ್ನು ನಿರ್ಮಿಸಿದನು. ಇದರಿಂದ ತುಂಬಿಗ ವ್ಯಕ್ತಿಯ ನಾಮವೇ ತುಮಕೂರು ಹೆಸರಿನ ಮೂಲವೂ ಆಗಿದೆ ಎಂಬ ಹೇಳಿಕೆಗಳೂ ಇವೆ. ಈ ಗರುಡಗಂಭ ಕೋಡಿ ಆಂಜನೇಯ ದೇವಸ್ಥಾನದ ಬಳಿಯಿದ್ದು ಈಗ ಕಾಣದಾಗಿದೆ.

ತುಮಕೂರು ಜಿಲ್ಲೆಯ ಪರಿಸರ ಶಿಲಾಯುಗ ಹಾಗೂ ಅದಕ್ಕೂ ಮುನ್ನಿನ ದಾಖಲೆಗಳು, ಭೂ ಸಂಶೋಧನೆ, ಉತ್ಖನನಗಳು ತುಮಕೂರಿನ ಸಾಂಸ್ಕೃತಿಕ, ಚಾರಿತ್ರಿಕ, ಜನಾಂಗಿಕ ಸಂಸ್ಕೃತಿಯ ಹಿರಿತನಕ್ಕೆ ಸಾಕಷ್ಟು ದಾಖಲೆ ಒದಗಿಸಿವೆ. ತಿಪಟೂರು ತಾಲ್ಲೂಕಿಗೆ ಸೇರಿದ ಕಿಬ್ಬನಹಳ್ಳಿ, ಬಿಳಿಗೆರೆಗಳಲ್ಲಿ ಶಿಲಾಯುಗದ ಕಲಾತ್ಮಕ ಆಕೃತಿಗಳು ದೊರೆಯುತ್ತವೆ. ಬಾಣಸಂದ್ರದ ಬೆಟ್ಟಸಾಲಿನಲ್ಲಿ ಕಲ್ಲಿನ ಸುತ್ತಿಗೆಗಳು, ಅರ್ಧ ಚಂದ್ರಾಕೃತಿಯ ಗರಗಸದ ಮಾದರಿಯ ಆಯುಧಗಳು, ಬಾಣದ ಚೂಪಾದ ಅಲಗುಗಳು, ಶಿಲಾ ಚಕ್ರಗಳು, ಕಣಿವೆ ಕಲ್ಲಿನ ಮಾದರಿಗಳು ಇಲ್ಲಿನ ಸಾವಿರಾರು ವರ್ಷಗಳ ಚರಿತ್ರೆಯನ್ನು ಹೇಳುತ್ತವೆ. ಇದರಿಂದ ಈ ಬಾಣಸಂದ್ರ ಗುಡ್ಡದ ಪರಿಸರದಲ್ಲಿ ಅಪಾರ ಪ್ರಮಾಣದಲ್ಲಿ ಜನವಸತಿ ಇದ್ದುದಾಗಿ ತಿಳಿದುಬರುತ್ತದೆ. ಇಲ್ಲಿನ ಕೆಲವು ಮಾದರಿಗಳನ್ನು ಬೆಂಗಳೂರಿನ ಸೆಂಟ್ರಲ್ ಕಾಲೇಜಿನ ಭೂಗರ್ಭ ಇಲಾಖೆಯ ವಸ್ತು ಸಂಗ್ರಹಾಲಯದಲ್ಲಿ ಇರಿಸಲಾಗಿತ್ತು. ಈ ಪರಿಸರದಲ್ಲಿ ಕಲ್ಲಿನ ಹರಳು, ಬೆಣಚುಕಲ್ಲು ಈ ಬಗೆಯ ಕಚ್ಚಾವಸ್ತು ಹೇರಳವಾಗಿ ದೊರೆಯುತ್ತಿದ್ದುದರಿಂದ ಇದರ ಪ್ರಯೋಜನದ ಸಲುವಾಗಿಯೇ ಇಲ್ಲಿ ಜನವಸತಿ ಇತ್ತೆಂಬ ವಾದಗಳೂ ಮಂಡನೆಯಾಗಿವೆ. ಈ ಉತ್ಖನನ ಭಾಗಗಳಲ್ಲಿ ಲಭ್ಯವಾಗಿರುವ ಕೊಡಲಿ, ಮಚ್ಚುಗಳಿಗೆ ಮೊನಚಾದ ಕಲ್ಲಿನ ಹಿಡಿಗಳನ್ನು, ಮಚ್ಚು, ಕೊಡಲಿಗಳಿಗೆ ಹರಿತವಾದ ಸಾಣೆ ಹಿಡಿದು

ಸಾಪುಗೊಳಿಸಿರುವುದನ್ನು ಗುರುತಿಸಿರುವ ಸಂಶೋಧಕರು ಈ ಮೂಲ ನಿವಾಸಿಗಳಿಗೆ ಕುಶಲಕಲೆ, ಕುಸುರಿ ಕಲೆಗಳಲ್ಲಿ ಪ್ರಜ್ಞೆ ಇತ್ತೆಂದು ತಿಳಿದುಬರುತ್ತದೆ. ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಗುಡ್ಡಸಾಲಿನ ಕೇರಳಕಟ್ಟೆಗೆ ಮೂರು ಫರ್ಲಾಂಗ್ ದೂರದಲ್ಲಿ ಬಂಡೆಕಲ್ಲಿನ ಮೇಲೆ ಕೆಲವು ಶಿಲಾಸ್ತಂಭಗಳು ಇದ್ದು ಇವು ಶಿಥಿಲಗೊಂಡಿವೆ.

ಪೌರಾಣಿಕವಾಗಿಯೂ ತುಮಕೂರು ಮತ್ತು ಇದರ ವ್ಯಾಪ್ತಿಯ ಹಲವು ಸ್ಥಳಗಳು ಗಮನ ಸೆಳೆದಿವೆ. ಗುಬ್ಬಿ ತಾಲ್ಲೂಕಿನ ಕಡಬ ಮತ್ತು ಅದರ ಸಮೀಪದ ಕೆರೆಯನ್ನು ಶ್ರೀ ರಾಮಚಂದ್ರ ನಿರ್ಮಿಸಿದನೆಂಬ ನಂಬಿಕೆಯಿದೆ. ಕದಂಬ ಮುನಿಯ ತಪೋಭೂಮಿ ಇದಾಗಿದ್ದು ಆ ಕಾರಣದಿಂದಾಗಿಯೇ ಕಡಬ ಎಂಬ ಹೆಸರು ಬಂದಿದೆ ಎನ್ನಲಾಗಿದೆ.

## ಇತಿಹಾಸ:

ಕುಣಿಗಲ್ ತಾಲ್ಲೂಕಿನಲ್ಲಿ ಹರಿಯುವ ನಾಗಿನಿ ನದಿಯಲ್ಲಿ ಸ್ನಾನ ಮಾಡಿದ ಕಾರಣ ಕುಷ್ಠರೋಗ ಪೀಡಿತ ಮೃಗ ಮಹರ್ಷಿಯ ರೋಗ ನಿವಾರಣೆಯಾಯಿತೆಂತಲೂ ಅದಕ್ಕೆ ಕೃತಾರ್ಥನಾದ ರಾಜರ್ಷಿ ಕುಣಿಗಲ್ ಕೆರೆ (ಹೊಂಡ) ನಿರ್ಮಿಸಿದನೆಂಬ ಪ್ರತೀತಿ ಇದೆ. ಶಿವನು ಈ ಸ್ಥಳದಲ್ಲಿ ತಾಂಡವ ನೃತ್ಯ ಮಾಡಿದನೆಂಬ ಕಾರಣದಿಂದಾಗಿ ಕುಣಿದ + ಕಲ್ > ಕುಣಿಗಲ್ ಎಂದಾಗಿದೆ ಎಂಬ ಐತಿಹ್ಯವಿದೆ. ತುರುವೇಕೆರೆ ತಾಲ್ಲೂಕಿನ ಸಂಪಿಗೆ ಗ್ರಾಮ ಪುರಾಣದ ಚಂಪಾನಗರವಾಗಿದ್ದು ಇಲ್ಲಿ ಭಕ್ತ ಸುಧನ್ವ ಆಳ್ವಿಕೆ ಮಾಡಿದನೆಂಬುದು ಪ್ರತೀತಿ. ತುರುವೇಕೆರೆ ತಾಲ್ಲೂಕು ಹಳೆತಂಡಗ ಗ್ರಾಮವು ಶಕಪುರುಷ ಶಾಲಿವಾಹನ ಜನ್ಮಸ್ಥಳವೆಂದು ನಂಬಲಾಗಿದೆ. ಮಧುಗಿರಿ ತಾಲ್ಲೂಕಿನ ಮಿಡಿಗೇಶಿಯಲ್ಲಿ ಪಾಂಡವರು ತಮ್ಮ ವನವಾಸದ ದಿನಗಳನ್ನು ಕಳೆದರೆಂಬುದು ವಾಡಿಕೆ. ಇದಕ್ಕೆ ಪೂರಕವಾಗಿ ಮಿಡಿಗೇಶಿ ಸಮೀಪದ ಕತ್ತಿರಾಜನಹಳ್ಳಿಯ ಬೆಟ್ಟಗಳಲ್ಲಿ ಕೊಂತಿಬಂಡೆ ಮತ್ತು ಭೀಮನ ಗವಿಗಳೆಂಬ ಸ್ಥಳಗಳಿವೆ.

ತುಮಕೂರು ತಾಲ್ಲೂಕಿನ ದೇವರಾಯನದುರ್ಗದ ನಾಮದ ಚಿಲುಮೆಯು ರಾಮ ತನ್ನ ವನವಾಸದ ದಿನಗಳಲ್ಲಿ ತನ್ನ ಹಣೆಗೆ ತಿಲಕವನ್ನಿಡಲು ತನ್ನ ಬಾಣದಿಂದ ನೀರು ತೆಗೆದ ಸ್ಥಳವೆಂದು ನಂಬಲಾಗಿದೆ. ಹೀಗೆ ಇಲ್ಲಿನ ಗುಡ್ಡ, ಬೆಟ್ಟ, ನದಿ, ಬನ, ಗುಡಿ–ಗೋಪುರ, ಮರಗಳಿಗೂ ಪೌರಾಣಿಕ ಹಿನ್ನೆಲೆ ಕಲ್ಪಿಸುವ, ಐತಿಹ್ಯ ರೂಪುಗೊಂಡಿರುವುದನ್ನು ಕಾಣಬಹುದಾಗಿದೆ.

ತುಮಕೂರು ಜಿಲ್ಲೆಯ ಚರಿತ್ರೆ ಲಿಖಿತ ರೂಪದಲ್ಲಿ ಆಕರಗಳೊಂದಿಗೆ ದೊರೆಯುವುದು ಗಂಗರ ಕಾಲದಿಂದ ಈಚೆಗೆ. ಇದಕ್ಕೆ ಪೂರಕವಾಗಿ ಶಾಸನಗಳು ಲಭ್ಯವಾಗಿವೆ. ವೀರಗಲ್ಲು, ಮಾಸ್ತಿಗಲ್ಲು ಹಾಗೂ ಹಲವು ಕೋಟೆ–ಕೊತ್ತಲಗಳು ಚಾರಿತ್ರಿಕ ದಾಖಲೆಯಾಗಿ ಇಂದಿಗೂ ಉಳಿದಿವೆ. ಗುಡಿ–ಗೋಪುರಗಳು, ಆಳರಸರ ಭವ್ಯ ಪರಂಪರೆಗೆ ಬಲವಾದ ಸಾಕ್ಷಿ ಒದಗಿಸಿವೆ.

ಗಂಗರ ಶ್ರೀಪುರುಷ ಗಂಗನು ಕ್ರಿ.ಶ.725 ರಿಂದ 788 ರವರೆಗೆ ತುಮಕೂರು ಪರಿಸರವನ್ನು ಆಳಿದವನೆಂದು, ಅರಸು ಪರಂಪರೆಯಲ್ಲಿ ಈತನೇ ಮೊದಲಿಗನೆಂದು ತಿಳಿದುಬರುತ್ತದೆ. ಇದಕ್ಕೆ ಪೂರ್ವದಲ್ಲಿ ಕ್ರೀಡಾಪುರದ ಅರಸರು 720 ರಿಂದ ಆಳಿದರೆಂಬುದು ತಿಳಿದುಬರುತ್ತದೆ. ರಾಷ್ಟ್ರಕೂಟರು 792 ರಿಂದ 817 ರವರೆಗೆ ಹೇಮಾವತಿ ಬಳಿ ದೊರೆತ ಸಿರಾ ಶಾಸನ 27 ರ ಪ್ರಕಾರ ರಾಷ್ಟ್ರಕೂಟರ ಇಂದ್ರ ರಾಜನು ಶ್ರವಣಬೆಳಗೊಳದಲ್ಲಿ ಸಲ್ಲೇಖನ ಮಾದರಿಯಲ್ಲಿ ಮರಣ ಹೊಂದಿದ ಬಗೆಗೆ ಕುತೂಹಲಕರ ಸಂಗತಿಯನ್ನು ಶಾಸನವು ತಿಳಿಸುವುದರಿಂದ ತುಮಕೂರು ಜಿಲ್ಲೆಯಲ್ಲಿ ರಾಷ್ಟ್ರಕೂಟರ ಆಳ್ವಿಕೆಗೆ ಈ ಶಾಸನ ಖಚಿತ ಮಾಹಿತಿ ನೀಡುತ್ತದೆ. ಕಲ್ಯಾಣಿ ಚಾಲುಕ್ಯರು ಕ್ರಿ.ಶ.1040 ರಿಂದ 1200 ರವರೆಗೆ ಆಳ್ವಿಕೆ ಮಾಡಿದ ಅಸಂಖ್ಯಾತ ಶಾಸನಗಳು ತುಮಕೂರು ಜಿಲ್ಲೆಯಲ್ಲಿ ಲಭ್ಯವಾಗಿವೆ. ಸತ್ಯಾಶ್ರಯ, ಕೀರ್ತಿನಾರಾಯಣನನ್ನು ಕುರಿತ ಶಾಸನಗಳು ತುಮಕೂರು ಜಿಲ್ಲೆಯಾದ್ಯಂತ ಹಬ್ಬಿವೆ. ನೊಳಂಬರು ಮೂಲತಃ ಇಂದಿನ ಆಂಧ್ರಪ್ರದೇಶದ ಹೇಮಾವತಿಯವರಾಗಿದ್ದು ಹೆಂಜೇರು ಇವರ ರಾಜಧಾನಿಯಾಗಿತ್ತು. ಬರಗೂರು ಉಪರಾಜಧಾನಿ ಆಗಿತ್ತೆಂದು ಹೇಳಲಾಗುತ್ತದೆ. ತುಮಕೂರು ಜಿಲ್ಲೆಯ ಉತ್ತರಾರ್ಧದಲ್ಲಿ 32,000 ವರಹಗಳ ನೊಲಂಬವಾಡಿಯೆಂದು ಹೆಸರಾಗಿತ್ತು. ಆರಂಭದಲ್ಲಿ ಗಂಗರಿಗೂ ನೊಳಂಬರಿಗೂ ಸಂಘರ್ಷ ಉಂಟಾಗಿ ಟುಮಕಿ ಎಂಬ ವಾದ್ಯದ ಮೂಲಕ ತುಮಕೂರಿನ ಉಗಮಕ್ಕೂ ಪ್ರೇರಕವಾದ ಅಂಶವನ್ನು ಗಮನಿಸಬಹುದಾಗಿದೆ. ಮಹೇಂದ್ರ ಅಥವಾ ಮಹೇಂದ್ರ ರಾಜ ನೊಳಂಬವಾಡಿಯ ಮೊದಲ ರಾಜ. ಬರಗೂರಿನ ಶಾಸನ, ನಾದೂರಿನ ದೇವಾಲಯ ಈತನ ಕಾಲದ ಸಾಂಸ್ಕೃತಿಕ ಹಾಗೂ ಧಾರ್ಮಿಕ ಮಹತ್ವವನ್ನು ಸಾರುತ್ತವೆ. 6–7 ನೇ ಶತಮಾನದಿಂದ 1485 ರವರೆಗೂ ನೊಳಂಬರು ಸಣ್ಣ ಸಣ್ಣ ಪ್ರಾಂತ್ಯಗಳಾಗಿ ಅಧಿಕಾರ ಮಾಡಿದ ಸಂಗತಿ ತಿಳಿದುಬರುತ್ತದೆ. ನಂತರ ಬಂದ ಚೋಳರು 1000 ರಿಂದ 10700 ರವರೆಗೆ ಗಂಗವಾಡಿ, ನೊಳಂಬವಾಡಿಗಳೂ ಸೇರಿದಂತೆ ತುಮಕೂರು ಜಿಲ್ಲೆಯ ಬಹುಭಾಗವನ್ನು ಆಳಿದರು. ರಾಜಾಧಿರಾಜ, ರಾಜೇಂದ್ರ ಚೋಳ ಈ ರಾಜವಂಶದ ಪ್ರಮುಖರಾಗಿದ್ದಾರೆ. ಹೊಯ್ಸಳರು 1100 ರಿಂದ 1152 ರವರೆಗೆ ತುಮಕೂರು ಜಿಲ್ಲೆಯನ್ನು ಸಮಗ್ರವಾಗಿ ಆಳಿದರು. ಬಿಟ್ಟಿದೇವ ಅಥವಾ ವಿಷ್ಣುವರ್ಧನ ರಾಜನಿಗೆ ಸಂಬಂಧಿಸಿದ ತಿಪಟೂರು, ಗುಬ್ಬಿ, ಇಡಗೂರು ಈ ಕಡೆಗಳಲ್ಲಿ ಉಪಲಬ್ಧವಾಗಿವೆ. 1151

ರಲ್ಲಿ ಹೊಯ್ಸಳರ ಪಾಳೇಗಾರ ಬಾಳೆಗೂಚಿ ಕೈದಾಳ ಪ್ರಾಂತ್ಯದ ಬಾಳೆಗೂಚಿಯಲ್ಲಿ ಆಳ್ವಿಕೆ ಮಾಡುತ್ತಿದ್ದು ಈತನೇ ಭೀಮಸಮುದ್ರ ಮತ್ತು ಅಡಾಳಸಮುದ್ರದ ಕೆರೆಗಳನ್ನು ಕಟ್ಟಿಸಿದನೆಂದು ಹೇಳಲಾಗುತ್ತಿದೆ. ಇಮ್ಮಡಿ ನರಸಿಂಹ, ಮುಮ್ಮಡಿ ನರಸಿಂಹ, ರಾಮನಾಥ ಹೊಯ್ಸಳ, ಮುಮ್ಮಡಿ ವೀರಬಲ್ಲಾಳ ಈ ವಂಶದ ಪ್ರಮುಖ ರಾಜರಾಗಿದ್ದಾರೆ.

1158 ರಿಂದ 1195 ರವರೆಗೆ ಕಾಕತೀಯ ಪ್ರತಾಪರುದ್ರನು ತುಮಕೂರು ಭಾಗದಲ್ಲಿ ಆಳ್ವಿಕೆ ಮಾಡಿದನು. ನಂತರ ತುಮಕೂರನ್ನು ಸುದೀರ್ಘವಾಗಿ ಆಳ್ವಿಕೆ ಮಾಡಿದವರಲ್ಲಿ ವಿಜಯನಗರದ ಅರಸರು ಬಹುಮುಖ್ಯರು. 1346 ರಿಂದ 1580ರವರೆಗೆ ಇವರು ಆಳ್ವಿಕೆ ಮಾಡಿದ್ದಾರೆ. ರಾಜ ಬುಕ್ಕರಾಯನ ಕಾಲದಲ್ಲಿ ಹಲವಾರು ಕೆರೆಗಳು ಕಟ್ಟಲ್ಪಟ್ಟವು. ಇಮ್ಮಡಿ ಹರಿಹರ ಸಾಳುವ ನರಸಿಂಹ, ತುಳುವ ನರಸನಾಯಕ, ಕೃಷ್ಣದೇವರಾಯ, ಸದಾಶಿವರಾಯ, ಅಚ್ಯುತರಾಯ ಇವರ ಆಳ್ವಿಕೆಗೆ ಸಂಬಂಧಿಸಿದ ಹಲವಾರು ಉಲ್ಲೇಖಗಳು ತುಮಕೂರು ಜಿಲ್ಲೆಯ ಶಾಸನಗಳಲ್ಲಿ ಉಲ್ಲೇಖಗೊಂಡಿವೆ. ಅತ್ಯಂತ ಸಮರ್ಥವಾಗಿ ಆಳ್ವಿಕೆ ಮಾಡಿದ ವಿಜಯನಗರ ಸಾಮ್ರಾಜ್ಯದ ಅರಸರು 15–16 ನೇ ಶತಮಾನದ ಅಂತಿಮ ಘಟ್ಟದಲ್ಲಿ ಆಂತರಿಕ ಕಲಹ, ವಿರೋಧಿ ಧಾಳಿಗಳಿಂದ ದುರ್ಬಲರಾಗುತ್ತಾ ಬಂದರು. ಇವರ ಸಾಮಂತರು, ಅಧಿಕಾರಿಗಳು, ಪಾಳೆಯಗಾರರ ಹೆಸರಿನಲ್ಲಿ ಪ್ರಬಲವಾಗುತ್ತಾ ಬಂದರು. ಅಂಥ ಪಾಳೆಯಗಾರರು ತುಮಕೂರು ಜಿಲ್ಲೆಯಲ್ಲಿಯೂ ಆಳ್ವಿಕೆ ಮಾಡಿದರು. ಅಂತಹ ಪಾಳೆಯಗಾರರಲ್ಲಿ ನಿಡುಗಲ್ಲಿನ ಪಾಳೆಯಗಾರರು, ಸಿರಾ ಪಾಳೆಯಗಾರರು, ಮಧುಗಿರಿ ಪಾಳೆಯಗಾರರು, ಹಾಗಲವಾಡಿ ಪಾಳೆಯಗಾರರು, ಹೊಳವನಹಳ್ಳಿ, ಗುಬ್ಬಿ ಹೊಸಹಳ್ಳಿ, ಹೆಬ್ಬೂರು ಪಾಳೆಯಗಾರರು, ತುಮಕೂರು ಜಿಲ್ಲೆಯ ಸಾಮಂತ ಪರಂಪರೆಯಲ್ಲಿ ತಮ್ಮ ಶೌರ್ಯ, ಪರಾಕ್ರಮ, ಸಾಧನೆಗಳಿಂದ ಗುರುತಿಸಿಕೊಂಡಿದ್ದಾರೆ. ನಂತರದ ದಿನಗಳಲ್ಲಿ ಮೈಸೂರಿನ ಅರಸರು 1630–1761 ರವರೆಗೆ ಹೈದರಾಲಿ, ಟಿಪ್ಪು ಸುಲ್ತಾನ 1761–1799 ರವರೆಗೆ ಮತ್ತೆ 1800 ರಿಂದ 1831 ರವರೆಗೆ ಮುಮ್ಮಡಿ ಕೃಷ್ಣರಾಜ ಒಡೆಯರು ಮೈಸೂರು ರಾಜ್ಯವನ್ನು ಆರು ಫೌಜುದಾರ ನೆಲೆಗಳನ್ನಾಗಿ ವಿಂಗಡಿಸಿದರು. ಬೆಂಗಳೂರು, ಮದ್ದಗಿರಿ, ಚಿತ್ರದುರ್ಗ, ಅಷ್ಟಗ್ರಾಮ, ಮಜರಾಬಾದ್ ಮತ್ತು ನಗರ. ಆಗ ತುಮಕೂರು ಮದ್ದಗಿರಿ ಫೌಜುದಾರರಿಗೆ ಸೇರಿತ್ತು. ಮತ್ತೆ ತುಮಕೂರು ಚಿತ್ರದುರ್ಗ ಜಿಲ್ಲೆಗೆ ಸೇರಿ ಇದನ್ನು ವಿಭಾಗವಾಗಿ ಮಾಡಲಾಯಿತು. 1862 ರಲ್ಲಿ ಬ್ರಿಟಿಷ್ ಕಮಿಷನರ್ ಆಗಿದ್ದ ಬೌರಿಂಗ್‌ನು ಮೈಸೂರು ರಾಜ್ಯವನ್ನು 8 ಜಿಲ್ಲೆಗಳನ್ನಾಗಿ ವರ್ಗೀಕರಿಸಿದಾಗ ತುಮಕೂರು ಒಂದು ಜಿಲ್ಲಾ ಕೇಂದ್ರದ ಸ್ಥಾನ ಪಡೆಯಿತು. ಜಿಲ್ಲೆಗೆ ಡೆಪ್ಯೂಟಿ ಕಮಿಷನರ್‌ರನ್ನು ಸೃಷ್ಟಿಸಿ 01.05.1879 ರಲ್ಲಿ ತುಮಕೂರು ಜಿಲ್ಲೆಯ ಮೊದಲ ಜಿಲ್ಲಾಧಿಕಾರಿಯಾಗಿ ಕೆ.ಶೇಷಾದ್ರಿ ಅಯ್ಯರ್ ಅಧಿಕಾರ ವಹಿಸಿಕೊಂಡರು.

ಪ್ರಸ್ತುತ ತುಮಕೂರು ಜಿಲ್ಲಾಡಳಿತದ ಕೇಂದ್ರಸ್ಥಳವಾಗಿದ್ದು ಜಿಲ್ಲಾಧಿಕಾರಿಗಳು ಅಧಿಕಾರದ ಕೇಂದ್ರವಾಗಿದ್ದಾರೆ. 11 ವಿಧಾನಸಭಾ ಕ್ಷೇತ್ರಗಳು, 3 ಲೋಕಸಭಾ ಕ್ಷೇತ್ರ ಹಾಗೂ 57 ಜಿಲ್ಲಾ ಪಂಚಾಯ್ತಿ ಕ್ಷೇತ್ರಗಳು ಇದ್ದು ಜಿಲ್ಲಾ ಪಂಚಾಯ್ತಿ ಕೇಂದ್ರ ತುಮಕೂರು ನಗರದಲ್ಲಿದೆ. ತುಮಕೂರು ಜಿಲ್ಲೆ ಶಿಕ್ಷಣ, ಸಾರಿಗೆ, ಆರೋಗ್ಯ, ಕೃಷಿ, ನೀರಾವರಿ, ಕೈಗಾರಿಕೆ ಈ ಮೊದಲಾದ ಇಲಾಖೆಗಳ ಉಸ್ತುವಾರಿಯನ್ನು ಜಿಲ್ಲಾ ಪಂಚಾಯ್ತಿ ನಿರ್ವಹಿಸುತ್ತದೆ. ಜೊತೆಗೆ ತುಮಕೂರು ಜಿಲ್ಲೆಯ ಹತ್ತು ತಾಲ್ಲೂಕು ಕೇಂದ್ರಗಳಲ್ಲೂ ತಾಲ್ಲೂಕು ಪಂಚಾಯ್ತಿ ಕಾರ್ಯಾಲಯವಿದ್ದು ಸ್ಥಳೀಯ ಆಡಳಿತ ನಿರ್ವಹಣೆ ಮಾಡುತ್ತದೆ. ಇವುಗಳಿಗೆ ಗ್ರಾಮ ಪಂಚಾಯ್ತಿ ಕೇಂದ್ರ ಗ್ರಾಮೀಣ ಪ್ರದೇಶದಲ್ಲಿದ್ದು, ಗ್ರಾಮ ಪಂಚಾಯ್ತಿ ಅಧ್ಯಕ್ಷ ಆಡಳಿತದ ಮೊದಲ ಹಂತದ ನಿರ್ವಹಣೆ ಮಾಡುತ್ತಾನೆ. ಈತನಿಗೆ ಆಡಳಿತಾತ್ಮಕ ಸಹಾಯಕನಾಗಿ ಪಿಡಿಓ ಹುದ್ದೆಯ ಅಧಿಕಾರಿ ಹಣಕಾಸಿನ ನಿರ್ವಹಣೆ ಮಾಡುತ್ತಾನೆ. ತುಮಕೂರು ಜಿಲ್ಲೆಯಲ್ಲಿ 310 ಗ್ರಾಮ ಪಂಚಾಯ್ತಿ ಕೇಂದ್ರಗಳಿವೆ. ತುಮಕೂರು ಮಹಾನಗರ ಪಾಲಿಕೆಯ ಸ್ಥಾನ ಪಡೆದಿದ್ದು ಜಿಲ್ಲೆಯಲ್ಲಿ ಸಿರಾ, ತಿಪಟೂರು ಎರಡು ನಗರ ಪಾಲಿಕೆಗಳಾಗಿವೆ. 4 ಪುರಸಭೆಗಳಿವೆ, 3 ಪಟ್ಟಣ ಪಂಚಾಯ್ತಿಗಳಿವೆ. ಚಿಕ್ಕನಾಯಕನಹಳ್ಳಿ, ಕುಣಿಗಲ್, ಮಧುಗಿರಿ ಮತ್ತು ಪಾವಗಡ ಮುನಿಸಿಪಲ್ ನಗರಗಳ ಸ್ಥಾನಮಾನ ಹೊಂದಿದ್ದರೆ ಗುಬ್ಬಿ, ಕೊರಟಗೆರೆ ಮತ್ತು ತುರುವೇಕೆರೆ ಪಟ್ಟಣ ಪಂಚಾಯ್ತಿಗಳಾಗಿವೆ.

**ಆಡಳಿತ ವಿಭಾಗಗಳು:**

| | **ತಾಲ್ಲೂಕುಗಳು** | **ಹೋಬಳಿಗಳ ಸಂಖ್ಯೆ** |
|---|---|---|
| ತುಮಕೂರು ವಿಭಾಗ | ಗುಬ್ಬಿ | 6 |
| | ಕುಣಿಗಲ್ | 6 |
| | ತುಮಕೂರು | 6 |
| ತಿಪಟೂರು ವಿಭಾಗ | ತಿಪಟೂರು | 4 |
| | ತುರುವೇಕೆರೆ | 4 |

| | | |
|---|---|---|
| | ಚಿಕ್ಕನಾಯಕನಹಳ್ಳಿ | 5 |
| ಮಧುಗಿರಿ ವಿಭಾಗ | ಕೊರಟಗೆರೆ | 4 |
| | ಮಧುಗಿರಿ | 6 |
| | ಪಾವಗಡ | 4 |
| | ಸಿರಾ | 5 |

ಪ್ರತಿ ವಿಭಾಗಗಳಲ್ಲೂ ಅಸಿಸ್ಟೆಂಟ್ ಕಮೀಷನರ್ ಆಡಳಿತಾಂಗದ ಮುಖ್ಯಸ್ಥರಾಗಿದ್ದು ತಹಸೀಲ್ದಾರರು ಅವರ ಕೆಳಗೆ ಕಂದಾಯಹ ನೀರೀಕ್ಷಕ ಗೆಜೆಟೆಡ್ ಹುದ್ದೆಯ ಅಧಿಕಾರಿ ಇರುತ್ತಾರೆ.

## ಸಾಮಾಜಿಕ ರಚನೆ:

ತುಮಕೂರು ಜಿಲ್ಲೆಯಲ್ಲಿ ಹಿಂದೂ, ಇಸ್ಲಾಂ, ಕ್ರೈಸ್ತ, ಜೈನ ಧರ್ಮೀಯರು ನೆಲೆಸಿದ್ದಾರೆ. ಹಿಂದೂ ಧರ್ಮೀಯರು ತುಮಕೂರು ಜಿಲ್ಲೆಯಾದ್ಯಂತ ನೆಲೆಸಿದ್ದು ಉಳಿದ ಇಸ್ಲಾಂ, ಕ್ರೈಸ್ತ ಹಾಗೂ ಜೈನ ಧರ್ಮೀಯರು ತಾಲ್ಲೂಕು ಹಾಗೂ ಜಿಲ್ಲಾ ಕೇಂದ್ರಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ನೆಲೆಸಿರುವುದನ್ನು ಕಾಣಬಹುದು. ಹಿಂದೂ ಧರ್ಮೀಯ ಜನಾಂಗಗಳು ಹೀಗಿವೆ: ಅಗಸರು, ಅರಸು ಕುಲದವರು, ಬಲಜಿಗ, ಬಂಜಾರ (ಲಂಬಾಣಿ), ನಾಯಕ (ವಾಲ್ಮೀಕಿ), ಬ್ರಾಹ್ಮಣರು, ಜಾಟರು, ದರ್ಜಿ, ದೇವಾಂಗ, ದೊಂಬರು, ಬೆಸ್ತರು, ಗಾಣಿಗ, ಗೋಸಾವಿಗಳು, ವಡ್ಡರು, ಈಡಿಗರು, ಜೋಗಿ, ಕೊರಚರು, ಕೊರಮರು, ಕುಂಬಾರರು, ಕುರುಬರು, ಲಾಡರು, ಲಿಂಗಾಯಿತರು, ಮರಾಠರು, ಮೇದರು, ಮೊದಲಿಯಾರರು, ನಟುವರು, ನಾಯರ್‌ಗಳು, ನಾಯಿಂದರು, ಮಗ್ಗದ ಶೆಟ್ಟರು, ರಜಪೂತ, ಸಿಳ್ಳೇಕ್ಯಾತರು, ತಿಗಳರು, ಉಪ್ಪಾರರು, ವೈಶ್ಯರು, ವಿಶ್ವಕರ್ಮ, ಬೋವಿಗಳು, ಒಕ್ಕಲಿಗರು, ಕುಂಚಿಟಿಗರು, ಗೊಲ್ಲರು, ದೊಂಬಿದಾಸರು, ಆದಿ ಆಂಧ್ರರು, ಆದಿದ್ರಾವಿಡರು, ಆದಿಕರ್ನಾಟಕ (ಹೊಲೆಯರು, ಮಾದಿಗರು), ದಕ್ಕಲಿಗ, ಗಂಟಿಕೋರರು, ಹಂದಿಜೋಗಿಗಳು, ಮೋಚಿಗರು (ಮುಚ್ಚಿಗರು), ಇರುಳಿಗರು, ಗುಜರಾತಿಗಳು, ಮಾರ್ವಾಡಿಗಳು, ರಾಜಸ್ತಾನಿ ಎಂದು ಕರೆಯಲ್ಪಡುವ ಜನಾಂಗಗಳು ತುಮಕೂರು ಜಿಲ್ಲೆಯಲ್ಲಿ ನೆಲೆಸಿದ್ದಾರೆ. ಇಸ್ಲಾಂ ಧರ್ಮದಲ್ಲಿ ಮುಸ್ಲಿಮರು, ಪರದೇಶಿ, ಫಕೀರರು, ಪಿಂಜಾರರು ಕಂಡುಬಂದರೆ ಒಟ್ಟರ್ಥದಲ್ಲಿ ಇವರೆಲ್ಲರೂ ಮುಸ್ಲಿಂ ಎಂದೇ ಕರೆದುಕೊಳ್ಳುತ್ತಾರೆ. ಮುಸ್ಲಿಮರಲ್ಲಿ ಪಿಂಜಾರರು ಗ್ರಾಮಾಂತರ ಪ್ರದೇಶಗಳಲ್ಲಿ ನೆಲೆಸಿದ್ದಾರೆ. ಫಕೀರರು, ಪರದೇಶಿ ಮುಸಲ್ಮಾನರು ನಗರ ಹಾಗೂ ಪಟ್ಟಣಗಳಲ್ಲಿ ಸಮಾನವಾಗಿ ಕಂಡುಬರುತ್ತಾರೆ. ಸಿಕ್ಖರು ವ್ಯಾಪಾರಿ ಮತ್ತು ನೌಕರರಾಗಿದ್ದು ಜಿಲ್ಲೆ ಹಾಗೂ ತಾಲ್ಲೂಕು ಕೇಂದ್ರಗಳಲ್ಲಿ ಮಾತ್ರ ನೆಲೆಸಿರುವುದು ಕಂಡುಬರುತ್ತದೆ. ರಜಪೂತರು ವ್ಯಾಪಾರಿಗಳು, ನೌಕರರು ಹಾಗೂ ಉದ್ದಿಮೆ ಕ್ಷೇತ್ರಗಳಲ್ಲಿ ಮಾತ್ರ ಕಂಡುಬರುತ್ತಾರೆ. ತುಮಕೂರು, ಸಿರಾ, ಕುಣಿಗಲ್, ತಿಪಟೂರು ಇಲ್ಲಿ ರಜಪೂತರು ಹೆಚ್ಚಿನ ಸಂಖ್ಯೆಯಲ್ಲಿ ನೆಲೆಸಿದ್ದಾರೆ. ಕ್ರೈಸ್ತರು ಶೈಕ್ಷಣಿಕ, ಉದ್ದಿಮೆ, ಉದ್ಯೋಗ ಹಾಗೂ ಮಾರ್ಕೆಟಿಂಗ್ ಕ್ಷೇತ್ರಗಳಲ್ಲೂ ತನ್ನನ್ನು ತೊಡಗಿಸಿಕೊಂಡು ತುಮಕೂರು ಜಿಲ್ಲೆಯಾದ್ಯಂತ ನೆಲೆಸಿದ್ದಾರೆ. 1836 ರಿಂದ ಕ್ರೈಸ್ತ ಮಿಷನರಿಗಳ ಆಶ್ರಯದಲ್ಲಿ ವಿದ್ಯಾ ಪ್ರಸಾರ ಕಾರ್ಯದಲ್ಲಿ ಕ್ರೈಸ್ತರು ನಿರತವಾಗಿದ್ದಾರೆ. ತುಮಕೂರು, ಸಿರಾ, ತಿಪಟೂರು, ಕುಣಿಗಲ್, ಗುಬ್ಬಿ ಇಲ್ಲೆಲ್ಲಾ ಚರ್ಚ್ ಶಾಲೆಗಳಿದ್ದು ಶೈಕ್ಷಣಿಕವಾಗಿ ಮಹತ್ವದ ಕೊಡುಗೆ ನೀಡುತ್ತಿದ್ದಾರೆ. ವ್ಯಾಪಾರಿ ಮನೋಭೂಮಿಕೆಯ ವೈಶ್ಯರು ತುಮಕೂರು ಜಿಲ್ಲಾ ಕೇಂದ್ರವೂ ಸೇರಿದಂತೆ ಮಧುಗಿರಿ, ಸಿರಾ, ಪಾವಗಡ, ಕೊರಟಗೆರೆ, ತಿಪಟೂರು, ಕುಣಿಗಲ್‌ನಲ್ಲಿ ಅಧಿಕವಾಗಿ ನೆಲೆಸಿದ್ದಾರೆ. ತೆಲುಗು ಮತ್ತು ಕನ್ನಡ ಎರಡೂ ಭಾಷೆಯನ್ನು ಆಡುತ್ತಾರೆ. ಕನ್ನಿಕಾ ಪರಮೇಶ್ವರಿ ಉಪಾಸಕರಾಗಿದ್ದಾರೆ. ಮರಾಠರು ಮೂಲತಃ ಮಹಾರಾಷ್ಟ್ರ ಮೂಲದವರು. ಇವರು ತಮ್ಮನ್ನು ಭಾವಸಾರ ಕ್ಷತ್ರಿಯರೆಂದೂ ಕರೆದುಕೊಳ್ಳುತ್ತಾರೆ. ದರ್ಜಿ, ಬಾಂಬೋರೆ, ಐವಾರ್ ಎಂದು ಕರೆದುಕೊಳ್ಳುತ್ತಾರೆ. ಪಾಂಡುರಂಗ, ವಿಠಲನಾಥ ದೇವಾಲಯಗಳನ್ನು ಇವರು ನಿರ್ಮಿಸಿದ್ದಾರೆ. ಜಿಲ್ಲೆಯ ಎಲ್ಲ ತಾಲ್ಲೂಕು ಹಾಗೂ ಗ್ರಾಮಾಂತರ ಪ್ರದೇಶಗಳಲ್ಲೂ ಮರಾಠಿಗರು ನೆಲೆಸಿದ್ದಾರೆ. ಕೃಷಿಕರೂ ಆಗಿರುವುದು ವಿಶೇಷ. ತುಮಕೂರು ಜಿಲ್ಲೆಯ ನಾಲ್ಕು ಮರಾಠಿಗರ ಪಾಳ್ಯಗಳಿವೆ. ಅಲ್ಪಸಂಖ್ಯಾತರೆಂದರೇ ಕರೆಸಿಕೊಂಡಿರುವ ಜೈನರು ಮೂಲತಃ ವ್ಯಾಪಾರಿ ಸಂಪ್ರದಾಯದಿಂದ ಬಂದವರು. ಇವರಲ್ಲಿ ದಿಗಂಬರ ಜೈನರು, ಶ್ವೇತಾಂಬರ ಜೈನರು ಎಂಬ ಎರಡು ವರ್ಗವಿದ್ದು ಮಹಾವೀರ, ಪಾರ್ಶ್ವನಾಥ, ಕುಂತುನಾಥ, ತೀರ್ಥಂಕರರ ಆರಾಧಕರಾಗಿದ್ದಾರೆ. ತುಮಕೂರು, ಮಧುಗಿರಿ, ಗುಬ್ಬಿ ಅಧಿಕವಾಗಿಯೂ ಕುಣಿಗಲ್, ತಿಪಟೂರು, ಕೊರಟಗೆರೆ, ಗುಬ್ಬಿ ತಾಲ್ಲೂಕಿನ ಬಿದರೆ, ಮಧುಗಿರಿ, ಮಿಡಿಗೇಶಿ ಇಲ್ಲಿ ಜೈನರು ಅಧಿಕವಾಗಿ ನೆಲೆಸಿ ಕೃಷಿ, ವ್ಯಾಪಾರಿ ಕ್ಷೇತ್ರಗಳಲ್ಲಿ ಸಕ್ರಿಯವಾಗಿದ್ದಾರೆ. ಸ್ಥಳೀಯ ರಾಜಕಾರಣ ಸಮಾಜಸೇವಾ ಕಾರ್ಯದಲ್ಲಿಯೂ ತೊಡಗಿಸಿಕೊಂಡಿರುವುದು ಇವರ ವಿಶೇಷವಾಗಿದೆ. ಬೌದ್ಧ ಧರ್ಮೀಯರು ತುಮಕೂರು ಜಿಲ್ಲೆಯಲ್ಲಿ ನೆಲೆಸಿಲ್ಲವಾದರೂ ಉದ್ಯೋಗ, ಶಿಕ್ಷಣ ಈ ಸಂಬಂಧಿ ಹೊರಗಡೆಯಿಂದ ಬಂದು ನೆಲೆಸಿದವರಿದ್ದಾರೆ. ತುಮಕೂರು ಜಿಲ್ಲೆಯ ಕೆಲವರು ಬೌದ್ಧ ಧರ್ಮ ಅವಲಂಬಿತರಾದವರೂ ಇದ್ದಾರೆ. ತುಮಕೂರಿನ

ಗೆದ್ದಲಹಳ್ಳಿಯಲ್ಲಿ ಒಂದು ಬೌದ್ಧ ವಿಹಾರ ಪುಟ್ಟದಾಗಿದೆ. ತುಮಕೂರಿನ ಸಿದ್ಧಾರ್ಥ ನಗರದಲ್ಲಿ ಸಿದ್ಧಾರ್ಥ ಶಿಕ್ಷಣ ಸಂಸ್ಥೆಯವರು ಬೌದ್ಧ ಧಾರ್ಮಿಕ ವಾತಾವರಣವನ್ನು ಮೂಡಿಸಿದ್ದಾರೆ. ಸಿದ್ಧಗಂಗೆ, ಸೀಬಿ, ಗುಬ್ಬಿ, ಯಡೆಯೂರು, ಗೊರವನಹಳ್ಳಿ, ಸಿದ್ಧರಬೆಟ್ಟ, ಕೈದಾಳ, ದೇವರಾಯನದುರ್ಗ, ಗೂಳೂರು, ಗೋಡೆಕೆರೆ, ಪಟ್ಟನಾಯಕನಹಳ್ಳಿ, ಕಳುವರಹಳ್ಳಿ, ಅರಳಗುಪ್ಪೆ, ಕೆರೆಗೋಡಿ ಇವು ಜಿಲ್ಲಾ ಹೆಸರಾಂತ ಪ್ರವಾಸಿ ತಾಣ, ಧಾರ್ಮಿಕ ನೆಲೆಯಾಗಿವೆ.

## ತುಮಕೂರು ಜಿಲ್ಲೆ ಸಾಹಿತ್ಯ ಪರಂಪರೆ:

ತುಮಕೂರು ಜಿಲ್ಲಾ ಸಾಹಿತ್ಯ ಪರಂಪರೆ ಆರಂಭವಾಗುವುದು ಮಧ್ಯಕಾಲೀನ ಯುಗದಿಂದ. ವಿಶೇಷವಾಗಿ ವೀರಶೈವ ಸಾಹಿತ್ಯದ ಕೃಷಿ ಆರಂಭಿಕ ಹಂತದಲ್ಲಿ ವ್ಯಾಪಕವಾಗಿದೆ. ಗುಬ್ಬಿಯ ಮಲ್ಲಣಾರ್ಯ, ತೋಂಟದ ಸಿದ್ಧಲಿಂಗ ಯತಿ, ಮಲ್ಲಿಕಾರ್ಜುನ ಕವಿ, ತೋವಿನಕೆರೆಯ ಚಂದ್ರಸಾಗರವರ್ಣಿ ಹೀಗೆ ಆಧುನಿಕ ಪೂರ್ವದಲ್ಲಿ 80 ಜನ ಕವಿಗಳು ಸಾಹಿತ್ಯ ಚರಿತ್ರೆಗಳಲ್ಲಿ ದಾಖಲಾಗಿದ್ದಾರೆ. ಪುರದ ನಾಗಣ್ಣ ಅಮರಗೊಂಡ ಮಲ್ಲಿಕಾರ್ಜುನ, ಗೋಸಲ ಚನ್ನಬಸವೇಶ್ವರ, ಸಾಸಲ ಚಿಕ್ಕಣಾರಾಧ್ಯ, ಕಾಳಿಕಾಂತ ಚನ್ನವೀರ, ಶೂನ್ಯ ಸಂಪಾದನೆಯ ಗೂಳೂರು ಸಿದ್ಧವೀರಣ್ಣೊಡೆಯರು, ಕೆಸ್ತೂರದೇವ, ಗರಣಿಯ ಬಸವಲಿಂಗ, ಬಿಜವರದ ಕವಿ ಪವಾಡ, ಹಾಗಲವಾಡಿ ಮುದ್ದವೀರಸ್ವಾಮಿ, ಹೆಬ್ಬೂರಿನ ಹೇರಂಬ ಕವಿ, ಸೋಮನಕಟ್ಟೆ ಚನ್ನವೀರಸ್ವಾಮಿ, ಕವಿ ಬೊಮ್ಮಣ್ಣ, ನಿಡುಗಲ್ ಚನ್ನಪ್ಪ, ತೋವಿನಕೆರೆ ರಾಯಣ್ಣ, ಚಿಕ್ಕನಾಯಕನಹಳ್ಳಿ ತಿಮ್ಮಪ್ಪದಾಸ, ತುರುವೇಕೆರೆಯ ಬೇಟೆರಾಯ ದೀಕ್ಷಿತ, ಹೊಸಕೆರೆ ಚಿದಂಬರಯ್ಯ, ಕಡಬದ ಅನಂತರಾಮದಾಸ, ಮಧುಗಿರಿಯ ನಂಜುಂಡದಾಸ ಈ ಬಗೆಯ ಪ್ರಾಚೀನ ಕವಿಗಳು ಶರಣ, ದಾಸ ಹಾಗೂ ಜೈನ ಸಂಸ್ಕೃತಿ ಕುರಿತು ಮೌಲ್ಯಯುಕ್ತ ಕೃತಿಗಳನ್ನು ರಚಿಸಿದ್ದಾರೆ. 20ನೇ ಶತಮಾನದದಲ್ಲೂ ಆಚಾರ್ಯ ಬಿ.ಎಂ. ಶ್ರೀಕಂಠಯ್ಯ, ಡಿ.ಎಲ್. ನರಸಿಂಹಾಚಾರ್, ತೀ.ನಂ. ಶ್ರೀಕಂಠಯ್ಯ, ಬಿ. ಶಿವಮೂರ್ತಿ ಶಾಸ್ತ್ರಿ, ಬೆಳ್ಳಾವಿ ನರಹರಿಶಾಸ್ತ್ರಿ, ಬೆಳ್ಳಾವಿ ವೆಂಕಟನಾರಾಯಣಪ್ಪ, ಕೆ.ರಾಘವಾಚಾರ್ ಈ ಮೊದಲಾದ ಹಿರಿಯ ಲೇಖಕರು ತುಮಕೂರು ಜಿಲ್ಲೆಯ ಅಂತಃಸತ್ವವನ್ನು ಸಾಂಸ್ಕೃತಿಕ ಮೌಲ್ಯವನ್ನು ದಾಖಲಿಸಿದ ಪ್ರಾತಃಸ್ಮರಣೀಯರು.

ಸಮಕಾಲೀನ ಸಂದರ್ಭದಲ್ಲಿ ಸಾ.ಶಿ. ಮರುಳಯ್ಯ, ಬಿ.ಎಂ.ಚಂದ್ರಯ್ಯ, ಎಸ್.ಜಿ. ಸಣ್ಣಗುಡ್ಡಯ್ಯ, ಪ್ರಧಾನ ಗುರುದತ್ತ, ಜಿ.ಬ್ರಹ್ಮಪ್ಪ, ಡಾ॥ ಪಿ.ವಿ. ನಾರಾಯಣ, ತಿರುಮಲೆ ರಾಜಮ್ಮ, ಸಾಯಿಸುತೆ, ಕಮಲಾ ಹಂಪನಾ, ಟಿ.ಸುನಂದಮ್ಮ, ಬರಗೂರು ರಾಮಚಂದ್ರಪ್ಪ, ಕೆ.ಬಿ. ಸಿದ್ದಯ್ಯ, ವೀಚಿ, ಕೆ.ಜಿ. ನಾಗರಾಜಪ್ಪ, ಹೆಚ್.ಎಸ್. ಶಿವಪ್ರಕಾಶ್, ಟಿ.ಎಸ್. ನಾಗರಾಜಶೆಟ್ಟಿ, ಕವಿತಾಕೃಷ್ಣ, ನಿಟ್ಟೂರು ಶ್ರೀನಿವಾಸರಾವ್, ದೊಡ್ಡರಂಗೇಗೌಡ, ಎಸ್.ಜಿ. ಸಿದ್ದರಾಮಯ್ಯ, ಅಗ್ರಹಾರ ಕೃಷ್ಣಮೂರ್ತಿ, ಹಿಚಿ. ಬೋರಲಿಂಗಯ್ಯ, ನೀಲತ್ತಹಳ್ಳಿ ಕಸ್ತೂರಿ, ಡಿ.ಕೆ. ರಾಜೇಂದ್ರ, ಮಂಗಳಾ ಪ್ರಿಯದರ್ಶಿನಿ, ವಿಶಾಲಾಕ್ಷಿ, ದಕ್ಷಿಣಾಮೂರ್ತಿ, ಹಿ.ಚಿ. ಶಾಂತವೀರಯ್ಯ, ಟಿ.ಆರ್. ಮಹದೇವಯ್ಯ, ಕರಿಸ್ವಾಮಿ, ಜಿ. ಇಂದ್ರಕುಮಾರ್, ಉಗಮ ಶ್ರೀನಿವಾಸ್, ಬಾ.ಹ. ರಮಾಕುಮಾರಿ, ನಟರಾಜ್ ಬೂದಾಳ್, ಜಿ.ವಿ. ಆನಂದಮೂರ್ತಿ, ಚಿಕ್ಕಣ್ಣ ಯಣ್ಣೆಕಟ್ಟೆ, ಎನ್.ಕೆ. ಹನುಮಂತಯ್ಯ, ಚಿತ್ರಯ್ಯ ಪೂಜಾರ್, ಈಚನೂರು ಜಯಲಕ್ಷ್ಮಿ, ಬ್ಯಾಡನೂರು ನಾಗಭೂಷಣ, ಜಿ.ಆರ್. ತಿಪ್ಪೇಸ್ವಾಮಿ, ಟಿ.ಆರ್. ಸುಬ್ಬರಾವ್, ಡಿ.ಎನ್. ಯೋಗೀಶ್ವರಪ್ಪ, ಶ್ರೀನಿವಾಸಮೂರ್ತಿ, ಹೆಚ್.ವಿ. ಕಾವಲಮ್ಮ, ಹುಳಿಯಾರು ನಟರಾಜ್, ಬಿಳಿಗೆರೆ ಕೃಷ್ಣಮೂರ್ತಿ, ಎಂ.ವಿ. ನಾಗರಾಜರಾವ್, ಹೊಲತಾಳ ಸಿದ್ಧಗಂಗಯ್ಯ, ಕರೀಗೌಡ ಬೀಚನಹಳ್ಳಿ, ಕೆ.ಭೈರಪ್ಪ, ಓ.ನಾಗರಾಜ್, ವಡ್ಡಗೆರೆ ನಾಗರಾಜಯ್ಯ, ಬಿ.ನಂಜುಂಡಸ್ವಾಮಿ, ಸಿ.ನಾಗಭೂಷಣ, ಮ.ಲ. ನರಸಿಂಹ ಮೂರ್ತಿ, ಡಿ.ವಿ.ಪರಮಶಿವಮೂರ್ತಿ, ಎಂ.ಪಿ. ಶಂಕರಪ್ಪ, ಸೋ.ಮು.ಭಾಸ್ಕರಾಚಾರ್, ಎನ್.ನಂದೀಶ್, ನಿರಂಜನಾರಾಧ್ಯ, ಟಿ.ಆರ್. ಅನಂತರಾಮು, ಸಿರಾ ಎಲ್.ರಂಗನಾಥ್, ವಿಜಯ ಮೋಹನ್, ಶೈಲಾ ನಾಗರಾಜ್, ಲಲಿತಾ ಸಿದ್ಧಬಸವಯ್ಯ, ಟಿ.ಆರ್. ಷಡಕ್ಷರಿ, ಗೌಡನಕಟ್ಟೆ ತಿಮ್ಮಯ್ಯ, ಡಿ.ಭರತ್, ದೊಡ್ಡರಂಗೇಗೌಡ, ಎನ್.ಶಿವರಾಮಯ್ಯ, ಎನ್.ಪಂಕಜ ಈ ಮೊದಲಾದ ಸಮಕಾಲೀನ ಲೇಖಕರು ತುಮಕೂರು ಜಿಲ್ಲೆಯ ಸಾಹಿತ್ಯ ವಲಯಗಳಲ್ಲಿ ಮಹತ್ತರವಾದ ಕೃತಿಗಳಿಂದ ಪ್ರಸಿದ್ಧರಾಗಿದ್ದಾರೆ. ಅಂತೆಯೇ ಬುಕ್ಕಾಪಟ್ಟಣ ವಾಸು, ದಂಡಿನಶಿವರದ ಶೇಷಾದ್ರಿ, ಬ್ಯಾಲದಕೆರೆ ಲಿಂಗದೇವರು, ಕುಣಿಗಲ್ ನಾಗಭೂಷಣ, ತಿಪಟೂರು ರಘು, ಕರಿಬಸವಯ್ಯ ಇವರು ಚಲನಚಿತ್ರ ಧಾರವಾಹಿಗಳ ಕತೆ, ಚಿತ್ರಕಥೆ, ಸಾಹಿತ್ಯ, ಸಂಭಾಷಣೆಗಳಿಂದ ಹೆಸರಾದವರು. ಹಾಗೆಯೇ ಜಾನಪದ ಸಂಗ್ರಹ, ಬುಡಕಟ್ಟು ಅಧ್ಯಯನ ಕ್ಷೇತ್ರದಲ್ಲಿ ರಾಷ್ಟ್ರೀಯ ಮಟ್ಟದಲ್ಲಿ ಹೆಸರು ಮಾಡಿರುವ ತೀರ್ಥಪುರ ಶಂಕರನಾರಾಯಣ, ತುಮಕೂರು ಜಿಲ್ಲೆಯವರೆಂಬುದು ಹೆಮ್ಮೆಯ ಸಂಗತಿ.

## ಕಲೆ:

ತುಮಕೂರು ಜಿಲ್ಲೆ ಕಲೆ, ಸಾಹಿತ್ಯ, ಸಂಸ್ಕೃತಿಗಳ ಆಗರ. ವೀರಜುಂಜಪ್ಪ ಈ ಜಿಲ್ಲೆಯ ಬಹುದೊಡ್ಡ ಸಾಂಸ್ಕೃತಿಕ ವೀರ. ಈತನನ್ನು ಕುರಿತು ಮೌಖಿಕ ಪರಂಪರೆಯಲ್ಲಿ ಒಂದು ಸಾವಿರ ಪುಟಗಳಿಗೂ ಮಿಕ್ಕ ವಾಙ್ಮಯವಿದೆ. ಚೆಲುವರಾಜು, ಡಾ.ಚಿಕ್ಕಣ್ಣ ಯಣ್ಣೆಕಟ್ಟೆ ಹಾಗೂ

ತೀ.ನಂ. ಶಂಕರನಾರಾಯಣ ಕಾವ್ಯ, ಗದ್ಯ ಸಂಗ್ರಹ ಮಾಡಿ ಪ್ರಕಟಿಸಿದ್ದಾರೆ. ಇವು ವಿವಿಧ ವಿಶ್ವವಿದ್ಯಾಲಯಗಳಲ್ಲಿ ಪಠ್ಯಪುಸ್ತಕಗಳಾಗಿಯೂ ಬಳಕೆಯಾಗುತ್ತಿವೆ. ಜನಪದ ಕಲೆಗಳಾದ ಸೋಮನ ಕುಣಿತ, ವೀರಗಾಸೆ, ಗಣೆ ಹಾಡುಗಾರಿಕೆ, ಕೋಲಾಟ, ಚಿಟ್‌ಮೇಳ, ಯಕ್ಷಗಾನ, ನಗಾರಿ, ತಮಟೆ, ಅರೆವಾದ್ಯ, ಮುಖವೀಣೆ, ನಂದಿಧ್ವಜ, ಕಹಳೆ, ಚೌಡಿಕೆ, ಗೊರವರ ಕುಣಿತ ಈ ಬಗೆಯ ಜನಪದ ಕಲೆ–ಕಲಾವಿದರ ಆಗರವಾಗಿದೆ. ಸೋಮನ ಕಲೆಯಿಂದಾಗಿ ದೇಶ–ವಿದೇಶ ತಿರುಗಿದ ದಂಡಿನಶಿವರದ ಮೀಸೆ ಲಕ್ಕಣ್ಣ, ದೊಡ್ಡೇನಹಳ್ಳಿ ಕೆಂಪಪಾಜು, ಡಿ.ಎಸ್. ಗಂಗಾಧರಗೌಡ, ಕೋಲಾಟದ ಕೋಡಿಪಾಳ್ಯದ ದೊಡ್ಡಮಲ್ಲಯ್ಯ, ಪಾವಗಡದ ಖಡ್ಗ ಶಂಕರಪ್ಪ ತಂಡ, ಬ್ಯಾಡನಕಟ್ಟೆ ಬುಕ್ಕಯ್ಯ, ಮಲ್ಲಯ್ಯ, ಕೋಡಯ್ಯ, ಚಿಟ್ ಮೇಳದ ಮಾದೇನಹಳ್ಳಿ ಮಹಾಲಿಂಗಪ್ಪ, ವೀರಗಾಸೆ ಚಿಕ್ಕನಹಳ್ಳಿ ವೀರಣ್ಣ, ಪತ್ರೆಮತಿಘಟ್ಟದ ರಾಜಶೇಖರ್, ತುಮಕೂರಿನ ನೀಲಕಂಠಯ್ಯ, ಗಣೆ ಕಲೆಯ ಬೇವಿನಹಳ್ಳಿ ತಿಮ್ಮಣ್ಣ, ದಾಸರಹಳ್ಳಿ ದಾಸಪ್ಪ, ಮಾಡಗಾನಹಟ್ಟಿ ದಾಸಪ್ಪ, ಲಕ್ಕವ್ವನಹಳ್ಳಿ ನಿಂಗಜ್ಜ, ಚೇಳೂರು ದಿಬ್ಬದಹಳ್ಳಿ, ಕದರಯ್ಯ ಕಲ್ಲುಬೀರಯ್ಯ, ಹಾವಿನ ಚಿಕ್ಕಣ್ಣ, ಎತ್ತಿನಪ್ಪ, ಗೊರವರ ಕುಣಿತದ ಇರಕಸಂದ್ರದ ಬೆಟ್ಟಲಿಂಗಯ್ಯ, ಯಣ್ಣೆಕಟ್ಟೆ ದೊಡ್ಡಗೊರವಯ್ಯ, ಯಲಿಯೂರು ಲಿಂಗಯ್ಯ, ಬೆಳ್ಳಾವಿ ಕರಲುಪಾಳ್ಯದ ಮರಿಲಿಂಗಯ್ಯ ಇವರು ತಮ್ಮ ಕಲಾವಂತಿಕೆ ಸಿದ್ಧಿ ಪ್ರಸಿದ್ಧಿಗಳಿಂದ ರಾಜ್ಯಪ್ರಶಸ್ತಿ ಗೌರವಕ್ಕೆ ಪಾತ್ರರಾದ ಹಿರಿಯ ಕಲಾವಿದರು. ಹಾಗೆಯೇ ಕರಪಾಲಮೇಳದ ಕೊನೆಹಳ್ಳಿ ಬಸಪ್ಪ, ಗಾಣದಾಳ ಬಸವರಾಜು, ಸಿದ್ದಪ್ಪ ಚಲನಚಿತ್ರಗಳಲ್ಲೂ ಕರಪಾಲಮೇಳ ಕಲೆಯನ್ನು ಪ್ರಚಾರ ಮಾಡಿರುವ ಹಿರಿಯ ಕಲಾವಿದರು.

## ರಂಗಭೂಮಿ:

ಮೂಡಲಪಾಯ ಯಕ್ಷಗಾನಕ್ಕೆ ತುಮಕೂರು ಜಿಲ್ಲೆ ತವರು ನೆಲವಿದ್ದಂತೆ. ದಂಡಿನಶಿವರದ ಡಿ.ಕೆ. ರಾಜೇಂದ್ರ ಅವರು ಯಕ್ಷಗಾನ ಕುರಿತು ಡಾಕ್ಟರೇಟ್ ಮಾಡಿದ್ದಾರೆ. ಇಂದಿಗೂ ತಿಪಟೂರು ತಾಲ್ಲೂಕಿನ ಕೊನೆಹಳ್ಳಿ, ಮತ್ತಿಹಳ್ಳಿ, ಅರಳಗುಪ್ಪೆ, ಸಿರಾ ಕಡವಿಗೆರೆ, ಈಡಿಗರ ದಾಸರಹಳ್ಳಿ, ಮಧುಗಿರಿ, ಗುಬ್ಬಿ, ಕೊರಟಗೆರೆ, ಪಾವಗಡ ಈ ಭಾಗಗಳಲ್ಲಿ ಇಂದಿಗೂ ಮೂಡಲಪಾಯ ಯಕ್ಷಗಾನದ ಭಾಗವತರಿದ್ದಾರೆ, ಹಿರಿಯ ಕಲಾವಿದರಿದ್ದಾರೆ. ಕೊನೇಹಳ್ಳಿಯಲ್ಲಿ ಮೂಡಲಪಾಯ ಯಕ್ಷಗಾನದ ರಂಗಮಂದಿರವನ್ನು ಡಾ.ಜಿ.ಶಂ. ಪರಮಶಿವಯ್ಯ, ಹೆಚ್.ಎಲ್. ನಾಗೇಗೌಡರು 1982 ರಲ್ಲಿ ನಿರ್ಮಿಸಿದ್ದಾರೆ. ಅರಳಗುಪ್ಪೆಯಲ್ಲಿ ಮೂರು ಯಕ್ಷಗಾನ ಕಲಾತಂಡವಿದ್ದು ಭಾಗವತ ಕಲ್ಮನೆ ನಂಜಪ್ಪ ಅವರು ಜಾನಪದಶ್ರೀ ಪ್ರಶಸ್ತಿಯನ್ನು ಕರ್ನಾಟಕ ಸರ್ಕಾರದಿಂದ ಪಡೆದಿದ್ದಾರೆ. ಸಿರಾ ತಾಲ್ಲೂಕಿನ ಈಡಿಗರದಾಸರಹಳ್ಳಿಯಲ್ಲಿ ಯಕ್ಷಗಾನ ಕಲೆಯ ತರಬೇತಿ ಶಾಲೆಯಿದೆ. ರಮಾನಂದ ಇವರ ಮಾರ್ಗದರ್ಶನದಲ್ಲಿ ಮೂಡಲಪಾಯ ಯಕ್ಷಗಾನ ಕಲಿಕೆ ಮುಂದುವರಿದಿದೆ.

ತುರುವೇಕೆರೆ ತಾಲ್ಲೂಕು ಮುನಿಯೂರು ದಾಸಾಚಾರ್ ಅವರು ಯಕ್ಷಗಾನ ಕಲಿಕೆಯನ್ನು ಮುಂದುವರಿಸುತ್ತಿದ್ದಾರೆ. ರಂಗಭೂಮಿ, ಸುಗಮ ಸಂಗೀತ ಕ್ಷೇತ್ರದಲ್ಲೂ ತುಮಕೂರು ಹೆಸರುವಾಸಿ. ಡಾ. ಲಕ್ಷ್ಮಣದಾಸ್, ಡಾ.ಜಯಶ್ರೀ ರಂಗಸಂಗೀತಕ್ಕಾಗಿಯೇ ಕೇಂದ್ರ ಸಂಗೀತ ನಾಟಕ ಪ್ರಶಸ್ತಿಗೆ ಪಾತ್ರವಾದರೆ ಟಿ.ವಿ. ರಾಜು ಪ್ರತಿಷ್ಠಿತ ಶಿಶುನಾಳ ಷರೀಫರ ಪ್ರಶಸ್ತಿಗೆ ಪಾತ್ರರಾಗಿದ್ದಾರೆ. ನರಸಿಂಹದಾಸ್ ಮೊದಲಾದ ಹರಿಕಥಾ ವಿದ್ವಾಂಸರು ರಂಗಸಂಬಂಧಿ ಚಟುವಟಿಕೆಯನ್ನು ಮುಂದುವರಿಸುತ್ತಾ ಬರುತ್ತಿದ್ದಾರೆ. ತುಮಕೂರಿನ ಹತ್ತು ತಾಲ್ಲೂಕುಗಳಲ್ಲಿ ಪೌರಾಣಿಕ ನಾಟಕ ಅಭಿನಯ ಕಲಾತಂಡವಿದ್ದು ಕುರುಕ್ಷೇತ್ರ, ರಾಮಾಯಣದ ಹಲವಾರು ವಸ್ತುಗಳನ್ನು ಗುಬ್ಬಿ ವೀರಣ್ಣ ರಂಗಮಂದಿರದಲ್ಲಿ ಹಾಗೂ ಇತರೆಡೆಗಳಲ್ಲಿ ನಿತ್ಯವೂ ಪ್ರದರ್ಶನ ಮಾಡುತ್ತಾ ಬರುತ್ತಿದ್ದಾರೆ.

ಚಲನಚಿತ್ರಕ್ಕೆ ಜಿಲ್ಲೆಯ ಕಾಣಿಕೆ ಮಹತ್ವವಾದುದು. ಗುಬ್ಬಿ ವೀರಣ್ಣ, ನರಸಿಂಹರಾಜು, ಮಾಸ್ಟರ್ ಹಿರಣ್ಣಯ್ಯ, ಕುಣಿಗಲ್ ನಾಗಭೂಷಣ, ಮಧುಗಿರಿ ಶಕ್ತಿಪ್ರಸಾದ್, ಅಭಿನೇತ್ರಿ ಮಂಜುಳಾ, ಉಮಾಶ್ರೀ, ಬಿ.ಜಯಶ್ರೀ ಮರೆಯಬಾರದ ಕಲಾವಂತಿಕೆಯ ಕಲಾವಿದರು. ಕರ್ನಾಟಕ ರಂಗಭೂಮಿಗೆ ಗುಬ್ಬಿ ವೀರಣ್ಣನವರು ಹೊಸ ತಿರುವು ನೀಡಿದವರು. ಶ್ರೀ ಚನ್ನಬಸವೇಶ್ವರ ಕೃಪಾಪೋಷಿತ ನಾಟಕ ಮಂಡಳಿ ಕರ್ನಾಟಕಾಂಧ್ರ ಎರಡೂ ರಾಜ್ಯಗಳಲ್ಲಿ ಜನಪ್ರಿಯತೆ ಪಡೆದ ನಾಟಕ ಕಂಪನಿಯಾಗಿತ್ತು. ಡಾ॥ರಾಜಕುಮಾರ್, ನರಸಿಂಹರಾಜು ಅವರಂತಹ ನೂರಾರು ಅಪ್ರತಿಮ ಕಲಾವಿದರನ್ನು ರೂಪಿಸಿದ ಹಿರಿಮೆ ಗುಬ್ಬಿ ಕಂಪನಿಗಿದೆ. ಇಂದಿಗೂ ಶ್ರೀರಂಗರಂಗ, ಡಮರುಗ, ಜೆಮ್, ನಾಟಕಮನೆ ಈ ಮುಂತಾದ ನಾಟಕ ತಂಡಗಳು ರಂಗಕಲೆಯನ್ನು ಸಮರ್ಥವಾಗಿ ಬೆಳೆಸುವಲ್ಲಿ ಸಕ್ರಿಯವಾಗಿವೆ.

ಸಾಂಸ್ಕೃತಿಕ ಸಂಘ–ಸಂಸ್ಥೆಗಳು ಕಲೆ, ಸಂಸ್ಕೃತಿಯ ಪ್ರಸಾರಕ್ಕೆ ಪೂರಕವಾಗಿ ಕಾರ್ಯನಿರ್ವಹಿಸುತ್ತಿವೆ. ಕನ್ನಡ ಸಾಹಿತ್ಯ ಪರಿಷತ್ತು, ಕರ್ನಾಟಕ ಜಾನಪದ ಪರಿಷತ್ತು, ಕೀರ್ತನಾರಂಗ, ಸಿರಾದ ಗಡಿನಾಡ ಜಾನಪದ ಸಂಪರ್ಕಾಧ್ಯಯನ ಕೇಂದ್ರ, ರಂಗ ಕೀರ್ತನ ಬಳಗ, ಜಿಲ್ಲಾ ಜನಪದ ಬಯಲಾಟ ಕಲಾ ಒಕ್ಕೂಟ, ರಂಗ ಕೇಂದ್ರಗಳು, ಲಲಿತಕಲಾ ಸಂಸ್ಥೆ, ಎಚ್‌ಎಂಟಿ ಇವು ಜಿಲ್ಲೆಯ ಸಾಂಸ್ಕೃತಿಕ ಕ್ಷೇತ್ರದಲ್ಲಿ

ಬಹುಮುಖಿ ನೆಲೆಯಲ್ಲಿ ತೊಡಗಿಸಿಕೊಂಡಿವೆ. ಜಿಲ್ಲಾ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವುಗಳ ಪೋಷಕ ಸ್ಥಾನದಲ್ಲಿ ಕಲೆಗಳ ಪ್ರಸಾರಕ್ಕೆ ಶ್ರಮಿಸುತ್ತಿದೆ.

## ಪತ್ರಿಕೋದ್ಯಮ:

ಪತ್ರಿಕೋದ್ಯಮದಲ್ಲಿಯೂ ತುಮಕೂರು ಮುಂಚೂಣಿಯಲ್ಲಿದೆ. ಸಂಧ್ಯಾ ವಾರಪತ್ರಿಕೆಯಿಂದ ಆರಂಭವಾಗುವ ಇಲ್ಲಿನ ಪತ್ರಿಕೋದ್ಯಮ ಇಂದು ಬೃಹತ್ತಾಗಿ ಬೆಳೆದಿದೆ. ವಿಜಯವಾಣಿ, ಅಮರವಾಣಿ, ಪೌರವಾಣಿ, ಝೀಲ್ ಪತ್ರಿಕೆ, ಅಮರ ಸಂದೇಶ, ತುಮಕೂರು ಟೈಮ್ಸ್, ಏಕೇಶ್ ಪತ್ರಿಕೆ, ತುಮಕೂರು ವಾರ್ತೆ, ಟುಮಕಿ, ಸೊಗಡು, ಪ್ರಜಾಪ್ರಗತಿ, ಗಂಗಾವಾಹಿನಿ, ಅಮೃತವಾಣಿ ಮುಂತಾದ ಪತ್ರಿಕೆಗಳು ಇಂದಿಗೂ ಪ್ರಸಾರ, ಪ್ರಕಟಣೆಯಲ್ಲಿ ಉತ್ತಮ ಪೈಪೋಟಿ ಹಾಗೂ ಸುದ್ದಿ ವಾಹಿನಿಗಳಾಗಿ ತುಮಕೂರು ನ್ಯೂಸ್, ಪ್ರಗತಿ, ಅಮೋಘ ಉತ್ತಮ ಪ್ರಗತಿಯಲ್ಲಿವೆ.

# ಅಭಿವೃದ್ಧಿ

## ಶಿಕ್ಷಣ

ಶಿಕ್ಷಣ ವಿಚಾರದಲ್ಲಿ ತುಮಕೂರು ಜಿಲ್ಲೆ ರಾಜ್ಯದ ಇತರೆ ಜಿಲ್ಲೆಗಳಂತ ಮಹತ್ವದ ಸಾಧನೆ ತೋರುತ್ತಾ ಬಂದಿದೆ. ಆರಂಭದಲ್ಲಿ ಗುರುಕುಲ ಶಿಕ್ಷಣ ಪದ್ಧತಿ, ಮಠಗಳ ಮೂಲಕ ದೊರೆಯುತ್ತಿತ್ತು. ಮಕ್ಕಳು ವೇದಗಳನ್ನು ಕಂಠಪಾಠ ಮಾಡುವ ಪದ್ಧತಿ ಇತ್ತು. ಚತುರ್ವರ್ಣ ಪದ್ಧತಿಯ ವಿದ್ಯಾಭ್ಯಾಸ ರೂಢಿಯಲ್ಲಿತ್ತು. ಈ ಮಾದರಿಯ ಶಿಕ್ಷಣ ಸಂಸ್ಥೆಗಳು ಗುಬ್ಬಿ, ಯಡೆಯೂರು, ಸಿದ್ಧಗಂಗೆ, ಗೂಳೂರು ಮತ್ತು ಸಿರಾ ತಾಲ್ಲೂಕಿನ ಬರಗೂರುಗಳಲ್ಲಿತ್ತು. ಕುಲಮೂಲ ಕರಕುಶಲ ವೃತ್ತಿ ಅನುವಂಶಿಕವಾಗಿ ನಡೆಯುತ್ತಿತ್ತು. ಜಿಲ್ಲೆಯ ಅಗ್ರಹಾರ, ದೇವಾಲಯಗಳು ಘಟಕ ಸ್ಥಳಗಳಾಗಿ ಶಿಕ್ಷಣವನ್ನು ನೀಡುತ್ತಿದ್ದವು. ಮೊದಲಿಗೆ ಮುಸ್ಲಿಮರು ಮಸೀದಿಗಳಲ್ಲಿ ಮದರಸ ಮಾದರಿಯಲ್ಲಿ ಉರ್ದುವಿನ ಭಾಷಾಭ್ಯಾಸವನ್ನು, ಕುರಾನ್ ಬೋಧನೆ, ಕಲಿಕೆಯನ್ನು ಮಾಡುತ್ತಿದ್ದರು. ಧಾರ್ಮಿಕ ಮುಖಂಡರು, ಪುರೋಹಿತರು ಇಲ್ಲಿ ಗುರುಗಳಾಗಿ ಕಲಿಸುತ್ತಿದ್ದರು. ಮರಳನ್ನು ಹರಡಿ ಅದರ ಮೇಲೆ ಕೈ ಬೆರಳಿಂದ ತಿದ್ದುವ ಮೂಲಕ ಅಕ್ಷರಾಭ್ಯಾಸ ಮಾಡಿಸುತ್ತಿದ್ದರು. 1833 ರಿಂದ ಸಾರ್ವತ್ರಿಕ ಶಿಕ್ಷಣ ನೀತಿ ಆರಂಭವಾಯಿತು. ಜಿಲ್ಲೆಯಲ್ಲಿ ಸರ್ಕಾರಿ ಶಾಲೆಗಳು, ಖಾಸಗಿಯವರು ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿದರು. 1833 ರಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರು ಪ್ರಥಮವಾಗಿ ಇಂಗ್ಲೀಷ್ ಶಿಕ್ಷಣ ಶಾಲೆಯನ್ನು ಉಚಿತವಾಗಿ ಸ್ಥಾಪಿಸಿದರು. ನಂತರ ಇದರ ಪ್ರಭಾವ ತುಮಕೂರು ಜಿಲ್ಲೆಯಲ್ಲಿಯೂ ಆರಂಭವಾಯಿತು. 1941 ರಲ್ಲಿ ರೂಢಿಗೆ ಬಂದ ಕರ್ನಾಟಕ ವಿದ್ಯಾಭ್ಯಾಸದ ನಂತರ ತುಮಕೂರು ಜಿಲ್ಲೆಯಲ್ಲಿ ವ್ಯಾಪಕವಾಗಿ ವಿದ್ಯಾ ಸಂಸ್ಥೆಗಳು ಖಾಸಗಿ, ಸರ್ಕಾರದ ವತಿಯಿಂದ ಆರಂಭವಾದವು.

2015 ನೇ ಸರ್ಕಾರದ ವಿವಿಧ ಇಲಾಖೆಗಳ ದಾಖಲೆಯ ಅಂಕಿ ಅಂಶಗಳ ಪ್ರಕಾರ ಈ ಕೆಳಕಂಡಂತೆ ಶಿಕ್ಷಣ ಸಂಸ್ಥೆಗಳಿವೆ:

| **ತಾಲ್ಲೂಕುಗಳು** | **ಕಿರಿಯ ಶಾಲೆ** | **ಹಿರಿಯ ಶಾಲೆ** | **ಪ್ರೌಢ ಶಾಲೆ** | **ಪ.ಪೂ. ಕಾಲೇಜು** | **ಪದವಿ ಕಾಲೇಜು** | **ತಾಂತ್ರಿಕ ವೈದ್ಯ** | **ಇಂಜಿನಿಯರಿಂಗ್** |
|---|---|---|---|---|---|---|---|
| ಚಿಕ್ಕನಾಯಕನಹಳ್ಳಿ | 216 | 141 | 62 | 14 | 2 | – | – |
| ಗುಬ್ಬಿ | 264 | 165 | 68 | 22 | 2 | – | 1 |
| ಕೊರಟಗೆರೆ | 180 | 108 | 43 | 10 | 1 | – | – |
| ಕುಣಿಗಲ್ | 302 | 163 | 68 | 16 | 1 | – | – |
| ಮಧುಗಿರಿ | 226 | 174 | 70 | 16 | 3 | – | – |
| ಪಾವಗಡ | 137 | 144 | 72 | 16 | 2 | – | – |
| ಸಿರಾ | 281 | 205 | 81 | 21 | 2 | – | – |
| ತಿಪಟೂರು | 187 | 132 | 57 | 18 | 2 | – | 1 |
| ತುಮಕೂರು | 310 | 336 | 171 | 65 | 3+1 | 2 | 5 |
| | | | | | | | 1 ಡೆಂಟಲ್ |
| ತುರುವೇಕೆರೆ | 205 | 116 | 56 | 13 | 2 | – | – |
| | **2308** | **1684** | | **748 211** | **21** | **3** | **7** |

ಇದಲ್ಲದೆ ತುಮಕೂರು ಜಿಲ್ಲೆಯಲ್ಲಿ ಖಾಸಗಿ, ಇಂಜಿನಿಯರಿಂಗ್, ಮೆಡಿಕಲ್, ಪದವಿ, ಪದವಿಪೂರ್ವ, ಪ್ರಾಥಮಿಕ, ಮಾಧ್ಯಮಿಕ ಹಾಗೂ ಪ್ರೌಢಶಾಲೆಗಳೂ ಸೇರಿದಂತೆ ಫಾರ್ಮಸಿ, ಡಿಇಡಿ, ಬಿಇಡಿ ಹಾಗೂ ಸಿಪಿಇಡಿ, ಬಿಪಿಇಡಿ, ಡಿಪ್ಲೋಮಾ, ಪಾಲಿಟೆಕ್ನಿಕ್, ಚಿತ್ರಕಲೆ, ಕಂಪ್ಯೂಟರ್ ಶಿಕ್ಷಣ, ಬೆರಳಚ್ಚು ತರಬೇತಿ, ವೃತ್ತಿ ತರಬೇತಿಗಳಾದ ಟೈಲರಿಂಗ್, ತೋಟಗಾರಿಕೆ ಸಂಸ್ಥೆಗಳೂ ಇವೆ.

ಜಿಲ್ಲೆಯ ಪ್ರತಿ ಸರ್ಕಾರಿ ಶಾಲೆಗಳಲ್ಲಿ ಪ್ರಾಥಮಿಕ ಹಂತದಿಂದ ಪ್ರೌಢಶಾಲೆಗಳವರೆಗೆ ಸರ್ಕಾರಿ ಅನುದಾನಿಕ ಶಾಲೆಗಳೂ ಸೇರಿದಂತೆ ಸಮುದಾಯ ಸೌಲಭ್ಯಗಳಾದ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಉಚಿತ ಸಮವಸ್ತ್ರ, ಪಠ್ಯಪುಸ್ತಕಗಳ ಸೌಲಭ್ಯವಿದೆ. ಬೈಸಿಕಲ್ ಸೇವಾ ಸವಲತ್ತುಗಳನ್ನು ಶಿಕ್ಷಣ ಇಲಾಖೆ ಕಲ್ಪಿಸಿದೆ. ತುಮಕೂರು ಜಿಲ್ಲೆಯ ಒಟ್ಟು ಜನಸಂಖ್ಯೆ 1344438 ರಲ್ಲಿ 468953 ಯಷ್ಟು ಜನರು ವಿದ್ಯಾವಂತರಾಗಿದ್ದಾರೆ. 75.14% ರಷ್ಟು ಸಾಕ್ಷರತೆ ಇದೆ. ಒಟ್ಟು 2452 ಅಂಗನವಾಡಿ ಕೇಂದ್ರಗಳಿದ್ದು 159517 ಮಕ್ಕಳು, 4081 ಅಂಗನವಾಡಿ ಶಿಕ್ಷಕಿಯರು 2015 ನೇ ಸಾಲಿನಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಇವುಗಳಲ್ಲಿ 2452 ಸ್ವಂತ ಕಟ್ಟಡ ಹೊಂದಿದ್ದು ಉಳಿದ 1197 ಕೇಂದ್ರಗಳು ಸರ್ಕಾರೇತರ ಕಟ್ಟಡಗಳಲ್ಲಿ ಕಾರ್ಯನಿರ್ವಹಿಸುತ್ತಿವೆ.

ತುಮಕೂರು ತನ್ನದೇ ಹೆಸರಿನ ತುಮಕೂರು ವಿಶ್ವವಿದ್ಯಾನಿಲಯವನ್ನು ಹೊಂದಿದ್ದು ಇದರ ವ್ಯಾಪ್ತಿಯೊಳಗೆ ತುಮಕೂರು ಜಿಲ್ಲೆಯ ಸರ್ಕಾರಿ, ಖಾಸಗಿ, ಅನುದಾನಿತ, ಅನುದಾನರಹಿತ, ಖಾಸಗಿ ಪ್ರಥಮ ದರ್ಜೆ ಕಾಲೇಜು, ಬಿ.ಇಡಿ ಕಾಲೇಜುಗಳ ಸೇವೆ, ತುಮಕೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಕೇಂದ್ರಗಳಾಗಿ ಒಂಬತ್ತು ಕಡೆ, ಸ್ನಾತಕೋತ್ತರ ಪದವಿ ತರಗತಿಗಳನ್ನು ನಡೆಸುತ್ತಿದೆ. ವಿದ್ಯಾರ್ಥಿಗಳ ಶೈಕ್ಷಣಿಕ ಅನುಕೂಲಕ್ಕಾಗಿ ಸರ್ಕಾರದ ಬಿ.ಸಿ.ಎಂ, ಸಮಾಜ ಕಲ್ಯಾಣ ಈ ಎರಡು ಇಲಾಖೆಗಳೂ ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರ ಹಾಗೂ ಆಶ್ರಮ ವಸತಿ ಶಾಲೆ ಎಂಬ ಮೂರು ಹಂತದಲ್ಲಿ ವಿದ್ಯಾರ್ಥಿ ನಿಲಯಗಳನ್ನು ಸ್ಥಾಪಿಸಿ ವಿದ್ಯಾಭ್ಯಾಸಕ್ಕೆ ಅನುಕೂಲ ಮಾಡಿಕೊಟ್ಟಿದೆ. ಒಟ್ಟು ಜಿಲ್ಲೆಯಲ್ಲಿ 2014 ನೇ ಸಾಲಿನಲ್ಲಿ ಸಮಾಜಕಲ್ಯಾಣ ಇಲಾಖೆಯಲ್ಲಿ ಮೆಟ್ರಿಕ್ ಪೂರ್ವ ಹಂತದಲ್ಲಿ 49 ಬಾಲಕರ, 13 ಬಾಲಕಿಯರ ಹಾಗೂ 18 ಖಾಸಗಿ ಅನುದಾನಿತ ವಿದ್ಯಾರ್ಥಿ ನಿಲಯಗಳು ಕಾರ್ಯನಿರ್ವಹಿಸುತ್ತಿವೆ. ಜೊತೆಗೆ ಮೆಟ್ರಿಕ್ ನಂತರದ ಹಂತದಲ್ಲಿ 20 ಬಾಲಕರ ಹಾಗೂ 17 ಬಾಲಕಿಯರ ವಿದ್ಯಾರ್ಥಿನಿಲಯಗಳು, 7 ಖಾಸಗಿ ಅನುದಾನಿತ ವಿದ್ಯಾರ್ಥಿ ನಿಲಯಗಳು ಕಾರ್ಯ ನಿರ್ವಹಿಸುತ್ತಿವೆ. ಹಿಂದುಳಿದ ಹಾಗೂ ಅಲ್ಪಸಂಖ್ಯಾತ ಬಾಲಕರ ವಿದ್ಯಾರ್ಥಿ ನಿಲಯಗಳು 48, ಇವುಗಳಲ್ಲಿ 11 ಬಾಲಕಿಯರಿಗೆ ಇವೆ. 8 ಖಾಸಗಿ ಅನುದಾನ ರಹಿತ ವಿದ್ಯಾರ್ಥಿ ನಿಲಯಗಳು ಮೆಟ್ರಿಕ್ ಪೂರ್ವ ಹಂತದಲ್ಲಿ ಕಾರ್ಯನಿರ್ವಹಿಸುತ್ತಿವೆ. ಮೆಟ್ರಿಕ್ ನಂತರದ ಹಂತದಲ್ಲಿ 18 ಬಾಲಕರಿಗೆ, 22 ಬಾಲಕಿಯರಿಗೆ ಹಾಗೂ 3 ಖಾಸಗಿ ಅನುದಾನಿತ ವಿದ್ಯಾರ್ಥಿ ನಿಲಯಗಳಿವೆ. ಇವುಗಳ ಜೊತೆಗೆ ಜಿಲ್ಲೆಯಲ್ಲಿ 9 ಆಶ್ರಮ ಶಾಲೆಗಳು, ಮುರಾರ್ಜಿ, ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಗಳೂ ಕಾರ್ಯನಿರ್ವಹಿಸುತ್ತಿದ್ದು ಮಕ್ಕಳಿಗೆ ಪ್ರಯೋಜನಕಾರಿಯಾಗಿವೆ. ತುಮಕೂರು ಸಮೀಪದ ಊರ್ಡಿಗೆರೆ ರಸ್ತೆಯ ಗೊಲ್ಲಹಳ್ಳಿ ಬಳಿ ಒಂದು ಕೇಂದ್ರೀಯ ವಸತಿ ಶಾಲೆಯಿದ್ದು ಮೆರಿಟ್ ಆಧಾರದಲ್ಲಿ ಮಕ್ಕಳಿಗೆ ಪ್ರವೇಶ ನೀಡುತ್ತಿದೆ. ಇದು ಕೇಂದ್ರ ಸರ್ಕಾರದ ಯೋಜನೆಯಾಗಿದ್ದು ಸೆಂಟ್ರಲ್ ಸಿಲಬಸ್ ಆಧಾರದ ಮೇಲೆ ಬೋಧನಾ ಕ್ರಮವಿದೆ. 6ನೇ ತರಗತಿಯಿಂದ 12ನೇ ತರಗತಿಯವರೆಗೆ ಉಚಿತ ಬೋಧನೆ, ಊಟ, ವಸತಿಗಳೊಂದಿಗೆ ಮೂಲಭೂತ ಸೌಕರ್ಯವನ್ನು ಕಲ್ಪಿಸಿದೆ. ಗುರುಕುಲ, ಸಿದ್ಧರಾಮಣ್ಣ, ಒಕ್ಕಲಿಗರ, ಕುರುಬರ, ಸಾದರ, ಜೈನರ, ಕುಂಚಿಟಿಗರ, ತಿಗಳರ, ಮರಾಠರ, ಗೊಲ್ಲ, ಕುಂಬಾರ ಜನಾಂಗಗಳ ಸಾರ್ವಜನಿಕ ವಿದ್ಯಾರ್ಥಿ ನಿಲಯಗಳು ವಿದ್ಯಾರ್ಥಿಗಳ ಶೈಕ್ಷಣಿಕ ಅಭಿವೃದ್ಧಿಗೆ ಆಶ್ರಯದಾಯಕವಾಗಿವೆ. ಸಿದ್ಧಗಂಗಾ ಮಠ ಆರಂಭದಿಂದಲೂ 10 ಸಾವಿರ ವಿದ್ಯಾರ್ಥಿಗಳ ಪೋಷಣೆಯ ಬಹುದೊಡ್ಡ ಜವಾಬ್ದಾರಿ ನಿರ್ವಹಿಸುತ್ತಿದೆ.

## 1) ತುಮಕೂರು ದಕ್ಷಿಣ ವಲಯ:

ಕರ್ನಾಟಕ ರಾಜ್ಯದ ಜಿಲ್ಲೆಗಳಲ್ಲಿ ಒಂದಾಗಿರುವ ತುಮಕೂರು ಜಿಲ್ಲೆಯು ಕಲ್ಪತರು ನಾಡು ಎಂದೇ ಪ್ರಸಿದ್ಧಿ ಪಡೆದಿದೆ. ಈ ಜಿಲ್ಲೆಯು ಒಟ್ಟು 10598 ಚ.ಕಿ.ಮೀ. ಅಳತೆಯನ್ನು ಹೊಂದಿದೆ. ಈ ಜಿಲ್ಲೆಯು ರಾಜ್ಯದ ಆಗ್ನೇಯ ದಿಕ್ಕಿನಲ್ಲಿದ್ದು 12.45 ರಿಂದ 14.20 ರೇಖಾಂಶ ಮತ್ತು 77.31 ಅಕ್ಷಾಂಶದಲ್ಲಿದೆ. ತುಮಕೂರು ಜಿಲ್ಲೆಯು ಭೌಗೋಳಿಕ ಹಾಗೂ ಸಾಂಸ್ಕೃತಿಕ ವೈವಿಧ್ಯತೆಗಳನೊಳಗೊಂಡಿದ್ದು ಶಿಕ್ಷಣ ಕ್ಷೇತ್ರದಲ್ಲಿ ಗಣನೀಯ ಪ್ರಗತಿಯನ್ನು ಸಾಧಿಸಿದೆ. ಈ ಜಿಲ್ಲೆಯು ಬೆಂಗಳೂರು, ಕೋಲಾರ ಮತ್ತು ಮಂಡ್ಯ ಜಿಲ್ಲೆಗಳಿಂದ ಸುತ್ತುವರೆದಿದ್ದು ಉತ್ತರದಲ್ಲಿ ಆಂದ್ರ ಪ್ರದೇಶದ ಅನಂತಪುರ ಜಿಲ್ಲೆಯಿದೆ.

**ಆಡಳಿತ:** ಶೈಕ್ಷಣಿಕ ಆಡಳಿತದ ಅನುಕೂಲತೆಗಾಗಿ ತುಮಕೂರು ಜಿಲ್ಲೆಯನ್ನು ದಕ್ಷಿಣ ಮತ್ತು ಉತ್ತರ ವಲಯಗಳಾಗಿ ವಿಂಗಡಿಸಿದೆ. ತುಮಕೂರು(ದ) ವಲಯವು 06 ತಾಲ್ಲೂಕುಗಳನ್ನು ಹಾಗೂ ಉತ್ತರ ವಲಯವು 04 ತಾಲ್ಲೂಕುಗಳನ್ನು ಒಳಗೊಂಡಿದೆ. ತುಮಕೂರು

ದಕ್ಷಿಣ ವಲಯದ ಕೇಂದ್ರ ಕಛೇರಿ ತುಮಕೂರಿನಲ್ಲಿದ್ದು, ಉತ್ತರ ವಲಯ ಮಧುಗಿರಿಯಲ್ಲಿದೆ. ತಾಲ್ಲೂಕುಗಳಲ್ಲಿಯೂ ಮೇಲ್ವಿಚಾರಣೆಗಾಗಿ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಗಳು ಕಾರ್ಯನಿರ್ವಹಿಸುತ್ತಿವೆ. ಶ್ರೈಕ್ಷಣಿಕ ಜಿಲ್ಲೆಯ ಶೈಕ್ಷಣಿಕ ಹಾಗೂ ಆಡಳಿತಾತ್ಮಕ ಮೇಲ್ವಿಚಾರಣೆಯನ್ನು ಉಪನಿರ್ದೇಶಕರು ಹಾಗೂ ತಾಲ್ಲೂಕು ಮಟ್ಟದಲ್ಲಿ ಕ್ಷೇತ್ರಶಿಕ್ಷಣಾಧಿಕಾರಿಗಳು ನೋಡಿಕೊಳ್ಳುತ್ತಿದ್ದಾರೆ.

**ಭಾಷೆ :** ಈ ಜಿಲ್ಲೆಯ ಎಲ್ಲಾ ಶಾಲೆಗಳಲ್ಲಿ ಪ್ರಮುಖವಾಗಿ ಕನ್ನಡ ಭಾಷೆ ಶಿಕ್ಷಣದ ಮಾಧ್ಯಮವಾಗಿದೆ. ಆದಾಗ್ಯೂ ಇತರ ಭಾಷೆಗಳಾದ ಉರ್ದು, ಅರೇಬಿಕ್ ಭಾಷಾ ಶಾಲೆಗಳೂ ಕೂಡ ಈ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿವೆ.

**ಶೈಕ್ಷಣಿಕ ಸಂಸ್ಥೆಗಳ ವಿವರ:** ಈ ಜಿಲ್ಲೆಯಲ್ಲಿನ ಸರ್ಕಾರಿ, ಅನುದಾನಿತ ಮತ್ತು ಅನುದಾನರಹಿತ ಶೈಕ್ಷಣಿಕ ಸಂಸ್ಥೆಗಳ ವಿವರ ಈ ಕೆಳಕಂಡಂತಿದೆ.

ಉಚಿತ ಸಮವಸ್ತ್ರ ಹಾಗೂ ಪಠ್ಯಪುಸ್ತಕ ವಿತರಣೆಯ ಫಲಾನುಭವಿ ಮಕ್ಕಳ ವಿವರ ಈ ಕೆಳಗೆ ನೀಡಲಾಗಿದೆ. ಸರ್ಕಾರಿ ಶಾಲೆಯಲ್ಲಿನ 1ರಿಂದ 10ನೇ ತರಗತಿಯ ಎಲ್ಲಾ ಬಾಲಕ ಬಾಲಕಿಯರಿಗೆ ಉಚಿತ ಸಮವಸ್ತ್ರ ಹಾಗೂ ಸರ್ಕಾರಿ ಶಾಲೆಯಲ್ಲಿನ 1ರಿಂದ 10ನೇ ತರಗತಿಯ ಎಲ್ಲ ಬಾಲಕ ಬಾಲಕಿಯರಿಗೆ ಹಾಗೂ ಅನುದಾನಿತ ಶಾಲೆಯ 8ರಿಂದ 10ನೇ ತರಗತಿಯ ಎಲ್ಲ ಮಕ್ಕಳಿಗೆ ಉಚಿತ ಪಠ್ಯ ಪುಸ್ತಕ ವಿತರಣೆ ಮಾಡಲಾಗಿದೆ.

| }ವರ | ಹ್ವಿ ಅ | ಬಾಲಕಿ | ಒಟ್ಟು |
|---|---|---|---|
| ಘ್ಬ ಉಸಮವಸa | 61358 | 62673 | 124031 |
| ಘ್ಬ ಉಪಠ್ಯಪುಸ್ತಕ | 84030 | 85464 | 169494 |

ಅಕ್ಷರ ದಾಸೋಹ

| ಕ್ರ ಸಂ | ತಾಲ್ಲೂಕು | ಅಡುಗೆ ಕೇಂದ್ರಗಳ ಸಂಖ್ಯೆ | | ಫಲಾನುಭವಿಗಳ ಸಂಖ್ಯೆ | | | ಅಡುಗೆಯವರ ಸಂಖ್ಯೆ | |
|---|---|---|---|---|---|---|---|---|
| | | ಪ್ರಾಥಮಿಕ | ಪ್ರೌಢ | ಪ್ರಾಥಮಿಕ | ಪ್ರೌಢ | ಒಟ್ಟು | ಪ್ರಾಥಮಿಕ | ಪ್ರೌಢ |
| 1 | ಚಿಕ್ಕನಾಯಕನಹಳ್ಳಿ | 305 | 40 | 15511 | 7393 | 22904 | 542 | 116 |
| 2 | ಗುಬ್ಬಿ | 294 | 54 | 18510 | 9352 | 77862 | 681 | 158 |
| 3 | ಕುಣಿಗಲ್ | 259 | 56 | 15314 | 8821 | 24135 | 579 | 168 |
| 4 | ತಿಪಟೂರು | 272 | 41 | 12523 | 7260 | 19783 | 459 | 123 |
| 5 | ತುಮಕೂರು | 475 | 89 | 35581 | 23028 | 58609 | 884 | 304 |
| 6 | ತುರುವೇಕೆರೆ | 277 | 30 | 10863 | 5067 | 15930 | 427 | 90 |
| | **ಒಟ್ಟು** | **2082** | **310** | **108302** | **60921** | **169223** | **3572** | **959** |

**ಉಚಿತ ಬೈಸಿಕಲ್ ವಿತರಣೆ:** ಸರ್ಕಾರದಿಂದ ಬೈಸಿಕಲ್ ಸರಬರಾಜಾಗಿದ್ದು,ಉಚಿತ ಬೈಸಿಕಲ್ ವಿತರಣೆ ಮಾಡಲಾಗಿದೆ

| ಕ್ರ ಸಂ | ತಾಲ್ಲೂಕು | ಬಾಲಕರು | ಬಾಲಕಿ | ಒಟ್ಟು |
|---|---|---|---|---|
| 1 | ಚಿಕ್ಕನಾಯಕನಹಳ್ಳಿ | 1157 | 1181 | 2336 |
| 2 | ಗುಬ್ಬಿ | 1534 | 1492 | 3026 |
| 3 | ಕುಣಿಗಲ್ | 1330 | 1329 | 2659 |
| 4 | ತಿಪಟೂರು | 1035 | 1140 | 2175 |
| 5 | ತುಮಕೂರು | 2728 | 2859 | 5587 |
| 6 | ತುರುವೇಕೆರೆ | 714 | 774 | 1488 |
| | **ಒಟ್ಟು** | **8498** | **8775** | **17273** |

**ಸರ್ವ ಶಿಕ್ಷಣ ಅಭಿಯಾನ:** ತುಮಕೂರು ಜಿಲ್ಲೆಯ 10 ತಾಲ್ಲೂಕುಗಳಲ್ಲಿ ಶೈಕ್ಷಣಿಕ ಪ್ರಗತಿಗಾಗಿ 2001–02ರಿಂದ ಜಿಲ್ಲೆಯಲ್ಲಿ ಸರ್ವ ಶಿಕ್ಷಣ ಅಭಿಯಾನ ಕಾರ್ಯಕ್ರಮ ಜಾರಿಯಲ್ಲಿದೆ. ಈ ಯೋಜನೆಯಡಿ 2013–14ನೇ ಸಾಲಿಗೆ ರೂ.4599.053 ಲಕ್ಷ ಹಣ ನಿಗದಿತ ಉದ್ದೇಶಗಳಿಗಾಗಿ ನಿಯಮಾನುಸಾರ ಶಾಲೆಗಳಿಗೆ ಬಿಡುಗಡೆಯಾಗಿದ್ದು ಆರ್ಥಿಕ ವರ್ಷಾಂತ್ಯಕ್ಕೆ 4401.564 ಲಕ್ಷ ರೂ. ವೆಚ್ಚವಾಗಿರುತ್ತದೆ.

ಯೋಜನಾ ಕೇಂದ್ರ ಕಛೇರಿ ತುಮಕೂರಿನಲ್ಲಿದ್ದು ತುಮಕೂರು (ದ) ಜಿಲ್ಲೆಯ ಉಪನಿರ್ದೇಶಕರೇ ಇದರ ಉಸ್ತುವಾರಿ ನೋಡಿಕೊಳ್ಳುತ್ತಿದ್ದಾರೆ. ತಾಲ್ಲೂಕುಗಳಲ್ಲಿ ಉಸ್ತುವಾರಿಗಾಗಿ ಕ್ಷೇತ್ರ ಸಂಪನ್ಮೂಲ ಕಛೇರಿಗಳಿವೆ. ಶಾಲೆ ಬಿಟ್ಟ ಮಕ್ಕಳಿಗಾಗಿ ಚಿಣ್ಣರ ಅಂಗಳ, ಬಾ ಮರಳಿ ಶಾಲೆಗೆ, ಸಮುದಾಯದತ್ತ ಶಾಲೆ, ಎಸ್.ಡಿ.ಎಂ.ಸಿ. ತರಬೇತಿ ಹಾಗೂ ಪರಿಹಾರ ಬೋಧನೆ ಕಾರ್ಯಕ್ರಮಗಳನ್ನು ಸಹ 2013-14ರಲ್ಲಿ ಹಮ್ಮಿಕೊಳ್ಳಲಾಗಿದೆ.

ಈ ಯೋಜನೆಯಡಿ ಶಾಲೆಗಳಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗಿದೆ ಹಾಗೂ ಶಾಲೆಗಳು ಆಕರ್ಷಕವಾಗಿರುವಂತೆ ಮಾಡಲು ಅನುದಾನ ನೀಡಲಾಗುತ್ತಿದೆ.

## 2) ತುಮಕೂರು ಉತ್ತರ ವಲಯ, ಮಧುಗಿರಿ ಶೈಕ್ಷಣಿಕ ಜಿಲ್ಲೆ:

ತುಮಕೂರು ಉತ್ತರ ಜಿಲ್ಲೆ, ಸಾರ್ವಜನಿಕ ಶಿಕ್ಷಣ ಇಲಾಖೆ, ಉಪನಿರ್ದೇಶಕರ ಕಛೇರಿ ಅಸ್ಥಿತ್ವಕ್ಕೆ ಬಂದ ನಂತರ ಆಡಳಿತಾತ್ಮಕವಾಗಿ ಮತ್ತು ಶೈಕ್ಷಣಿಕವಾಗಿ ಸುಧಾರಣೆಯ ಪಥದಲ್ಲಿದ್ದು ಕೇಂದ್ರ ಕಛೇರಿಯು ಮಧುಗಿರಿಯಲ್ಲಿದೆ. ತಾಲ್ಲೂಕುಗಳಲ್ಲಿಯ ಮೇಲ್ವಿಚಾರಣೆಗಾಗಿ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಗಳು ಆಯಾ ತಾಲ್ಲೂಕು ಕೇಂದ್ರ ಸ್ಥಾನಗಳಲ್ಲಿ ಕಾರ್ಯ ನಿರ್ವಹಿಸುತ್ತಿವೆ. ಈ ಜಿಲ್ಲಾ ಮಟ್ಟದಲ್ಲಿ ಶೈಕ್ಷಣಿಕ ಹಾಗೂ ಆಡಳಿತಾತ್ಮಕ ಮೇಲ್ವಿಚಾರಣೆಯನ್ನು ಉಪನಿರ್ದೇಶಕರು ಹಾಗೂ ತಾಲ್ಲೂಕು ಮಟ್ಟದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಗಳು ನೋಡಿಕೊಳ್ಳುತ್ತಿದ್ದಾರೆ.

**ಭಾಷೆ:** ಈ ಜಿಲ್ಲೆಯಲ್ಲಿ ಪ್ರಾಥಮಿಕ ಶಿಕ್ಷಣ ಕನ್ನಡ ಮಾಧ್ಯಮದಲ್ಲಿಯೇ ಇದ್ದು, ಉರ್ದು ಮತ್ತು ತೆಲುಗು ಭಾಷೆಯನ್ನು ಮಾತನಾಡುವ ಪ್ರದೇಶಗಳನ್ನು ಕೂಡ ಒಳಗೊಂಡಿರುದೆ ಉರ್ದು ಮಾಧ್ಯಮದ ಶಾಲೆಗಳನ್ನು ನಡೆಸಲಾಗುತ್ತಿದೆ.

**ಶಾಲೆಗಳು:**

| ಕ್ರ.ಸಂ | ವಿವರ | ಸರ್ಕಾರಿ | ಅನುದಾನಿತ | ಅನುದಾನ ರಹಿತ | ಒಟ್ಟು | ಷರಾ |
|---|---|---|---|---|---|---|
| 1. | ಕಿರಿಯ ಪ್ರಾಥಮಿಕ ಶಾಲೆ | 785 | 0 | 39 | 824 | |
| 2. | ಹಿರಿಯ ಪ್ರಾಥಮಿಕ ಶಾಲೆ | 547 | 07 | 77 | 631 | |
| | **ಒಟ್ಟು ಪ್ರಾಥಮಿಕ** | **1332** | **07** | **116** | **1455** | |
| 3. | ಪ್ರೌಢಶಾಲೆ | 109 | 103 | 54 | 266 | |

**ಮಕ್ಕಳ ಸಂಖ್ಯೆ:**

| ತರಗತಿ | ಒಟ್ಟು (ಎಲ್ಲಾ ಜಾತಿ ಸೇರಿ) | | | ಪರಿಶಿಷ್ಟ ಜಾತಿ | | | ಪರಿಶಿಷ್ಟ ಪಂಗಡ | | |
|---|---|---|---|---|---|---|---|---|---|
| | ಬಾಲಕರು | ಬಾಲಕಿ | ಒಟ್ಟು | ಬಾಲಕರು | ಬಾಲಕಿ | ಒಟ್ಟು | ಬಾಲಕರು | ಬಾಲಕಿ | ಒಟ್ಟು |
| 1 ರಿಂದ 7 | 51273 | 48095 | 99368 | 13287 | 12664 | 25951 | 6553 | 6237 | 12790 |
| 8 ರಿಂದ 10 | 22659 | 21589 | 44248 | 6043 | 5392 | 11435 | 2922 | 2908 | 5830 |
| ಒಟ್ಟು | **73932** | **69684** | **143616** | **19330** | **18056** | **37386** | **9475** | **9145** | **18620** |

**ಉಚಿತ ಸಮವಸ್ತ್ರ ಹಾಗೂ ಪಠ್ಯಪುಸ್ತಕ ವಿತರಣೆ ವಿವರ:**

| ಕ್ರ.ಸಂ | ತರಗತಿ | ಪಠ್ಯಪುಸ್ತಕ | | | ಸಮವಸ್ತ್ರ | | |
|---|---|---|---|---|---|---|---|
| | | ಒಟ್ಟು | | | ಗಂಡು | ಹೆಣ್ಣು | ಒಟ್ಟು |
| 1 | 1 ರಿಂದ 7 | 105038 | | | 41586 | 41332 | 82918 |
| 2 | 8 ರಿಂದ 10 | 49710 | | | 9980 | 7663 | 17643 |
| **ಶಾಲಾ ಬ್ಯಾಗ್ ವಿತರಣೆ** | | | **ನೋಟ್ ಪುಸ್ತಕ** | | | | |
| 1 | **1, 5 ಮತ್ತು 7** | **4 ನೇ ತರಗತಿ** | **5 ರಿಂದ 7** | **8 ರಿಂದ 10** | - | - | - |
| 2013-14 ನೇ ಸಾಲಿಗೆ ಸರಬರಾಜಾಗಿರುವುದಿಲ್ಲ | | | | | | | |

**ಅಕ್ಷರ ದಾಸೋಹ:**

| ಕ್ರ.ಸಂ | ತಾಲ್ಲೋಕ್ | ಅಡುಗೆ ಕೇಂದ್ರಗಳ ಸಂಖ್ಯೆ | | ಫಲಾನುಭ} ಗಳ ಸಂಖ್ಯೆ | | ಅಡುಗೆಯವರ ಸಂಖ್ಯೆ | |
|---|---|---|---|---|---|---|---|
| | | ಪ್ರಾಥ}ಎಕ | ಪ್ರೌಢ | ಪ್ರಾಥ}ಎಕ | ಪ್ರೌಢ | ಪ್ರಾಥ}ಎಕ | ಪ್ರೌಢ |
| 1 | ಕೊರಟಗೆರೆ | 252 | 31 | 12838 | 6954 | 443 | 103 |
| 2 | ಮಧು ರಿ | 345 | 55 | 19719 | 9953 | 665 | 153 |
| 3 | ಪಾವಗಡ | 228 | 41 | 17867 | 8312 | 607 | 190 |
| 4 | ಉಸಿ | 419 | 57 | 24976 | 10978 | 833 | 190 |
| | ಒಲ್ಟ್ | **1244** | **184** | **75400** | **36197** | **2548** | **636** |

ಶಾಲೆಗಳಲ್ಲಿ ಮಕ್ಕಳಿಗೆ ಬಿಸಿಯೂಟ, ಹಾಲು, ವಿಟಮಿನ್ ಮಾತ್ರೆಗಳನ್ನು ಪೂರೈಸಲಾಗುತ್ತಿದೆ.

**ಉಚಿತ ಬೈಸಿಕಲ್ ವಿತರಣೆ:**

| ಕ್ರ.ಸಂ | ತಾಲ್ಲೋಕ್ | 8ನೇ ತರಗ0ಯ ್ಲನ ಬಿ.R.ಎಲ್. ಕ್ರಮ ಪಟ್ಟಿಗೆ ಸೇರಿದ ಒಟ್ಟು ಸಂಖ್ಯೆ (ವೃಷ್ಟಿ ಬೈಸಿಕಲ್ಲಿ ಅವಶ್ಯಕತೆ) | | ಸರಬರಾಜಾದ ಬೈ"ಕಲ್‌ಗಳ ಸಂಖ್ಯೆ | | } ತರಿಸಲಾದ ಬೈ"ಕಲ್‌ಗಳ ಸಂಖ್ಯೆ | | ಫ್ಯಾಜ್ರಿ ಬೈ"ಕಲ್‌ಗಳ ಸಂಖ್ಯೆ (ಕ್ರಮ ಪಟ್ಟಿ ಸೇರಿ) |
|---|---|---|---|---|---|---|---|---|
| | | ಬಾಲಕಿ | ಬಾಲಟ | ಬಾಲಕಿ | ಬಾಲಟ | ಬಾಲಕಿ | ಬಾಲಟ | - |
| 1 | ಕೊರಟಗೆರೆ | 1074 | 1096 | 1066 | 1094 | 1057 | 1089 | 14 |
| 2 | ಮಧು ರಿ | 1510 | 1829 | 1510 | 1829 | 1510 | 1829 | 31 |
| 3 | ಪಾವಗಡ | 1345 | 1283 | 1345 | 1283 | 1345 | 1283 | 09 |
| 4 | ಉಸಿ | 1696 | 1651 | 1696 | 1651 | 1696 | 1651 | - |
| | ಒಲ್ಟ್ | **5625** | **5859** | **5616** | **5804** | **5608** | **5852** | **54** |

**ಅಕ್ಷರ ದಾಸೋಹ:**

ಅಕ್ಷರ ದಾಸೋಹ ಕಾರ್ಯಕ್ರಮವು ಸರ್ಕಾರಿ ಮತ್ತು ಅನುದಾನಿತ ಪ್ರಾಥಮಿಕ ಹಾಗೂ ಪ್ರೌಢಶಾಲಾ ಮಕ್ಕಳಿಗೆ ಮಧ್ಯಾಹ್ನದ ಉಪಾಹಾರ (ಬಿಸಿಊಟ)ವನ್ನು ಒದಗಿಸುವ ಸರ್ಕಾರದ ಮಹತ್ತರವಾದ ಕಾರ್ಯಕ್ರಮವಾಗಿದೆ.

**ತುಮಕೂರು ಜಿಲ್ಲೆಯು 10 ತಾಲ್ಲೂಕುಗಳನ್ನು ಒಳಗೊಂಡಿದ್ದು, ವಿವರಗಳು ಕೆಳಕಂಡಂತಿದೆ.**

| 1–7 | | | | 8–10 | | | | ಫಲಾನುಭ} ಒಟ್ಟು ಸಂಖ್ಯಾ ಒಟ್ಟಿ | | | | | | | |
|---|---|---|---|---|---|---|---|---|---|---|---|---|---|---|---|
| ಸಕಾ~ರಿ | | ಅನುದಾನಿತ | | ಸಕಾ~ರಿ | | ಅನುದಾನಿತ | | 1–5 | 6–7 | 8 | 9–10 | 1–5 | 6–7 | 8 | 9–10 |
| ಶಾಲೆ | ಅಡುಗೆ ಕೇಂದ್ರ ಗಳು | ಶಾಲೆ | ಅಡುಗೆ ಕೇಂದ್ರಗಳು | ಶಾಲೆ | ಅಡುಗೆ ಕೇಂದ್ರಗಳು | ಶಾಲೆ | ಅಡುಗೆ ಕೇಂದ್ರಗಳು | ಸಕಾ~ರಿ | ಸಕಾ~ರಿ | ಸಕಾ~ರಿ | ಸಕಾ~ರಿ | ಅನುದಾನಿತ | ಅನುದಾನಿತ | ಅನುದಾನಿತ | ಅನುದಾನಿತ |
| 3425 | 3271 | 68 | 55 | 227 | 196 | 308 | 298 | 118720 | 49917 | 14594 | 28513 | 8838 | 6227 | 16990 | 37021 |

ಪೌಷ್ಟಿಕಾಂಶ ಮಾತ್ರೆಗಳನ್ನು ಇಲಾಖೆಯು ನೇರವಾಗಿ ತಾಲ್ಲೂಕು ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಹಂಚಿಕೆ ಮಾಡಿ ಬಿಡುಗಡೆ ಆಗುತ್ತಿರುವ ಕಾರಣ, ಸದರಿಯವರೇ ದಾಸ್ತಾನಿಗೆ ಸ್ವೀಕರಿಸಿ, ಶಾಲೆಗಳಿಗೆ ಮರುಹಂಚಿಕೆ ಮಾಡಿ, ಬಿಲ್ಲುಗಳನ್ನು ಈ ಕಛೇರಿಗೆ ಸಲ್ಲಿಸುತ್ತಿದ್ದು ಕೆ.ಡಿ.ಎಲ್.ಡಬ್ಲ್ಯೂ.ಎಸ್., ಬೆಂಗಳೂರು ರವರಿಗೆ ಹಣ ಪಾವತಿ ಮಾಡಲಾಗುತ್ತಿದೆ.

ಆಗಸ್ಟ್ 2013 ರಿಂದ ಕ್ಷೀರ ಭಾಗ್ಯ ಯೋಜನೆಯಡಿ 1 –10 ನೇ ತರಗತಿ ಸರ್ಕಾರಿ /ಖಾಸಗಿ ಅನುದಾನಿತ ಶಾಲಾ ಮಕ್ಕಳಿಗೆ ವಾರಕ್ಕೆ 3 ದಿನ ಸೋಮವಾರ, ಬುಧವಾರ ಶನಿವಾರಗಳಂದು ಪ್ರತೀ ಮಗುವಿಗೆ ಪ್ರತೀದಿನ 18 ಗ್ರಾಂ ಕೆನೆ ಭರಿತ ಹಾಲಿನ ಪುಡಿಯಿಂದ ತಯಾರಿಸಿದ 150 ಮಿ.ಲೀ. ಬಿಸಿ ಹಾಲನ್ನು ಶಾಲಾ ಹಂತದಲ್ಲಿ ವಿತರಿಸಲಾಗುತ್ತಿದೆ. ಈ ಕಾರ್ಯಕ್ಕೆ ಕೆ.ಎಂ.ಎಫ್ ಸಂಸ್ಥೆಯು ಕೆನೆಭರಿತ ಹಾಲಿನ ಪುಡಿ ಸರಬರಾಜು ಮಾಡುತ್ತಿದ್ದು, 1 ತಿಂಗಳಿಗೆ 693 ಕ್ವಿ ಹಾಲಿನ ಪುಡಿ ಅವಶ್ಯಕತೆ ಇದ್ದು, ಪ್ರತೀ ಕೆ.ಜಿಗೆ ರೂ 225/– + ವ್ಯಾಟ್ 14.5% ನಂತೆ, ಕೆ.ಎಂ.ಎಫ್ ಗೆ ಹಣ ನೀಡುತ್ತಿದ್ದು 1 ಮಾಹೆಗೆ ಅಂದಾಜು ರೂ 160.00 ಲಕ್ಷಗಳು ಅವಶ್ಯಕತೆ ಇರುತ್ತದೆ. ಹಾಲಿನ ಪುಡಿ ಮೊತ್ತವನ್ನು ನೇರವಾಗಿ ಕೆ.ಎಂ.ಎಫ್ ಸಂಸ್ಥೆಗೆ ಬಿಡುಗಡೆ ಮಾಡಲಾಗುತ್ತಿದೆ.

ಇದಲ್ಲದೇ ಹಾಲು ತಯಾರಿಕಾ ಪರಿವರ್ತನಾ ವೆಚ್ಚ, ಸಕ್ಕರೆ, ಅನಿಲದ ಬಾಬ್ತಿಗಾಗಿ ರೂ 0.59 ಪ್ರತೀ ಮಗುವಿಗೆ ಪ್ರತೀ ಮಗುವಿಗೆ ಪ್ರತೀ ದಿನಕ್ಕೆ ನೀಡಲಾಗುತ್ತಿದೆ. ಅಡುಗೆ ಸಿಬ್ಬಂದಿಗೆ ಪ್ರತೀ ಮಾಹೆ ರೂ 100/– ರಂತೆ ಹೆಚ್ಚುವರಿಯಾಗಿ ಬಿಡುಗಡೆ ಮಾಡಲಾಗುತ್ತಿದೆ. ಈ ಬಾಬ್ತು ಶಾಲಾ ಹಂತಕ್ಕೆ ಬಿಡುಗಡೆ ಮಾಡಲಾಗುತ್ತಿದೆ.

**ಸಾರಿಗೆ:**

ತುಮಕೂರು ಜಿಲ್ಲೆ ರಾಜ್ಯದ ರಾಜಧಾನಿ ಬೆಂಗಳೂರಿಗೆ 69 ಕಿ.ಮೀ. ದೂರದಲ್ಲಿದ್ದು ಇದು ಜಿಲ್ಲಾ ಕೇಂದ್ರವೂ ಆಗಿದೆ. ರಾಜಧಾನಿಯಿಂದ ರಾಷ್ಟ್ರೀಯ ಹೆದ್ದಾರಿಯೂ ಸೇರಿದಂತೆ ಜಿಲ್ಲೆಯ 10 ತಾಲ್ಲೂಕು ಕೇಂದ್ರಗಳಿಗೂ ರಾಷ್ಟ್ರೀಯ, ರಾಜ್ಯ ಹಾಗೂ ಜಿಲ್ಲಾ ಮುಖ್ಯ ರಸ್ತೆಗಳು ಹಾದುಹೋಗಿವೆ. ರಾಜ್ಯ ರಸ್ತೆ ಸಾರಿಗೆ (ಕೆಎಸ್‌ಆರ್‌ಟಿಸಿ), ಸುವಿಹಾರಿ, ಮೇಘದೂತ, ಐರಾವತ ಸೇರಿದಂತೆ ಎಕ್ಸ್‌ಪ್ರೆಸ್ ಹಾಗೂ ನಿಧಾನಗತಿಯ ಬಸ್ಸುಗಳು ಗ್ರಾಮೀಣ ಸಾರಿಗೆ ಬಳಕೆಯಲ್ಲಿದೆ. ಜೊತೆಗೆ ಎಸ್‌ಆರ್‌ಎಸ್, ಸಿದ್ದೇಶ್ವರ, ರಿಲೇಬಲ್, ಕಡಬ, ವೀರಭದ್ರ, ರಂಗನಾಥ, ಹನುಮಾನ್, ಪ್ರಕಾಶ, ಸಿದ್ಧರಾಮೇಶ್ವರ, ಜಯಪದ್ಮ, ವಾಣಿ ಎಂಬ ಖಾಸಗಿ ಬಸ್‌ಗಳು ಜಿಲ್ಲೆಯಲ್ಲಿ ಸಂಚರಿಸುತ್ತ ಸಾರಿಗೆ ಸಂಪರ್ಕಕ್ಕೆ ಅತ್ಯುತ್ತಮ ಸೇವೆ ಒದಗಿಸುತ್ತಿವೆ. ಅದರಂತೆ ರೈಲ್ವೇ, ಸಾರಿಗೆಯೂ ಸಮರ್ಪಕವಾಗಿದೆ. ಸರಕು ಸಾಗಾಣಿಕೆಗಾಗಿ ಟ್ರಕ್ಸ್, ಲಾರಿ, ಮೂರು ಚಕ್ರಗಳ ವಾಹನ ಹಾಗೂ ಟೆಂಪೋಗಳು ಖಾಸಗಿ ಸರಕು ಸಾಗಾಣಿಕೆಯಲ್ಲಿ ಪ್ರಮುಖ ಪಾತ್ರ ವಹಿಸಿವೆ. ಅದರಂತೆ ಶಾಲಾ–ಕಾಲೇಜು ಮಕ್ಕಳಿಗೆ ಪ್ರಯಾಣಕ್ಕಾಗಿ ಶಾಲಾ–ಕಾಲೇಜುಗಳ ವಾಹನಗಳು ಬಳಕೆಯಲ್ಲಿವೆ. ಅಧಿಕಾರಿಗಳ ಬಳಕೆಗಾಗಿ ಆಡಳಿತಾತ್ಮಕ ಕಾರ್ಯಗಳ ನಿರ್ವಹಣೆ, ಪ್ರಯಾಣಕ್ಕಾಗಿ ಕಾರು, ಜೀಪು, ಮ್ಯಾಕ್ಸಿಕ್ಯಾಬ್‌ಗಳು ಕಾರ್ಯನಿರ್ವಹಿಸುತ್ತಿವೆ.

ತುಮಕೂರು ಜಿಲ್ಲಾ ಕೇಂದ್ರದಿಂದ ಸುತ್ತುವರಿದಂತೆ ಇಲ್ಲಿಂದ ಜಿಲ್ಲೆಯ ತಾಲ್ಲೂಕು, ಇತರ ಜಿಲ್ಲೆಗಳಿಗೂ ಹಾದುಹೋಗಿರುವ ರಸ್ತೆಗಳ ಉದ್ದಳತೆಯ ವಿವರವನ್ನು ಅಂಕಿ–ಅಂಶಗಳ ಮೂಲಕ ಹೀಗೆ ಗಮನಿಸಬಹುದಾಗಿದೆ.

| ತಾಲ್ಲೂಕುಗಳು | ರಾಷ್ಟ್ರೀಯ ಹೆದ್ದಾರಿ | ರಾಜ್ಯ ಹೆದ್ದಾರಿ | ಮುಖ್ಯ ರಸ್ತೆಗಳು |
|---|---|---|---|
| ಚಿಕ್ಕನಾಯಕನಹಳ್ಳಿ | 52 ಕಿ.ಮೀ | 72.59 ಕಿ.ಮೀ | 289 ಕಿ.ಮೀ |
| ಗುಬ್ಬಿ | 16 ಕಿ.ಮೀ | 68.25 ಕಿ.ಮೀ | 498.85 ಕಿ.ಮೀ |
| ಕೊರಟಗೆರೆ | 16 ಕಿ.ಮೀ | 56.77 ಕಿ.ಮೀ | 255.45 ಕಿ.ಮೀ |
| ಕುಣಿಗಲ್ | 36 ಕಿ.ಮೀ | 112.06 ಕಿ.ಮೀ | 461.75 ಕಿ.ಮೀ |
| ಮಧುಗಿರಿ | 58 ಕಿ.ಮೀ | 38.10 ಕಿ.ಮೀ | 342 ಕಿ.ಮೀ |
| ಪಾವಗಡ | – | 80.23 ಕಿ.ಮೀ | 210.60 ಕಿ.ಮೀ |
| ಸಿರಾ | 79 ಕಿ.ಮೀ | 16.35 ಕಿ.ಮೀ | 646 ಕಿ.ಮೀ |
| ತಿಪಟೂರು | 42 ಕಿ.ಮೀ | 16.35 ಕಿ.ಮೀ | 276.15 ಕಿ.ಮೀ |
| ತುಮಕೂರು | 79 ಕಿ.ಮೀ | 51.10 ಕಿ.ಮೀ | 368.50 ಕಿ.ಮೀ |
| ತುರುವೇಕೆರೆ | – | 43.80 ಕಿ.ಮೀ | 422.95 ಕಿ.ಮೀ |

ಇವುಗಳ ಜೊತೆಗೆ ತುಮಕೂರು ಜಿಲ್ಲಾ ಪಂಚಾಯ್ತಿ ಗ್ರಾಮೀಣ ರಸ್ತೆಗಳನ್ನು ಹೊಂದಿದೆ

**ಪಂಚಾಯತ್ ರಸ್ತೆಗಳು:**

| ತಾಲ್ಲೂಕುಗಳು | ಡಾಂಬರು ರಸ್ತೆ | ಜಲ್ಲಿ ರಸ್ತೆ | ಕಚ್ಚಾ ರಸ್ತೆ | ಒಟ್ಟು ರಸ್ತೆ |
|---|---|---|---|---|
| ಚಿಕ್ಕನಾಯಕನಹಳ್ಳಿ | 14.93 ಕಿ.ಮೀ | 4.11 ಕಿ.ಮೀ | 50.17 ಕಿ.ಮೀ | 69.21 ಕಿ.ಮೀ |
| ಗುಬ್ಬಿ | 321.93 ಕಿ.ಮೀ | 271.56 ಕಿ.ಮೀ | 881.99 ಕಿ.ಮೀ | 1475.48 ಕಿ.ಮೀ |
| ಕೊರಟಗೆರೆ | 8.16 ಕಿ.ಮೀ | 6.46 ಕಿ.ಮೀ | 17.73 ಕಿ.ಮೀ | 32.35 ಕಿ.ಮೀ |
| ಕುಣಿಗಲ್ | 582.72 ಕಿ.ಮೀ | 183.68 ಕಿ.ಮೀ | 529.47 ಕಿ.ಮೀ | 1295.87 ಕಿ.ಮೀ |
| ಮಧುಗಿರಿ | 12.92 ಕಿ.ಮೀ | 32.7 ಕಿ.ಮೀ | 34.84 ಕಿ.ಮೀ | 80.46 ಕಿ.ಮೀ |
| ಪಾವಗಡ | 77.04 ಕಿ.ಮೀ | 13.34 ಕಿ.ಮೀ | 37.68 ಕಿ.ಮೀ | 128.06 ಕಿ.ಮೀ |

| | | | | |
|---|---|---|---|---|
| ಸಿರಾ | 987 ಕಿ.ಮೀ. | 17.55 ಕಿ.ಮೀ | 127.09 ಕಿ.ಮೀ | 144.64 ಕಿ.ಮೀ |
| ತಿಪಟೂರು | 440.46 ಕಿ.ಮೀ | 137.36 ಕಿ.ಮೀ | 438.39 ಕಿ.ಮೀ | 1016.21 ಕಿ.ಮೀ |
| ತುಮಕೂರು | 367.27 ಕಿ.ಮೀ | 211.3 ಕಿ.ಮೀ | 573.38 ಕಿ.ಮೀ | 1151.95 ಕಿ.ಮೀ |
| ತುರುವೇಕೆರೆ | 464.19 ಕಿ.ಮೀ | 94.74 ಕಿ.ಮೀ | 335.36 ಕಿ.ಮೀ | 894.29 ಕಿ.ಮೀ |

ಬೆಂಗಳೂರು–ಅರಸೀಕೆರೆ ಮಾರ್ಗವಾಗಿ, ಹುಬ್ಬಳ್ಳಿ, ಬಾಂಬೆ ಶಿವಮೊಗ್ಗ, ಬೆಂಗಳೂರು ಹೀಗೆ ಒಟ್ಟು 97 ಕಿಮೀ ರೈಲ್ವೇ ಬ್ರಾಡ್‌ಗೇಜ್ ರಸ್ತೆಯನ್ನು ಹೊಂದಿದ್ದು ತುಮಕೂರು ಜಿಲ್ಲೆಯ ವ್ಯಾಪ್ತಿಯಲ್ಲಿ 16 ರೈಲು ನಿಲ್ದಾಣಗಳಿವೆ.

## ಆರೋಗ್ಯ:

ತುಮಕೂರು ಬರಬಿಸಿಲು ಭೂಪ್ರದೇಶ. ಇಲ್ಲಿ ಮಳೆ ಕಡಿಮೆ, ಬಿಸಿಲು ಅಧಿಕ. ಅದರಂತೆ ಈ ಪ್ರದೇಶದಲ್ಲಿ ರೋಗರುಜಿನಗಳು ಹೆಚ್ಚು. ತುಮಕೂರು ಜಿಲ್ಲೆ ಅಪೂರ್ವ ವನಸ್ಪತಿಗಳಿಂದಲೂ ಪಾರಂಪರಿಕ ವೈದ್ಯಕೀಯ ಗಿಡಮೂಲಿಕೆಗಳಿಂದಲೂ ಕೂಡಿದೆ. ಸಿದ್ದರಬೆಟ್ಟ, ದೇವರಾಯನದುರ್ಗ ಕರ್ನಾಟಕದ ಅಪೂರ್ವ ಗಿಡಮೂಲಿಕೆ, ಔಷಧಿ ಸಸ್ಯಗಳಿಂದ ಕೂಡಿರುವ ಭೂಪ್ರದೇಶಗಳು. ಜೊತೆಗೆ ಇಲ್ಲಿನ ಪರಿಸರದಲ್ಲಿ ಗಿಡಮೂಲಿಕೆಗಳಿಂದ ಖಾಯಿಲೆಗಳನ್ನು ಗುಣಪಡಿಸುವ ದೇಶೀ ವೈದ್ಯಕೀಯ ಪದ್ಧತಿ ರೂಢಿಗತವಾಗಿ ಬೆಳೆದುಬಂದಿದೆ. ನೆಲಮೂಲ ಸಂಸ್ಕೃತಿಯ ವೈದ್ಯ ಪಂಡಿತರಿದ್ದಾರೆ. ಪಶು, ಪ್ರಾಣಿ, ಮನುಷ್ಯ ಸಂಬಂಧಿ ಖಾಯಿಲೆಗಳಿಗೂ ಸಿದ್ಧ ಔಷಧಿ ನೀಡಿ ಖಾಯಿಲೆ ಗುಣಪಡಿಸುವ ಆಯುರ್ವೇದಿಕ ಪರಂಪರೆ ಪುರಾತನ ಕಾಲದಿಂದಲೂ ತುಮಕೂರು ಜಿಲ್ಲೆಯಲ್ಲಿದೆ. ವಿಶೇಷವಾಗಿ ಕಾಡುಗೊಲ್ಲರು, ತಿಗಳರು, ಬೇಡ ಜನಾಂಗದವರು ತಮ್ಮ ಪಶುಪಾಲನೆ, ತೋಟಗಾರಿಕೆ, ಅಡವಿ–ಅರಣ್ಯಗಳ ವಾಸದೊಂದಿಗಿನ ಸಂದರ್ಭದಲ್ಲಿ ಸಂಭವಿಸಬಹುದಾದ ವಿಷಜಂತುಗಳಾದ ಹಾವು, ಚೇಳು, ಮಂಡರಗಪ್ಪೆಗಳ ಕಡಿತ ಹಾಗೂ ಕೈಕಾಲು ಉಳುಕು, ಮೂಳೆ ಮುರಿತ ಈ ಬಗೆಯ ಸಂದರ್ಭ, ಬಾಣಂತಿಯರು, ಗರ್ಭಿಣಿ ಸ್ತ್ರೀಯರು ತಮ್ಮ ಹೆರಿಗೆ ಬೇನೆ, ಶೀತ ಬಾಧೆ, ಕಫ, ವಾತ, ಪಿತ್ತ, ಉದರಬೇನೆ ಈ ಬಗೆಯ ಹಲವು ಖಾಯಿಲೆಗಳನ್ನು ಗಿಡಮೂಲಿಕೆಗಳಿಂದಲೇ ಗುಣಪಡಿಸುತ್ತಿದ್ದ ಪದ್ಧತಿಯಿತ್ತು. ಕೊರಟಗೆರೆ ತಾಲ್ಲೂಕಿನ ಬೆಟ್ಟದ ನಾಗೇನಹಳ್ಳಿ, ಮಲ್ಲೇಕಾವನಹಳ್ಳಿ, ಮಧುಗಿರಿ, ಐ.ಡಿ.ಹಳ್ಳಿ, ಬೇವಿನಹಳ್ಳಿ, ದಿಬ್ಬದಹಳ್ಳಿ ಹಟ್ಟಿ, ನೆಲಹಾಳ, ಎತ್ತಪ್ಪನಹಟ್ಟಿ, ಬಾಣದೇವರಹಟ್ಟಿ, ಹಾಗಲವಾಡಿ ಹಟ್ಟಿ, ಚೇಳೂರು, ಸಿರಾ, ದೊಡ್ಡೇರಿ ಈ ಬಗೆಯ ಹಲವು ಗ್ರಾಮಗಳು ಜನಪದ ನಾಟಿ ಔಷಧೋಪಚಾರಕ್ಕೆ ಹೆಸರಾಗಿವೆ.

ತುಮಕೂರು ಜಿಲ್ಲೆಯ ಬಹುತೇಕ ಕಾಡುಗೊಲ್ಲರ ಹಟ್ಟಿಗಳು ಕುರಿ, ಮೇಕೆ, ದನ, ನಾಯಿ ಈ ಪ್ರಾಣಿಗಳ ರೋಗಗಳಿಗೆ ಇಂಗ್ಲೀಷ್ ಮೂಲದ ಔಷಧವನ್ನು ಹುಡುಕಿಹೋದವರು ಬದಲಿಗೆ ಕಾಳುಮೆಣಸಿನ ರಸ, ಚಕ್ಕೆ, ಹಸಿರೆಲೆಗಳ ಔಷಧೋಪಚಾರ, ಗೊಡ್ಡುಗಾರದ ಮೂಲಕವೂ ಔಷಧೋಪಚಾರ ನೀಡುವುದುಂಟು. ಮೂಳೆ ಮುರಿತ, ಉಳುಕು ಈ ಬಗೆಯ ಮನುಷ್ಯ ಸಂಬಂಧಿ ತೊಂದರೆಗಳಿಗೂ ಚಿಕಿತ್ಸೆ ನೀಡುವುದು ಸಾಮಾನ್ಯವಾಗಿದೆ. ಕಂಪನಿ ಸರ್ಕಾರದ ಕಾಲದಿಂದಲೂ ಆಯುರ್ವೇದ ಹಾಗೂ ಯುನಾನಿ ಔಷಧಾಲಯಗಳು ತುಮಕೂರು ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿವೆ. ಅದರ ಮುಂದುವರಿಕೆಯ ರೂಪವಾಗಿ ಸರ್ಕಾರಿ ಆಸ್ಪತ್ರೆಗಳು ಆರಂಭವಾದವು. ತುಮಕೂರು ಜಿಲ್ಲೆಯ ಹತ್ತು ತಾಲ್ಲೂಕುಗಳಲ್ಲೂ ಇಂದು ಸರ್ಕಾರಿ ಅಲೋಪತಿ ಹಾಗೂ ಆಯುರ್ವೇದ ಆಸ್ಪತ್ರೆಗಳು ಕಾರ್ಯನಿರ್ವಹಿಸುತ್ತಿವೆ. 2015 ರ ಸುಮಾರಿಗೆ ತುಮಕೂರು ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸರ್ಕಾರಿ, ಖಾಸಗಿ, ಅಲೋಪತಿ ಆಸ್ಪತ್ರೆಗಳು ಭಾರತೀಯ ವೈದ್ಯಪದ್ಧ ಆಸ್ಪತ್ರೆಗಳು, ಖಾಸಗಿ ಆಸ್ಪತ್ರೆಗಳು (ನರ್ಸಿಂಗ್ ಹೋಮ್), ಪ್ರಾಥಮಿಕ ಆರೋಗ್ಯ ಕೇಂದ್ರಗಳು ಸಮುದಾಯ ಆರೋಗ್ಯ ಕೇಂದ್ರಗಳ ತಾಲ್ಲೂಕುವಾರು ವಿವರ ಹೀಗಿದೆ.

### ಜಿಲ್ಲಾ ಆಯುಷ್:

ಆಯುರ್ವೇದವು ಮಹತ್ವವಾದ ವೈಜ್ಞಾನಿಕ ತಳಹದಿಯ ಮೇಲೆ ನಿಂತಿರುವ ಶಾಸ್ತ್ರವಾಗಿದೆ. ಇತ್ತೀಚೆಗೆ ಅದು ತನ್ನದೇ ಆದ ವೈಶಿಷ್ಠತೆಯಿಂದ ಬೆಳೆಯುತ್ತಿದೆ. ಇದರಲ್ಲಿ ಕೇವಲ ಆರೋಗ್ಯವನ್ನು ಕಾಪಾಡಿ ರೋಗ ನಿವಾರಣೆ ಮಾಡುವುದು ಮಾತ್ರವಲ್ಲದೆ ಜೀವನದ ಶೈಲಿ ಆರೋಗ್ಯ ಹಾಗೂ ಮಾನಸಿಕ ಸ್ವಾಸ್ಥ್ಯವನ್ನು ಕಾಪಾಡುವುದನ್ನು ತಿಳಿಸುವ ಏಕೈಕ ಶಾಸ್ತ್ರವಾಗಿದೆ. ಈಗ ಪ್ರತಿಯೊಬ್ಬ ಮನುಷ್ಯನಿಗೆ ಪ್ರಾಣಾಂತಿಕವಾದ ಕಾಯಿಲೆಗಳು ತೊಂದರೆ ನೀಡುತ್ತಿರುತ್ತವೆ. ಆದ ಕಾರಣ ಈಗ ಸಾಮಾನ್ಯವಾಗಿ ಸಾರ್ವಜನಿಕರಲ್ಲಿ/ ರೋಗಿಗಳಲ್ಲಿ ರೋಗನಿರೋಧಕ ಶಕ್ತಿಯ ಬಗ್ಗೆ ಹೆಚ್ಚು ಗಮನಾರ್ಹವಾಗಿ ಯೋಚಿಸಬೇಕಾಗುತ್ತದೆ. ಆದ ಕಾರಣ ಇದನ್ನು ರ‍್ರಾಯ ಗ್ರಾಮೀಣ ಆರೋಗ್ಯ ಅಭಿಯಾನ ಯೋಜನೆಯ ಮೇನ್‌ಸ್ಟ್ರೀಮ್ ಆಯುಷ್‌ನಲ್ಲಿ ಸೇರಿಸಲಾಗಿದೆ.

ತುಮಕೂರು ಜಿಲ್ಲೆಯ ಆಯುಷ್ ಪದ್ಧತಿಗಳ ಸಂಸ್ಥೆಗಳ ನಿರ್ವಹಣೆ, ಅಭಿವೃದ್ಧಿ ಹಾಗೂ ಆಡಳಿತಾತ್ಮಕ ಮೇಲ್ವಿಚಾರಣೆಗಳ ಉದ್ದೇಶ್ಯಕ್ಕಾಗಿ 2005–06 ರಿಂದೀಚೆಗೆ ಒಂದು ಪ್ರತ್ಯೇಕ ಜಿಲ್ಲಾ ಕಸೇರಿಯನ್ನು ಸರ್ಕಾರವು ಪ್ರಾರಂಭಿಸಿದ್ದು ಅದು 2006–07ರಿಂದೀಚೆಗೆ ಕಾರ್ಯಾರಂಭ ಮಾಡಿದೆ.

**ಇಲಾಖೆಯ ಗುರಿಗಳು**

1. ಹಳೆಯ ಕಾಯಿಲೆಗಳಿಗೆ ಪಂಚಕರ್ಮ ಚಿಕಿತ್ಸೆ ಪ್ರಾರಂಭಿಸುವುದು.
2. ವಯಸ್ಸಾದ ರೋಗಿಗಳಿಗೆ ಪ್ರತ್ಯೇಕ ಚಿಕಿತ್ಸೆ ವ್ಯವಸ್ಥೆ ಕಲ್ಪಿಸುವುದು.
3. ತಾಯಿ ಮತ್ತು ಮಗುವಿಗೆ ಸೂಕ್ತ ಆರೋಗ್ಯ ಚಿಕಿತ್ಸೆ ನೀಡುವುದು.
4. ಆಯುಷ್ ಪದ್ಧತಿಯಲ್ಲಿ ರೋಗಿಗಳಿಗೆ ರೋಗನಿರೋಧಕ ಚಿಕಿತ್ಸೆ ನೀಡುವುದು.
5. ಋತುವಿಗೆ ಅನುಗುಣವಾಗಿ ರೋಗಿಗಳಿಗೆ ರೋಗನಿರೋಧಕ ಚಿಕಿತ್ಸೆ ಕಲ್ಪಿಸುವುದು.
6. ರೋಗಿಗಳಿಗೆ/ಸಾರ್ವಜನಿಕರಿಗೆ ಆಯುಷ್ ಪದ್ಧತಿಯ ಪ್ರಯೋಜನದ ಬಗ್ಗೆ ಮನವರಿಕೆ ಮಾಡುವುದು.
7. ಪ್ರತಿ ಹಳ್ಳಿಗಳಲ್ಲಿ ಆಯುಷ್ ಪದ್ಧತಿಯ ಶಿಬಿರ ಹಾಗೂ ಮನೆಮದ್ದು ಕಾರ್ಯಕ್ರಮಗಳನ್ನು ಮತ್ತು ಜನಾರೋಗ್ಯ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಜನರಿಗೆ ಆಯುಷ್ ಬಗ್ಗೆ ತಿಳುವಳಿಕೆ ನೀಡುವುದು ಮತ್ತು ಚಿಕಿತ್ಸೆ ನೀಡುವುದು.
8. ರಸಾಯನ ಮತ್ತು ವಾಜಿಕರಣ ಚಿಕಿತ್ಸಾ ಪದ್ಧತಿಯನ್ನು ಬಳಸಿಕೊಂಡು ರೋಗಿಯನ್ನು ಶಾರೀರಿಕವಾಗಿ, ಮಾನಸಿಕವಾಗಿ ಹಾಗೂ ಬೌದ್ಧಿಕವಾಗಿ ಸದೃಢಗೊಳಿಸುವುದು.
9. ಜಿಲ್ಲಾದ್ಯಂತ ಯೋಗ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಆಯುಷ್ ಇಲಾಖೆಯು ಆಯುರ್ವೇದ, ಯುನಾನಿ, ಯೋಗ, ಸಿದ್ಧ, ಮತ್ತು ಹೋಮಿಯೋಪತಿ ಪದ್ಧತಿಗಳಲ್ಲಿ ಸಾರ್ವಜನಿಕರಿಗೆ ಆರೋಗ್ಯ ಚಿಕಿತ್ಸಾ ಸೌಲಭ್ಯ ಕಲ್ಪಿಸುವುದು. ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಆಸ್ಪತ್ರೆ, ಚಿಕಿತ್ಸಾಲಯಗಳು ಜಿಲ್ಲಾ ಪಂಚಾಯತ್ ಅಡಿಯಲ್ಲಿ ಕಾರ್ಯನಿರ್ವಹಿಸುತ್ತವೆ. ಆಸ್ಪತ್ರೆ/ಚಿಕಿತ್ಸಾಲಯಗಳಿಗೆ ರೂ. 36,000/–ಗಳ ಔಷಧಗಳಲ್ಲಿ ಶೇ60% ಔಷಧಿಗಳನ್ನು ಕೇಂದ್ರೀಯ ಔಷಧಗಾರ ಬೆಂಗಳೂರು ಇಲ್ಲಿಂದ ಶಾಸ್ತ್ರೀಯ ಔಷಧಗಳನ್ನು ಸರಬರಾಜು ಮಾಡಲಾಗುತ್ತದೆ. ಶೇ.40% ಪೇಟೆಂಟ್ ಔಷಧಿಗಳನ್ನು ಸರ್ಕಾರದಿಂದ ಮಾನ್ಯತೆ ಪಡೆದ ಸಂಸ್ಥೆಯಿಂದ ಸರಬರಾಜು ಮಾಡಲಾಗುತ್ತದೆ. ಇದರ ಜೊತೆಗೆ ಪ್ರತಿ ಹಾಸಿಗೆಗೆ ರೂ.5000/– ಹೆಚ್ಚಿನ ಔಷಧಿಗಳನ್ನು ಸರಬರಾಜು ಮಾಡಲಾಗುವುದು.

ಜಿಲ್ಲೆಯಲ್ಲಿ ವಿವಿಧ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿರುವ ವಾಹನಗಳು ಹಾಗೂ ಅಂಬುಲೆನ್ಸ್ ವಾಹನಗಳು ಮತ್ತು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಛೇರಿಯಲ್ಲಿರುವ ವಾಹನಗಳ ಇಂಧನ ವೆಚ್ಚ ಮತ್ತು ವಾಹನಗಳು ಸುಸ್ಥಿತಿಯಲ್ಲಿರುವುಂತೆ ನೋಡಿಕೊಂಡು ರಾಷ್ಟ್ರೀಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಕಾರ್ಯಕ್ರಮಗಳ ಪ್ರಗತಿಯಲ್ಲಿ ಹೆಚ್ಚಿನ ಗುರಿಯನ್ನು ಸಾಧಿಸಲು ಈ ಕಾರ್ಯಕ್ರಮವನ್ನು ರೂಪಿಸಲಾಗಿದೆ. ಈ ಕಾರ್ಯಕ್ರಮದ ಅನುಷ್ಠಾನಕ್ಕಾಗಿ ರೂಗಳು 64.97 ಲಕ್ಷ ರೂಗಳನ್ನು ನಿಗಧಿಪಡಿಸಲಾಗಿದೆ.

**ಕುಟುಂಬ ಕಲ್ಯಾಣ ಔಷಧಿ ಪೂರೈಕೆ ಮತ್ತು ಪಲ್ಸ್ ಪೋಲಿಯೋ ಕಾರ್ಯಕ್ರಮ:** ಜಿಲ್ಲೆಯಾದ್ಯಂತ ನಡೆಯುತ್ತಿರುವ ಕುಟುಂಬ ಕಲ್ಯಾಣ ಶಸ್ತ್ರ ಚಿಕಿತ್ಸೆಗಳಿಗೆ ಅವಶ್ಯಕವಾಗಿರುವ ಔಷಧಿಗಳನ್ನು ಪೂರೈಸಲು ಮತ್ತು 5 ವರ್ಷದೊಳಗಿನ ಮಕ್ಕಳಿಗೆ ಲಸಿಕೆಗಳನ್ನು ನೀಡಲು ಪಲ್ಸ್ ಪೊಲಿಯೊ ಕಾರ್ಯಕ್ರಮವನ್ನು ರೂಪಿಸಲಾಗಿದೆ.

**ಜಿಲ್ಲಾ ಕುಟುಂಬ ಕಲ್ಯಾಣ ವಿಭಾಗ:** ಜಿಲ್ಲೆಯಲ್ಲಿ ನಡೆಯುವ ಕುಟುಂಬ ಕಲ್ಯಾಣ ಕಾರ್ಯಕ್ರಮಗಳ ಪ್ರಗತಿಯನ್ನು ಪರಿಶೀಲಿಸಿ ಸೂಕ್ತ ಮಾರ್ಗದರ್ಶನವನ್ನು ನೀಡಿ ಹೆಚ್ಚಿನ ಪ್ರಗತಿಯನ್ನು ಸಾಧಿಸಲು ಈ ವಿಭಾಗವು ಸ್ಥಾಪನೆಯಾಗಿರುತ್ತದೆ. ಈ ಕಾಯಕ್ರಮಕ್ಕಾಗಿ ರೂ 124.80 ಲಕ್ಷ ರೂಗಳನ್ನು ನಿಗಧಿಪಡಿಸಲಾಗಿದೆ.

**ಗ್ರಾಮಾಂತರ ಕುಟುಂಬ ಕಲ್ಯಾಣ ಕೇಂದ್ರಗಳು:** ಜಿಲ್ಲೆಯಲ್ಲಿ ಕುಟುಂಬ ಕಲ್ಯಾಣ ಕಾರ್ಯಕ್ರಮಗಳ ಅಭಿವೃದ್ಧಿಗಾಗಿ ಶ್ರಮಿಸುತ್ತಿರುವ ವೈದ್ಯಾಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರ ವೇತನ ಮತ್ತು ಭತ್ಯೆಗಳನ್ನು ಪಾವತಿ ಮಾಡಲಾಗುತ್ತಿದೆ

**ಗ್ರಾಮಾಂತರ ಕುಟುಂಬ ಕಲ್ಯಾಣ ಉಪ ಕೇಂದ್ರಗಳು:** ಜಿಲ್ಲೆ ಗ್ರಾಮಾಂತರ ಪ್ರದೇಶಗಳಲ್ಲಿ ಕುಟುಂಬ ಕಲ್ಯಾಣ ಕಾರ್ಯಕ್ರಮಗಳ ಅಭಿವೃದ್ಧಿಗಾಗಿ ಶ್ರಮಿಸುತ್ತಿರುವ ಸಿಬ್ಬಂದಿ ವರ್ಗದವರ ವೇತನ ಮತ್ತು ಭತ್ಯೆಗಳನ್ನು ಪಾವತಿ ಮಾಡಲು ಈ ಕಾರ್ಯಕ್ರಮವನ್ನು ರೂಪಿಸಲಾಗಿದೆ.

**ಸಾರ್ವತ್ರಿಕ ನಿರೋಧಕ ಚುಚ್ಚುಮದ್ದು ಕಾಯಕ್ರಮ:** ಜಿಲ್ಲೆಯಾದ್ಯಂತ ತಾಯಿ ಮತ್ತು ಮಕ್ಕಳ ಆರೋಗ್ಯ ಕಾಪಾಡುವುದಕ್ಕಾಗಿ ವಿಶೇಷ ಗಮನ ನೀಡಲಾಗುತ್ತಿದ್ದು, ಅದರ ಇಲಾಖಾ ಕಾರ್ಯಕರ್ತರು ಮೇಲ್ವಚಾರಕರು ಆರೋಗ್ಯ ಅಧಿಕಾರಿಗಳ ಮೂಲಕ ಗರ್ಭಿಣಿಯರ ದಾಖಲಾತಿ ಸೇವಾಸಲಹೆಗಳು ಹೆರಿಗೆ ಸೌಲಭ್ಯ ರಕ್ಷಿತ ಚುಚ್ಚುಮದ್ದು ಹಾಗೂ ಇದರ ಜನರಿಗೆ ತಿಳುವಳಿಕೆ ನೀಡುವುದು.

**ಪರಿಹಾರ, ಐ.ಯು.ಡಿ. ವ್ಯಾಸೆಕ್ಟಮಿ ಮತ್ತು ಟುಬೆಕ್ಟಮಿ:** ಜಿಲ್ಲೆಯಲ್ಲಿ ಕುಟುಂಬ ಕಲ್ಯಾಣ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಲು ಹಲವಾರು ಯೋಜಿತ ಕಾರ್ಯಕ್ರಮಗಳನ್ನು ರೂಪಿಸಲಾಗಿದೆ. ಅವುಗಳಲ್ಲಿ ಪ್ರಮುಖವಾದವುಗಳೆಂದರೆ. 1. ಟುಬೆಕ್ಟಮಿ ಶಸ್ತ್ರ ಚಿಕಿತ್ಸೆ 2. ಐಯುಡಿ ಅಳವಡಿಕೆ 3. ವ್ಯಾಸೆಕ್ಟಮಿ ಶಸಸ್ತ್ರ ಚಿಕಿತ್ಸೆ 4. ನಿರೋದ್ 5. ನುಂಗುವ ಗುಳಿಗೆಗಳು

**ಐ.ಯು.ಡಿ. ಕಾರ್ಯಕ್ರಮ:** ಈ ಕಾರ್ಯಕ್ರಮದಡಿಯಲ್ಲಿ 11398 ಗುರಿ ಹೊಂದಿದ್ದು ಈವರೆಗೆ 8572 ಅಳವಡಿಸಿದ್ದು ಶೇ.75ರಷ್ಟು ಪ್ರಗತಿ ಸಾಧಿಸಲಾಗಿದೆ. ನುಂಗುವ ಗುಳಿಗೆಯಲ್ಲಿ 101621 ಗುರಿ ಹೊಂದಿದ್ದು ಈವರೆಗೆ 61651 ಗುರಿ ಸಾಧಿಸಿದ್ದು ಶೇ. 6 ರಷ್ಟು ಪ್ರಗತಿ ಸಾಧಿಸಲಾಗಿದೆ. ನಿರೋಧ್‌ನಲ್ಲಿ 615096 ಗುರಿ ಹೊಂದಿದ್ದು, ಈವರೆಗೆ 621842 ಪ್ರಗತಿ ಸಾಧಿಸಿದ್ದು ಶೇ.101 ರಷ್ಟು ಪ್ರಗತಿ ಸಾಧಿಸಲಾಗಿದೆ. ಆರೋಗ್ಯ ಕುಟುಂಬ ಕಾಲ್ಯಾಣ ಕಾರ್ಯಕ್ರಮದಡಿ ಎಲ್ಲಾ ಕಾರ್ಯಕ್ರಮಗಳು ಜನ ಸಮುದಾಯದಲ್ಲೆ ತಲುಪಿ ಸಮಸ್ತ ಜನರ ಆರೋಗ್ಯ ಕುಟುಂಬ ಕಲ್ಯಾಣ ಪ್ರಗತಿಯನ್ನು ಸಾಧಿಸಲು ಈ ಯೋಜನೆಯನ್ನು ರೂಪಿಸಲಾಗಿದೆ.

**ಕುಷ್ಠರೋಗ ನಿಯಂತ್ರಣ ಯೋಜನೆ:** ಜಿಲ್ಲೆಯಾದ್ಯಂತ ಕುಷ್ಠರೋಗಿಗಳನ್ನು ಪ್ರಥಮ ಹಂತದಲ್ಲಿಯೇ ಪತ್ತೆಹಚ್ಚುವುದು. ಅಂಗವಿಕಲ ಕುಷ್ಠರೋಗಿಗಳಿಗೆ ಆರ್.ಸಿ.ಎಸ್ ಚಿಕಿತ್ಸೆ ಕೊಡಿಸುವುದು. ಹಳೆಯ ರೋಗಿಗಳಿಗೆ ಮರುನಿಗಾವಣೆ ಮಾಡುವುದು. ಹಾಗೂ ಕುಷ್ಠರೋಗಿಗಳಿಗೆ ಸರ್ಕಾರದಿಂದ ದೊರೆಯಬಹುದಾದ ಎಲ್ಲಾ ಸೌಲಭ್ಯಗಳನ್ನು ಅವರಿಗೆ ಕೊಡಿಸುವಲ್ಲಿ ಕ್ರಮವಹಿಸುವ ಉದ್ದೇಶ ಹೊಂದಿದೆ.

| **ತಾಲ್ಲೂಕುಗಳು** | **ಅಲೋಪತಿ ಆಸ್ಪತ್ರೆಗಳು** | **ಭಾರತೀಯ ವೈದ್ಯ ಪದ್ಧತಿ ಆಸ್ಪತ್ರೆಗಳು** | **ಪ್ರಾಥಮಿಕ ಆರೋಗ್ಯ ಕೇಂದ್ರ** | **ಸಮುದಾಯ ಆರೋಗ್ಯ ಕೇಂದ್ರ** | **ಖಾಸಗಿ ಆಸ್ಪತ್ರೆ** |
|---|---|---|---|---|---|
| ಚಿಕ್ಕನಾಯಕನಹಳ್ಳಿ | 16 | 2 | 15 | – | 23 |
| ಗುಬ್ಬಿ | 21 | – | 18 | 1 | 31 |
| ಕೊರಟಗೆರೆ | 13 | 1 | 12 | – | 23 |
| ಕುಣಿಗಲ್ | 20 | – | 20 | 1 | 40 |
| ಮಧುಗಿರಿ | 14 | 3 | 13 | – | 14 |
| ಪಾವಗಡ | 09 | – | 30 | 2 | 29 |
| ಸಿರಾ | 17 | – | 16 | 1 | 13 |
| ತಿಪಟೂರು | 13 | 2 | 12 | 1 | 41 |
| ತುಮಕೂರು | 22 | 4 | 21 | – | 283 |
| ತುರುವೇಕೆರೆ | 12 | – | 11 | – | 22 |

ಜಿಲ್ಲೆಯಲ್ಲಿ ಶ್ರೀದೇವಿ, ಶ್ರೀ ಸಿದ್ಧಾರ್ಥ ವೈದ್ಯಕೀಯ ಕಾಲೇಜು ಹಾಗೂ ಆಸ್ಪತ್ರೆಗಳು ಕಾರ್ಯನಿರ್ವಹಿಸುತ್ತಿವೆ. ಒಂದು ದಂತವೈದ್ಯ ಕಾಲೇಜು, 2 ಪಾಲಿಟೆಕ್ನಿಕ್ ಹಾಗೂ ಹತ್ತು ನರ್ಸಿಂಗ್ ಕಾಲೇಜುಗಳಿವೆ.

## ಕೃಷಿ:

ಕೃಷಿ ತುಮಕೂರು ಜಿಲ್ಲೆಯ ಪ್ರಧಾನ ಕಸುಬು. ಕೃಷಿಯೊಂದಿಗೆ ಪಶುಪಾಲನೆ ಎಲ್ಲ ಜನಾಂಗಗಳಲ್ಲಿಯೂ ಕಂಡುಬರುತ್ತದೆ. ಮಳೆಯಾಶ್ರಿತ ಕೃಷಿ ಇಲ್ಲಿನ ಸಂಪ್ರದಾಯವಾಗಿದೆ. ಅಲ್ಪ ಪ್ರಮಾಣದಲ್ಲಿ ಕೊಳವೆ ಬಾವಿಗಳನ್ನು ಅವಲಂಬಿಸಿದ ಕುಟುಂಬಗಳಿದ್ದರೂ, ಮಳೆ ಬೇಕೇ ಬೇಕಾಗಿದೆ. ತುಮಕೂರು ಜಿಲ್ಲೆ ಆಡಳಿತಾತ್ಮಕವಾಗಿ ಹತ್ತು ತಾಲ್ಲೂಕುಗಳನ್ನು ಒಳಗೊಂಡಿದ್ದು, ಮಧುಗಿರಿ, ಪಾವಗಡ ಹಾಗೂ

ಚಿಕ್ಕನಾಯಕನಹಳ್ಳಿ ತಾಲ್ಲೂಕುಗಳು ಬೆಟ್ಟ-ಗುಡ್ಡಗಳಿಂದ ಕೂಡಿದೆ. ಇಲ್ಲಿನ ಬೆಟ್ಟಗಳ ಭಾಗದಲ್ಲಿ ಕೃಷಿ ಕಾಯಕ ನಡೆಯುವುದಿಲ್ಲ. ಕುಣಿಗಲ್ ತಾಲ್ಲೂಕಿನ ಹುಲಿಯೂರುದುರ್ಗ ಹೋಬಳಿಯಲ್ಲಿಯೂ ಬೆಟ್ಟಗಳಿವೆ. ಉಳಿದಂತೆ ತುಮಕೂರು, ಗುಬ್ಬಿ, ತಿಪಟೂರು, ಕೊರಟಗೆರೆ ಸಮತಟ್ಟಾದ ಭೂಪ್ರದೇಶ ಹೊಂದಿದೆ. ಕೊರಟಗೆರೆ ಅಲ್ಪಪ್ರಮಾಣದ ಬೆಟ್ಟವನ್ನು ಹೊಂದಿದ ಪ್ರದೇಶವಾಗಿದ್ದು ಗಿಡಮೂಲಿಕೆಗೆ ಹೆಸರುವಾಸಿಯಾದ ಸಿದ್ದರಬೆಟ್ಟ, ಕುರಂಕೋಟೆ ಇವು ಕಾಡಿನ ಭೂವಲಯವಾಗಿದೆ. ತುಮಕೂರು, ಗುಬ್ಬಿ, ತಿಪಟೂರು, ತುರುವೇಕೆರೆ ಹಾಗೂ ಕುಣಿಗಲ್ ಸೇರಿದಂತೆ ಒಟ್ಟು 1,44,010 ಹೆಕ್ಟೇರ್ ಕೃಷಿಯೋಗ್ಯ ಭೂಪ್ರದೇಶವಿದ್ದರೆ, ಮಧುಗಿರಿ, ಪಾವಗಡ, ಚಿಕ್ಕನಾಯಕನಹಳ್ಳಿ ಇಲ್ಲಿ 61.482 ಪ್ರಮಾಣದಲ್ಲಿ ಕೃಷಿಭೂಮಿ ಇದೆ.

ತುಮಕೂರು ಜಿಲ್ಲೆಯಲ್ಲಿ ಮುಂಗಾರು ಮಾನ್ಸೂನ್ ಜುಲೈ ತಿಂಗಳ ಮೊದಲ ವಾರದಿಂದಲೇ ಆರಂಭವಾಗುತ್ತದೆ. ಏಪ್ರಿಲ್‌ನಲ್ಲಿ ಬೀಳುವ ಅಶ್ವಿನಿ, ಮೇ ತಿಂಗಳ ಕೃತ್ತಿಕಾ ಮಳೆಗಳು ರೈತಾಪಿಗಳ ಮೈ-ಮನ ಅರಳಿಸುವ ಮೊದಲ ಮಳೆಗಳು. ಇವು ಭೂಮಿಯನ್ನು ಉತ್ತು, ಹದ ಮಾಡಿಕೊಳ್ಳಲು ಸಹಾಯ ಮಾಡುತ್ತವೆ, ಬೇಸಿಗೆಯ ಧಗೆಯನ್ನು ಹೋಗಲಾಡಿಸುತ್ತವೆ, ಎಲ್ಲೆಡೆ ಹಸಿರು ಚಿಗುರುವಂತೆ ಮಾಡುತ್ತವೆ. ಆರಿದ್ರೆ ಮಳೆ ಭೂಮಿಗೆ ಕಾಳು ಅಥವಾ ಬೀಜ ಬಿತ್ತುವ ಮಳೆ. ಇದನ್ನು ಬೆದೆ ಬಂದ ಕಾಲ, ಬೆದೆ ತಂದ ಮಳೆ ಎಂಬ ಪರಿಕಲ್ಪನೆ ರೈತಾಪಿ ಜನರಲ್ಲಿದೆ. ಭರಣಿ ಮಳೆ ಬಂದರೆ ಧರಣಿಯೆಲ್ಲಾ ಫಲ ಎಂಬ ನಂಬಿಕೆಯೊಂದಿಗೆ ಭೂಮಿಯನ್ನು ಉಳುವವರಿಗೆ ಮೇಘರಾಜ ಸಹಾಯ ಮಾಡುತ್ತಾನೆ. ಮುಂದಿನ ಆಶ್ಲೇಷಾ, ಉತ್ತರೆ ಮಳೆಗಳು ತುಮಕೂರು ಜಿಲ್ಲೆಯಲ್ಲಿ ತಪ್ಪದೇ ಬರುವ ಭರವಸೆಯ ಮಳೆಗಳು. ಉತ್ತರೆ ಉತ್ತರಿಸಿದಂತೆ, ಹುತ್ತದೊಳಗಣ ಹಾವು, ಪ್ರಾಣಿಗಳು ಈಚೆಗೆ ಬರುವಂತೆ ಬೀಳುತ್ತದೆ. ಕೆರೆ-ಕಟ್ಟೆ ತುಂಬುವುದು ಇದೇ ಸಂದರ್ಭದಲ್ಲಿಯೇ.

ತುಮಕೂರು ಜಿಲ್ಲೆಯಲ್ಲಿ ಮುಂಗಾರು ಮತ್ತು ಹಿಂಗಾರು ಬೆಳೆ ಎಂಬ ಎರಡು ರೀತಿಯ ಕೃಷಿಪದ್ಧತಿಯಿದ್ದು ತಿಪಟೂರು, ಚಿಕ್ಕನಾಯಕನಹಳ್ಳಿ, ತುರುವೇಕೆರೆ ಈ ತಾಲ್ಲೂಕುಗಳಲ್ಲಿ ಮುಂಗಾರು ಬೆಳೆಯಾಗಿ ಹೆಸರು, ಜೋಳ, ಅಲಸಂದೆ, ಎಳ್ಳು ಬೆಳೆಯುತ್ತಾರೆ. ಮೇ-ಆಗಸ್ಟ್‌ವರೆಗೆ ಈ ಬೆಳೆಗಳನ್ನು ಬೆಳೆದು ನಂತರ ರಾಗಿ ಪೈರು ಹಾಕಿ ರಾಗಿ ಕೃಷಿಮಾಡುವುದು ವಾಡಿಕೆಯಾಗಿದೆ. ಸಿರಾ, ಮಧುಗಿರಿ, ಪಾವಗಡ, ಕೊರಟಗೆರೆ ಈ ಭಾಗಗಳಲ್ಲಿ ಒಂದೇ ಬೆಳೆಯನ್ನು ಬೆಳೆಯುತ್ತಾರೆ. ಶೇಂಗಾ ಇಲ್ಲಿನ ಮುಖ್ಯ ಬೆಳೆ. ಜೂನ್ ಮೊದಲ ವಾರದಲ್ಲಿ ಶೇಂಗಾ ಬೀಜವನ್ನು ಬಿತ್ತುತ್ತಾರೆ. ಇವು ನವೆಂಬರ್ ತಿಂಗಳಲ್ಲಿ ಉತ್ತಮ ಇಳುವರಿಯೊಂದಿಗೆ ಬೆಳೆ ಬರುತ್ತವೆ. ಇಲ್ಲಿ ರಾಗಿ, ಭತ್ತ ವಿರಳ. ಜೀವನೋಪಾಯ ಅಥವಾ ಊಟದ ಬಳಕೆಗೆ ಮಾತ್ರ ರಾಗಿ ಬೆಳೆದು ಉಳಿದಂತೆ ಶೇಂಗಾ ಬೆಳೆಯುತ್ತಾರೆ. ಆರಕ, ಕೊರಲೆ, ಸಜ್ಜೆ, ನವಣೆ ಈ ಬಗೆಯ ಬೆಳೆಗಳನ್ನು ದಿಣ್ಣೆ ಬೆಳೆಯಾಗಿ ಬೆಳೆಯುತ್ತಾರೆ. ಅಕ್ಕಡಿ ಬೆಳೆಯಾಗಿ ಅಲಸಂದೆ, ಪ್ರಧಾನ ಬೆಳೆಯಾಗಿ ತೊಗರಿಯನ್ನು ಬೆಳೆಯುತ್ತಾರೆ. ಹುರುಳಿ, ಕಡಲೆ ಸಣ್ಣ ಪ್ರಮಾಣದಲ್ಲಿ ಬೆಳೆಯುತ್ತಾರೆ. ಗುಬ್ಬಿ, ಚಿಕ್ಕನಾಯಕನಹಳ್ಳಿ, ತಿಪಟೂರು, ಕುಣಿಗಲ್, ತುರುವೇಕೆರೆ ಇಲ್ಲಿ ಪ್ರಧಾನ ಬೆಳೆ ರಾಗಿ. ಕಪ್ಪು ಮಿಶ್ರಿತ ಮರಳು ಮಣ್ಣನ್ನು ಹೊಂದಿದ್ದು ಇಲ್ಲಿ ರಾಗಿ, ಅವರೆ, ಹುರುಳಿ, ಭತ್ತ, ಜೋಳ ವಿರಳವಾಗಿ ಶೇಂಗಾ ಬೆಳೆಯುತ್ತಾರೆ. ಚಿಕ್ಕನಾಯಕನಹಳ್ಳಿ ತಾಲ್ಲೂಕು ಹೊಯ್ಸಳಕಟ್ಟೆ, ದಬ್ಬಕುಂಟೆ, ಗಾಣದಾಳ ಈ ಭಾಗಗಳಲ್ಲಿ ಆರಕ, ನವಣೆ, ಸಜ್ಜೆ, ಬರಕ, ಸಾವೆಯನ್ನು ಇಂದಿಗೂ ಅಧಿಕವಾಗಿ ಬೆಳೆಯುತ್ತಾರೆ. ತಿಪಟೂರು, ಗುಬ್ಬಿ, ತುರುವೇಕೆರೆ, ಚಿಕ್ಕನಾಯಕನಹಳ್ಳಿಗಳಲ್ಲಿ ಕೃಷಿಯೊಂದಿಗೆ ತೆಂಗು, ಅಡಿಕೆ ಬೆಳೆಯೂ ಇದೆ. ವಿರಳವಾಗಿ ಮಾವು, ಹಲಸಿನ ಬೆಳೆ ಕಂಡುಬರುತ್ತದೆ. ಗುಬ್ಬಿ ತಾಲ್ಲೂಕಿನ ಕೋಡಿಪಾಳ್ಯ, ತುಮಕೂರು ನಗರ, ಗುಬ್ಬಿ ಸಮೀಪದ ಚಿಕ್ಕೋನಹಳ್ಳಿ ಇಲ್ಲೆಲ್ಲಾ ತರಕಾರಿ ಬೆಳೆ ಅಧಿಕವಾಗಿರುತ್ತದೆ. ಅಡಿಕೆ ವ್ಯಾಪಾರವು ಮೂಗನಾಯಕನಕೋಟೆ, ತ್ಯಾಗಟೂರು, ನಿಟ್ಟೂರು, ಚೇಳೂರು ಇಲ್ಲಿ ಅಧಿಕವಾಗಿದೆ.

ತುಮಕೂರು ಜಿಲ್ಲೆಯ ಸಿರಾ ತಾಲ್ಲೂಕಿನ ಚಿಕ್ಕನಹಟ್ಟಿಯಲ್ಲಿ ಕೃಷಿ ತರಬೇತಿ ಹಾಗೂ ಸಂಶೋಧನಾ ಕೇಂದ್ರವಿದ್ದು ರೈತರಿಗೆ, ರೈತ ಮಕ್ಕಳಿಗೆ ಕೃಷಿ ತರಬೇತಿ ನೀಡಲಾಗುತ್ತದೆ. ಅಂತೆಯೇ ತಿಪಟೂರು ತಾಲ್ಲೂಕು ಬಿದರೆಗುಡಿ ಕಾವಲ್ ಇಲ್ಲಿ ಬೆಂಗಳೂರು ಕೃಷಿ ವಿಶ್ವವಿದ್ಯಾಲಯ ಜಿಕೆವಿಕೆಯ ಒಂದು ಉಪಕೇಂದ್ರವಿದ್ದು ಕೃಷಿ ಅಭಿವೃದ್ಧಿಯ ದಿಸೆಯಿಂದ ಕೆಲಸ ನಿರ್ವಹಿಸುತ್ತಿದೆ.

ಕೃಷಿ ಉಪನಿರ್ದೇಶಕರು, ಜಿಲ್ಲಾ ಹಂತ, ತಾಲ್ಲೂಕು ಕೇಂದ್ರಗಳಲ್ಲಿ ಕೃಷಿ ಸಹಾಯಕ ನಿರ್ದೇಶಕರು, ಹೋಬಳಿ ಹಂತದಲ್ಲಿ ಕೃಷಿ ಅಧಿಕಾರಿ, ಕೃಷಿ ಸಹಾಯಕರು ಇದ್ದು ಮಳೆ-ಬೆಳೆ, ಲಾಭ-ನಷ್ಟ, ಪರಿಹಾರ ಒದಗಿಸುವ ದಿಸೆಯಲ್ಲಿ ಕಾರ್ಯನಿರ್ವಹಿಸುತ್ತಾರೆ. ಕೃಷಿ ಭೂಮಿ ಅಭಿವೃದ್ಧಿಗಾಗಿ ಹೊಲಗಳಲ್ಲಿ ಬಂಡು ನಿರ್ಮಿಸುವುದು, ಚೆಕ್ ಡ್ಯಾಂ ಮೂಲಕ ನೀರು ತಡೆಯುವುದು, ಉತ್ತಮ ಬೀಜ ವಿತರಣೆ, ರಸಗೊಬ್ಬರ ಹಂಚಿಕೆ, ಬೆಳೆ ನಷ್ಟದ ಪರಿಹಾರ ಈ ಬಗೆಯ ಕಾರ್ಯ ಚಟುವಟಿಕೆಯನ್ನು ಸ್ಥಳೀಯ ಕೃಷಿ ಅಧಿಕಾರಿಗಳು ನಿರ್ವಹಿಸುತ್ತಿದ್ದಾರೆ.

**ತುಮಕೂರು ಜಿಲ್ಲೆಯ ಒಟ್ಟು ಕೃಷಿ ಭೂಮಿ ಹಿಡುವಳಿದಾರರು ಮತ್ತು ವಿಸ್ತೀರ್ಣ:**

| ತಾಲ್ಲೂಕುಗಳು | ಡುವ ದಾರರ ಸಂಖ್ಯೆ | | | } "ಣ~ ಹೊಂ' ರುವವರು | | |
|---|---|---|---|---|---|---|
| | [illegible] | [illegible] | ಸಂಸ್ಥೆಗಳು | [illegible] | [illegible] | ಸಂಸ್ಥೆಗಳು |
| [illegible] | 33222 | 7404 | 45 | 57572.62 | 10383.52 | 95.03 |
| ಗುಬ್ಬಿ | 42055 | 9964 | 4 | 60614.55 | 10860.56 | 11.32 |
| ಕೊರಟಗೆರೆ | 22260 | 6404 | 1 | 34828.43 | 8393.37 | 1.91 |
| ಕುಣಿಗಲ\ | 29214 | 6437 | 16 | 45606.97 | 8038.43 | 52.51 |
| ಮದು ರಿ | 33961 | 8999 | 6 | 59960.26 | 11957.18 | 4.05 |
| ಪಾವಗಡ | 28083 | 9573 | 15 | 80848.78 | 23379.83 | 66.38 |
| [illegible] | 37333 | 10656 | 5 | 80212.75 | 19360.09 | 113.37 |
| [illegible] | 30372 | 8492 | 118 | 42615.10 | 9175.20 | 813.40 |
| [illegible] | 39611 | 12804 | 16 | 51135.34 | 11961.01 | 127.48 |
| [illegible] | 30668 | 6670 | 20 | 44600.17 | 6556.57 | 42.24 |
| ಲ್ಲಾಮೊತ್ತ | 326779 | 87403 | 246 | 554994.97 | 120065.76 | 1327.69 |

ಹೂವಿನ ಬೆಳೆ ಮತ್ತು ಬಾಳೆ ಬೆಳೆಗಳು ವ್ಯಾಪಾರಿ ಸರಕಾಗಿದೆ. ಕೊಬ್ಬರಿ ಮಂಡಿಗಳು ಜಿಲ್ಲೆಯ ಗುಬ್ಬಿ, ಕುಣಿಗಲ್, ತುರುವೇಕೆರೆ, ಚಿಕ್ಕನಾಯಕನಹಳ್ಳಿ, ಚೇಳೂರು, ಸಿರಾ, ಕಡಬ ಇಲ್ಲೆಲ್ಲಾ ಇವೆ. ಮಾವಿನ ಹಾಗೂ ಬಾಳೆಕಾಯಿ ಮಂಡಿಗಳು ವ್ಯಾಪಾರಿ ಸರಕಾಗಿವೆ. ಮಧುಗಿರಿ, ಬಡವನಹಳ್ಳಿ, ಹೆಬ್ಬೂರು, ನಾಗವಲ್ಲಿ, ಗುಬ್ಬಿ ಇಲ್ಲೆ ಹೆಚ್ಚಿನ ಪ್ರಮಾಣದಲ್ಲಿ ಕಾಕಡ, ಮಲ್ಲಿಗೆ, ಬಟನ್ಸ್, ಕನಕಾಂಬರ ಹೂ ಬೆಳೆಯುತ್ತಾರೆ. ಇಲ್ಲಿ ಬೆಳೆದ ಹೂಗಳು ಕೊಲ್ಲಾಪುರ, ಗೋವಾ, ಬಾಂಬೆ, ಬೆಳಗಾಂ ಕಡೆಗೆ ರಫ್ತಾಗುತ್ತವೆ. ಬಡವನಹಳ್ಳಿ, ಸಿರಾ ತಾಲ್ಲೂಕಿನ ಚಿಕ್ಕನಹಳ್ಳಿ ಇಲ್ಲಿ ಹೂವಿನ ಬೃಹತ್ ಮಾರುಕಟ್ಟೆಗಳಿವೆ. ಸರಾಸರಿ 20–25 ಕ್ವಿಂಟಲ್ ಹೂ ತುಮಕೂರು ಜಿಲ್ಲೆಯಿಂದ ಹೊರಗೆ ರಫ್ತಾಗುತ್ತಿದೆ.

ತುಮಕೂರು ಜಿಲ್ಲೆಯ ವಾರ್ಷಿಕ ವಾಡಿಕೆ ಮಳೆ 593.0 ಮಿ.ಮೀ ಆಗಿರುತ್ತದೆ. 2013 ರಲ್ಲಿ 550.20 ಮಿ.ಮೀ ಆಗಿದ್ದು, 2012 ರಲ್ಲಿ 478.70 ಮಿ.ಮೀ ಮಳೆ ಆಗಿರುತ್ತದೆ. ಪ್ರಸಕ್ತ ಸಾಲಿನಲ್ಲಿ ಮಳೆಯು ಜಿಲ್ಲೆಯ ಎಲ್ಲಾ ಪ್ರದೇಶಗಳಲ್ಲಿ ಸಮರ್ಪಕವಾಗಿ ಹಂಚಿಕೆಯಾಗದೇ ಅಲ್ಲಲ್ಲಿ ಚದುರಿದಂತೆ ಮಳೆ ಆಗಿದ್ದು, ಪೂರ್ವ ಮುಂಗಾರು ಬೆಳೆಗಳ ಮತ್ತು ಮುಂಗಾರು ಬೆಳೆಗಳ ಪೂರ್ಣ ಪ್ರಮಾಣದ ಬಿತ್ತನೆಗೆ ಸಹಕಾರಿಯಾಗಲಿಲ್ಲ. ಅಲ್ಲಲ್ಲಿ ಬಿದ್ದ ಮಳೆಯನ್ನನುಸರಿಸಿ ರೈತರು ಬಿತ್ತನೆ ಕೈಗೊಂಡಿದ್ದರೂ ಹಲವು ಪ್ರದೇಶಗಳಲ್ಲಿ ಶುಷ್ಕ ವಾತಾವರಣದಿಂದ ಬೆಳವಣಿಗೆ ಹಂತ, ತೆಂಡೆ ಹಂತ ಮತ್ತು ಹೂವಿನ ಹಂತದಲ್ಲಿ ತೇವಾಂಶದ ಕೊರತೆಯಿಂದ ಬೆಳೆಗಳು ಬಾಡಿ/ಒಣಗಿ ಇಳುವರಿಯ ಮೇಲೆ ಪರಿಣಾಮ ಬೀರಿತು. ಸೆಪ್ಟೆಂಬರ್‌ನಲ್ಲಿ ವಾಡಿಕೆ ಮಳೆಯಾದ 135.9 ಮಿ.ಮೀಗೆ, 227.5 ಮಿ.ಮೀ ರಷ್ಟು ಮಳೆಯಾಗಿದ್ದು ಇದು ಒಟ್ಟಾರೆ ವಾಸ್ತವಿಕ ಮಳೆಗೆ ಹೋಲಿಸಿದಲ್ಲಿ ಶೇ.41.34 ರಷ್ಟಿರುತ್ತದೆ ಹಾಗು ಬೆಳೆಗಳ ಇಳುವರಿಗೆ ಯಾವುದೇ ರೀತಿಯಲ್ಲಿ ಸಹಕಾರಿಯಾಗಿರುವುದಿಲ್ಲ.

**ಬೆಳೆಗಳು:**

ತುಮಕೂರು ಜಿಲ್ಲೆಯ ಮಣ್ಣು ವಿಶಿಷ್ಟ ಗುಣಗಳಿಂದ ಕೂಡಿದೆ. ತುಮಕೂರು, ಕೊರಟಗೆರೆ, ಮಧುಗಿರಿ ಹಾಗೂ ಕುಣಿಗಲ್ ಈ ತಾಲ್ಲೂಕುಗಳ ಮಣ್ಣು ಕೆಂಪುಮಿಶ್ರಿತ ಜೇಡಿ ಮಣ್ಣಿನಿಂದ ಕೂಡಿದೆ. ಸಿರಾ, ತುರುವೇಕೆರೆ, ತಿಪಟೂರು, ಗುಬ್ಬಿ ಈ ಭಾಗದ ಮಣ್ಣು ಕೆಂಪುಮಿಶ್ರಿತ ಮರಳು ಮಣ್ಣನ್ನು ಕಾಣಬಹುದು. ಚಿಕ್ಕನಾಯಕನಹಳ್ಳಿಯ ವಾಯವ್ಯ ಭಾಗವನ್ನು ಹೊರತುಪಡಿಸಿದರೆ ಉಳಿದೆಲ್ಲಾ ಕಡೆ ಕಪ್ಪು ಮಿಶ್ರಿತ ಎರೆಭೂಮಿಯನ್ನು ಹೊಂದಿದೆ. ಹಾಗಾಗಿ ತುಮಕೂರು ಜಿಲ್ಲೆಯ ಬೆಳೆಗಳ ಪ್ರಮಾಣದಲ್ಲಿಯೂ ಭಿನ್ನತೆಯನ್ನು ಕಾಣಬಹುದು. ಸಿರಾ, ಮಧುಗಿರಿ, ಪಾವಗಡ, ಕೊರಟಗೆರೆಯ ಅರ್ಧಭಾಗದ ಮುಖ್ಯ ಬೆಳೆ ಶೇಂಗಾ ಆಗಿದೆ. ಉಳಿದಂತೆ ರಾಗಿ, ತೊಗರಿ, ಅಲಸಂದೆ, ಹುರುಳಿ ಬೆಳೆಯುತ್ತಾರೆ. ದಟ್ಟವಾಗಿ ಬೆಳೆಯುತ್ತಿದ್ದ ಆರಕ, ನವಣೆ, ಕೊರಲೆ ಈ ಧಾನ್ಯಗಳು ಇಂದು ಕಾಣದಾಗಿವೆ. ಗುಬ್ಬಿ, ತುರುವೇಕೆರೆ, ತಿಪಟೂರು, ಕುಣಿಗಲ್ ಈ ಭಾಗಗಳಲ್ಲಿ ಪ್ರಮುಖ ಬೆಳೆ ರಾಗಿ. ಅವರೆ, ತೊಗರಿ, ಅಲಸಂದೆ ಬೆಳೆಯುತ್ತಾರೆ. ಕೆರೆ ನೀರಿನ ಆಧಾರದಿಂದ ಹಾಗೂ ತಗ್ಗು ಭೂಪ್ರದೇಶದಲ್ಲಿ ಭತ್ತದ ಬೆಳೆಯನ್ನು ಬೆಳೆಯುತ್ತಾರೆ. ಜೊತೆಗೆ ಗುಬ್ಬಿ, ತಿಪಟೂರು, ಚಿಕ್ಕನಾಯಕನಹಳ್ಳಿ, ತುರುವೇಕೆರೆ ಈ ತಾಲ್ಲೂಕುಗಳಲ್ಲಿ ತೆಂಗು ಪ್ರಮುಖ ವಾಣಿಜ್ಯ ಬೆಳೆಯಾಗಿದೆ. ಅಡಕೆ, ಮಾವು, ಹಲಸಿನ ಬೆಳೆಯಾಗಿದೆ. ಹಾಸನ ಜಿಲ್ಲೆಯ

ಗೊರೂರಿನ ಹೇಮಾವತಿ ಜಲಾಶಯದಿಂದ ಜಿಲ್ಲೆಯ ಗುಬ್ಬಿ, ತುರುವೇಕೆರೆ, ತಿಪಟೂರಿನ ಆಯ್ದ ಕೆರೆಗಳಿಗೆ ನೀರು ಹರಿಸಿ ಕುಡಿಯಲು ಹಾಗೂ ತೋಟಗಾರಿಕೆಗೆ ಉತ್ತೇಜನ ನೀಡಲಾಗಿದೆ.

## ತೋಟಗಾರಿಕೆ:

ಜಿಲ್ಲೆಯ ಭೌಗೋಳಿಕ ವಿಸ್ತೀರ್ಣವು ಸುಮಾರು 10,596 ಚದರ ಕಿ.ಮೀಗಳಷ್ಟಿದ್ದು, ರಾಜ್ಯದ ಒಟ್ಟು ವಿಸ್ತೀರ್ಣದಲ್ಲಿ ಶೇಕಡಾ 5.589 ರಷ್ಟಿದೆ. ರಾಜ್ಯದ ಜಿಲ್ಲೆಗಳ ವಿಸ್ತೀರ್ಣಕ್ಕೆ ಹೋಲಿಸಿದಾಗ ತುಮಕೂರು ಜಿಲ್ಲೆಯು 3 ನೇ ಸ್ಥಾನ ಪಡೆದಿರುತ್ತದೆ. ಜಿಲ್ಲೆಯ ಬಹುತೇಕ ಪ್ರದೇಶ ಕೆಂಪು ಮತ್ತು ಮರಳು ಮಿಶ್ರಿತ ಕೆಂಪು ಮಣ್ಣಿನಿಂದ ಕೂಡಿರುತ್ತದೆ.

**ಜಿಲ್ಲೆಯ ಮುಖ್ಯ ತೋಟಗಾರಿಕೆ ಬೆಳೆಗಳು:**

ಜಿಲ್ಲೆಯಲ್ಲಿ ರೈತರು ಹೆಚ್ಚಿನ ಆಸಕ್ತಿ ವಹಿಸಿ ತೋಟದ ಬೆಳೆಗಳು, ಹಣ್ಣುಗಳು, ತರಕಾರಿ, ಹೂವುಗಳು, ಸಾಂಬಾರು ಬೆಳೆಗಳು ಮತ್ತು ಔಷದಿ ಸಸ್ಯಗಳ ತೋಟಗಾರಿಕೆ ಬೆಳೆಗಳನ್ನು ಬೆಳೆಯುತ್ತಿದ್ದಾರೆ. ಅವುಗಳಲ್ಲಿ ಪ್ರಮುಖವಾಗಿ ತೆಂಗು, ಅಡಿಕೆ, ಬಾಳೆ, ಮಾವು, ಸಪೋಟ, ದಾಳಿಂಬೆ, ಹುಣಸೆ, ಎಲೆಬಳ್ಳಿ, ಮೆಣಸಿನಕಾಯಿ, ಟೊಮೆಟೋ, ಬದನೆ, ಹುರಳಿಕಾಯಿ ಮತ್ತು ಪುಷ್ಪ ಬೆಳೆಗಳನ್ನು ಬೆಳೆಯುತ್ತಿದ್ದಾರೆ. ಜಿಲ್ಲೆಯ ಬಿತ್ತನೆ ವಿಸ್ತೀರ್ಣ 707955 ಹೆಕ್ಟೇರ್ ಇದ್ದು, ಇದರಲ್ಲಿ 212064 ಹೆಕ್ಟೇರ್ ವಿಸ್ತೀರ್ಣದಲ್ಲಿ ತೋಟಗಾರಿಕೆ ಬೆಳೆ ಇರುತ್ತದೆ.

**ಹವಾಮಾನ ಗುಣಗಳು:**

ತುಮಕೂರು ಜಿಲ್ಲೆಯ ಉಷ್ಣಾಂಶ 18 ಸೆಂಟಿಗ್ರೇಡ್‌ನಿಂದ 38 ಸೆಂಟಿಗ್ರೇಡ್ ಇದ್ದು, ಒಣ ಹವೆಯಿಂದ ಕೂಡಿರುತ್ತದೆ. ಜಿಲ್ಲೆಯಲ್ಲಿ ನೈರುತ್ಯ ಮಾರುತದಿಂದ ಜೂನ್ ತಿಂಗಳಲ್ಲಿ ಮಳೆ ಪ್ರಾರಂಭವಾಗಿ ಸೆಪ್ಟಂಬರ್ ತಿಂಗಳವರೆಗೂ ಬೀಳುತ್ತದೆ. ಈಶಾನ್ಯ ಮಾರುತದಿಂದ ಅಕ್ಟೋಬರ್ ತಿಂಗಳಲ್ಲಿ ಮಳೆ ಪ್ರಾರಂಭವಾಗಿ ನವೆಂಬರ್ ತಿಂಗಳ ಕೊನೆಯವರೆಗೆ ಬೀಳುತ್ತದೆ. ಡಿಸೆಂಬರ್ ತಿಂಗಳಲ್ಲಿ ಚಳಿಗಾಲ ಪ್ರಾರಂಭವಾಗಿ ಪೆಬ್ರವರಿ ತಿಂಗಳ ಕೊನೆಯವರೆಗೆ ಇರುತ್ತದೆ. ಬೇಸಿಗೆ ಮಾರ್ಚ್‌ನಿಂದ ಮೇ ತಿಂಗಳ ಕೊನೆಯವರೆಗೆ ಇರುತ್ತದೆ. ಜಿಲ್ಲೆಯ ವಾಡಿಕೆ ಮಳೆ 593.0 ಮಿ.ಮೀ ಇದ್ದು, 2014 ರ ವರ್ಷದಲ್ಲಿ ವಾಸ್ತವಿಕ ಸರಾಸರಿ 579.90 ಮೀ.ಮೀ ಬಿದ್ದಿರುತ್ತದೆ. ಜಿಲ್ಲೆಯಲ್ಲಿ ಒಟ್ಟಾರೆ ಹವಾಮಾನ ತೋಟಗಾರಿಕೆ ಬೆಳೆಗಳಿಗೆ ಉತ್ತೇಜನಕಾರಿಯಾಗಿದೆ.

ಹವಾಮಾನಕ್ಕನುಗುಣವಾಗಿ ಜಿಲ್ಲೆಯನ್ನು ಮೂರು ವಲಯಗಳನ್ನಾಗಿ ವಿಂಗಡಿಸಲಾಗಿದೆ.

1. ಮಧ್ಯ ಒಣ ಪ್ರದೇಶ : ಪಾವಗಡ, ಸಿರಾ, ಮಧುಗಿರಿ, ಕೊರಟಗೆರೆ, ಚಿಕ್ಕನಾಯಕನಹಳ್ಳಿ, ತಿಪಟೂರು.
2. ದಕ್ಷಿಣ ಒಣ ಪ್ರದೇಶ : ಕುಣಿಗಲ್ ಮತ್ತು ತುರುವೇಕೆರೆ ತಾಲ್ಲೂಕುಗಳು.
3. ಪೂರ್ವ ಒಣ ಪ್ರದೇಶ : ತುಮಕೂರು ಮತ್ತು ಗುಬ್ಬಿ ತಾಲ್ಲೂಕುಗಳು.

ತೋಟಗಾರಿಕೆ ಬೆಳೆಗಾರರ ಮೂಲಕ ತೋಟಗಾರಿಕೆ ಬೆಳೆಗಳನ್ನು ಅಭಿವೃದ್ಧಿಗೊಳಿಸುವ ಒಂದು ಕಾರ್ಯ ನೀತಿಯನ್ನು ಹೊಂದಿದೆ. ಯೋಗ್ಯ ಗುಣಮಟ್ಟದ ಬೀಜಗಳನ್ನು ಮತ್ತು ಕಸಿ ಸಸಿಗಳನ್ನು ಸರಬರಾಜು ಮಾಡುವುದು, ಬೇಸಾಯದ ಕ್ರಮಗಳಲ್ಲಿ ಮತ್ತು ಸಸ್ಯ ಸಂರಕ್ಷಣಾ ಕ್ರಮಗಳಲ್ಲಿ ತಾಂತ್ರಿಕ ತಿಳುವಳಿಕೆ ಹಾಗೂ ಸಲಹೆ ನೀಡುವುದು. ರೈತರಿಗೆ ತೋಟಗಾರಿಕೆ ತರಬೇತಿ ನೀಡುವುದು. ದುರ್ಬಲ ವರ್ಗದ ಮತ್ತು ಆರ್ಥಿಕವಾಗಿ ಹಿಂದುಳಿದ ರೈತರುಗಳಿಗೆ ಹಾಗೂ ಬುಡಕಟ್ಟಿನ ಜನಾಂಗಕ್ಕೆ ಅವರ ಅರ್ಥಿಕ ಸ್ಥಿತಿಗತಿಗಳನ್ನು ಸುಧಾರಿಸಿಕೊಳ್ಳಲು ತೋಟಗಾರಿಕೆ ಬೆಳೆಗಳನ್ನು ಬೆಳೆಯುವುದಕ್ಕೆ ಸಹಾಯ ಮಾಡುವುದು. ಹೊಸದಾಗಿ ಕೃಷಿ ವಿಶ್ವ ವಿದ್ಯಾನಿಲಯ ಹಾಗೂ ಸಂಶೋಧನಾ ಕೇಂದ್ರಗಳಿಂದ ಬಿಡುಗಡೆಯಾದ ತಳಿಗಳನ್ನು ರೈತರಿಗೆ ಶಿಫಾರಸ್ಸು ಮಾಡುವುದು. ಫಲ ಪುಷ್ಪ ಪ್ರದರ್ಶನ, ಸಿದ್ದಗಂಗೆಯ ಜಾತ್ರೆ ಹಾಗೂ ಇತರೆ ಜಾತ್ರೆಗಳ ಸ್ಥಳಗಳಲ್ಲಿ ಕೈಗಾರಿಕಾ ಮತ್ತು ವಸ್ತು ಪ್ರದರ್ಶನ ಏರ್ಪಡಿಸಿ ಪ್ರದರ್ಶಿಕೆಗಳ ಮೂಲಕ ತೋಟಗಾರಿಕೆ ತಾಂತ್ರಿಕತೆಯನ್ನು ಪ್ರಚಾರ ಮಾಡುವುದು. ಇಲಾಖಾ ಮಾರ್ಗದರ್ಶನದಂತೆ ವಿವಿಧ ಯೋಜನೆಗಳಡಿ ರೈತರಿಗೆ ಸಹಾಯಧನ ನೀಡುವುದು ಇವು ತೋಟಗಾರಿಕೆ ಇಲಾಖೆಯ ಮೂಲ ಉದ್ದೇಶವಾಗಿವೆ.

ತಾಲ್ಲೂಕು ಮಟ್ಟಗಳಲ್ಲಿ ಪ್ರತಿ ತಾಲ್ಲೂಕಿನಲ್ಲೂ ತೋಟಗಾರಿಕೆ ಕಛೇರಿ ಇದ್ದು, ಕಛೇರಿ ಮುಖ್ಯಸ್ಥರಾಗಿ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು/ಸಹಾಯಕ ತೋಟಗಾರಿಕೆ ನಿರ್ದೇಶಕರು ಕಾರ್ಯನಿರ್ವಹಣೆ ಮಾಡುತ್ತಿದ್ದಾರೆ. ಇವರ ಸಹಾಯಕ್ಕಾಗಿ ಪ್ರತಿ ಕಛೇರಿಯಲ್ಲಿ ಒಬ್ಬ ಸಹಾಯಕ ತೋಟಗಾರಿಕೆ ಅಧಿಕಾರಿ ಮತ್ತು ತೋಟಗಾರಿಕೆ ಸಹಾಯಕರು ಇರುತ್ತಾರೆ. ಹಾಗೂ ಹೋಬಳಿ ಮಟ್ಟದ

ರೈತ ಸಂಪರ್ಕ ಕೇಂದ್ರಗಳಲ್ಲಿ ಒಬ್ಬರು ಸಹಾಯಕ ತೋಟಗಾರಿಕೆ ಅಧಿಕಾರಿಗಳಿದ್ದಾರೆ. ಇವರುಗಳು ರೈತರುಗಳಿಗೆ ತೋಟಗಾರಿಕೆ ಬೆಳೆಗಳ ಬಗ್ಗೆ ತಿಳುವಳಿಕೆ, ತಾಂತ್ರಿಕ ಸಲಹೆ ಹಾಗೂ ಮಾರ್ಗದರ್ಶನ ನೀಡುವುದಲ್ಲದೆ ಇಲಾಖೆಯು ರೂಪಿಸಿದ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುತ್ತಾರೆ.

**ತುಮಕೂರು ಜಿಲ್ಲೆಯ ತೋಟಗಾರಿಕೆ ಕ್ಷೇತ್ರಗಳು**

| [illegible] | ತಾಲ್ಲೂಕುಗಳು | ತೋಟಗಾರಿಕೆ [illegible] | ಒಟ್ಟು [illegible] (ರೂ.ಗಳ [illegible]) |
|---|---|---|---|
| 1. | [illegible] | [illegible]ನರ್ಸರಿ | 441857–00 |
| 2. | | 9ಡುವಳಲು ತೋಟಗಾರಿಕೆ [illegible] | 714169–00 |
| 3. | ಕುಣಿಗಲ್ | ರಂಗಸ್ವಾ}ುಗುಡಜತೋಟಗಾರಿಕೆ [illegible] | 602710–00 |
| 4. | | [illegible]ಕೊ~ೀನಹ[illegible] ತೋಟಗಾರಿಕೆ [illegible] | 241840–00 |
| 5 | | ಬಿ ದೇವಾಲಯ ತೋಟಗಾರಿಕೆ [illegible] | 29640–00 |
| 6 | | ಮಂಗಳ ತೋಟಗಾರಿಕೆ [illegible] | 124420–00 |
| 7 | ಪಾವಗಡ | ಗಿೊ೦[illegible] ತೋಟಗಾರಿಕೆ [illegible] | 11341–00 |
| 8 | ಮಧು ರಿ | ಇಂ' ರಾ ತೋಟಗಾರಿಕೆ [illegible] | 275774–00 |
| 9 | [illegible] | ಜೆ.".ಪುರ ತೋಟಗಾರಿಕೆ [illegible] | 128273–00 |
| 10 | ಗುಬ್ಬಿ | [illegible] ತೋಟಗಾರಿಕೆ [illegible] | 435635–00 |
| 11 | | ಕೆ.ಮ0ತ್ತಘಟ್ಟ ತೋಟಗಾರಿಕೆ [illegible] | 226002–00 |
| 12 | [illegible]ಗಿೊ | [illegible]ಗಿೊ ನಸ~ರಿ ತೋಟಗಾರಿಕೆ [illegible] | 7225–00 |
| 13 | | ಮು' ಗೆರೆ ತೋಟಗಾರಿಕೆ [illegible] | 197642–00 |
| 14 | ಕೊರಟಗೆರೆ | ಡಾ॥ಎಂ.ಹೆಚ್.ಮರಿಗೌಡ ತೋಟಗಾರಿಕೆ [illegible] | 786165–00 |
| 15 | | ವಡ್ಡಗೆರೆ ತೋಟಗಾರಿಕೆ [illegible] | 36923–00 |
| 16 | [illegible] | [illegible]' ಹ[illegible] ತೋಟಗಾರಿಕೆ [illegible] | 307642–00 |
| 17 | [illegible] | ಗೊರಗೊಂಡನಹ[illegible] ತೋಟಗಾರಿಕೆ [illegible] | 258350–00 |
| 18 | [illegible] | [illegible]ಧಮ~}ೀರ ತೋಟಗಾರಿಕೆ [illegible] | 134286–00 |
| | | ಒಟ್ಟು | **4959894-00** |

**ಹನಿ ನೀರಾವರಿ ಯೋಜನೆ:** ಈ ಯೋಜನೆಯಲ್ಲಿ ಅಡಿಕೆ, ತೆಂಗು, ಬಾಳೆ, ಮಾವು, ಸಪೋಟ, ದಾಳಿಂಬೆ, ನುಗ್ಗೆ, ಪಪ್ಪಾಯಿ,ದ್ರಾಕ್ಷಿ, ಮತ್ತು ಇತರೆ ತೋಟಗಾರಿಕೆ ಬೆಳೆ ಬೆಳೆಯುವ ರೈತರಿಗೆ ಹನಿ ನೀರಾವರಿ ಅಳವಡಿಕೆಗೆ ಸಹಾಯಧನ ನೀಡಿ ರೈತರನ್ನು ಉತ್ತೇಜಿಸಲಾಗಿದೆ. ಈ ಯೋಜನೆಯಡಿಯಲ್ಲಿ ಜಿಲ್ಲಾ ಪಂಚಾಯತ್‌ನಿಂದ ರೂ. 50.00 ಲಕ್ಷಗಳು ಬಿಡುಗಡೆ ಆಗಿದ್ದು, 50.00 ಲಕ್ಷ ರೂ. ಗಳನ್ನು ಸ್ವಿಕರ್ತನ ರಸೀದಿ, ಬಿಲ್ಲಿನ ಮೂಲಕ ನಗದೀಕರಿಸಿ, ಕೇಂದ್ರ ಸರ್ಕಾರದಿಂದ ಸೂಕ್ಷ್ಮ ನೀರಾವರಿ ಸಹಾಯ ಧನ ಅನುದಾನಕ್ಕೆ ಹೊಂದಾಣಿಕೆ ಮಾಡಿ ಪೂರ್ಣ ಪ್ರಗತಿ ಸಾಧಿಸಲಾಗಿದೆ.

**ತೆಂಗು ಬೀಜ ಸಂಗ್ರಹಣೆ ಮತ್ತು ನರ್ಸರಿ ನಿರ್ವಹಣೆ:** A) **ತೆಂಗು ಬೀಜ ಸಂಗ್ರಹಣೆ ಮತ್ತು ನರ್ಸರಿ ನಿರ್ವಹಣೆ:** ಈ ಯೋಜನೆಯಡಿ 27157 ಉತ್ತಮ ಗುಣ ಮಟ್ಟದ ಬೀಜದ ತೆಂಗಿನ ಕಾಯಿ ಸಂಗ್ರಹಣೆ ಮಾಡಿ ಇಲಾಖಾ ನರ್ಸರಿಗಳಲ್ಲಿ ಬೆಳೆಸಿ ರೈತರಿಗೆ ಉತ್ಕೃಷ್ಟ ತೆಂಗಿನ ಗಿಡಗಳನ್ನು ಮಾರಾಟ ಮಾಡಲು ವ್ಯವಸ್ಥೆ ಮಾಡಲಾಗಿದೆ. ವಿವಿಧ ತೊಟಗಾರಿಕೆ ಕ್ಷೇತ್ರಗಳಲ್ಲಿನ ತೆಂಗಿನ ನರ್ಸರಿ ನಿರ್ವಹಣೆ ಸೇರಿ ಒಟ್ಟು 3.00 ಲಕ್ಷ ರೂ. ಗಳ ಅನುದಾನ ಖರ್ಚು ಭರಿಸಿ ಪ್ರಗತಿ ಸಾಧಿಸಲಾಗಿರುತ್ತದೆ.

**B) ಸಸ್ಯ ಸಂರಕ್ಷಣಾ ಪ್ರಯೋಗಾಲಯ:** ಈ ಯೋಜನೆಯಡಿ ಒಟ್ಟು 2.50 ಲಕ್ಷ ರೂಗಳನ್ನು ಖರ್ಚು ಮಾಡಿ 10.00 ಲಕ್ಷ ಗೋನಿಯೋಜಸ್ ಪರೋಪಜೀವಿಗಳನ್ನು ಉತ್ಪಾದಿಸಿ ತೆಂಗು ಬೆಳೆಗೆ ಬೀಳುವ ಕಪ್ಪು ತಲೆ ಹುಳಗಳನ್ನು ಹತೋಟಿ ಮಾಡಲು ರೈತರ ತೆಂಗಿನ ತೋಟಗಳಲ್ಲಿ ಬಿಡುಗಡೆ ಮಾಡಲಾಗಿದೆ. 0.50 ಲಕ್ಷ ರೂಗಳನ್ನು ಖರ್ಚು ಮಾಡಿ ಪ್ರಯೋಗಶಾಲೆಗೆ ಅಗತ್ಯ ಉಪಕರಣಗಳನ್ನು ಖರೀದಿಸಲಾಗಿದೆ.

**ಶೀಥಲ ಗೃಹಗಳಿಗೆ ಸಹಾಯ ಧನ:** ತೋಟಗಾರಿಕೆ ಉತ್ಪನ್ನಗಳನ್ನು ಶೇಖರಿಸುತ್ತಿರುವ ಶೀಥಲ ಗೃಹಗಳಲ್ಲಿ ಬಳಸುವ ವಿದ್ಯುತ್‌ನಲ್ಲಿ ಪ್ರತಿ ಯೂನಿಟ್‌ಗೆ ರೂ. 1.00 ರಂತೆ ಸಹಾಯ ಧನ ನೀಡಬೇಕಾಗಿದ್ದು, ಅದರಂತೆ ತೋಟಗಾರಿಕೆ ಉತ್ಪನ್ನಗಳನ್ನು ಶೇಖರಣೆ ಮಾಡುವ ಶೀಥಲ ಗೃಹಗಳಿಗೆ ಪ್ರಸಕ್ತ ಸಾಲಿನಲ್ಲಿ ರೂ.0.51 ಲಕ್ಷಗಳನ್ನು ಸಹಾಯಧನವಾಗಿ ನೀಡಲಾಗಿದೆ.

**ಜೇನು ಕೃಷಿ:** ಈ ಯೋಜನೆಯಡಿ ಜೇನು ಕೃಷಿ ಸಹಾಯಕರಿಗೆ ಪ್ರತಿ ಮಾಹೆಗೆ ರೂ. 5500-00 ರಂತೆ ಗೌರವ ಧನ ನೀಡಲಾದ ಮೊತ್ತ ರೂ. 3.30 ಲಕ್ಷ ಮತ್ತು ಜೇನು ಕೃಷಿ ತರಬೇತಿಗೆ ರೂ. 1.65 ಲಕ್ಷಗಳು ಸೇರಿದಂತೆ ಒಟ್ಟು ರೂ. 4.95 ಲಕ್ಷಗಳಷ್ಟು ಪ್ರಗತಿ ಸಾಧಿಸಲಾಗಿದೆ.

**ರೈತರಿಗೆ ಸಹಾಯ:** ಅ) ತೋಟಗಾರಿಕೆ ಬೆಳೆಗಳ ಪ್ರದೇಶ ವಿಸ್ತರಣೆ:- ಈ ಯೋಜನೆಯಡಿ 4.56 ಲಕ್ಷ ರೂ.ಗಳು ಬಿಡುಗಡೆಯಾಗಿದ್ದು, ಅದರಲ್ಲಿ 4.56 ಲಕ್ಷ ರೂಗಳ ಆರ್ಥಿಕ ಪ್ರಗತಿ ಸಾಧಿಸಿ ಒಬ್ಬ ರೈತರಿಗೆ ಒಂದು ಸಾವಿರ ರೂ.ಗಳಿಗೆ ಸರಿಹೊಂದುವಂತೆ ಮಾವು, ಸಪೋಟ ಗಿಡಗಳನ್ನು ಒಟ್ಟು 456 ರೈತರಿಗೆ ವಿತರಿಸಲಾಗಿದೆ.

ಆ) ಶೇಕಡಾ 50 ರ ಸಹಾಯಧನದಲ್ಲಿ ರೈತರಿಗೆ ಸಸ್ಯ ಸಂರಕ್ಷಣಾ ಔಷಧಿಗಳ ಸರಬರಾಜು: ಸಸ್ಯ ಸಂರಕ್ಷಣಾ ಔಷಧಿಗಳನ್ನು ಖರೀದಿಸಿದ ರೈತರುಗಳಿಗೆ ಶೇ. 50 ರಂತೆ ಪ್ರತಿ ಹೆಕ್ಟೇರಿಗೆ ಗರಿಷ್ಠ ರೂ. 2000-00 ಮೀರದಂತೆ ಒಟ್ಟು 100 ಹೆ.ಗೆ ರೂ. 1.99 ಲಕ್ಷ ರೂಗಳ ಸಹಾಯಧನ ವಿತರಿಸಲಾಗಿದೆ.

ಇ) ಅಲಂಕಾರಿಕ ಗಿಡಗಳ ಅಭಿವೃದ್ಧಿ: ಈ ಯೋಜನೆಯಡಿ ರೂ. 1.45 ಲಕ್ಷಗಳ ಆರ್ಥಿಕ ಅನುದಾನ ಜಿಲ್ಲಾ ಪಂಚಾಯತ್‌ನಿಂದ ಬಿಡುಗಡೆಯಾಗಿದ್ದು, ಪೂರ್ಣ ಪ್ರಗತಿ ಸಾಧಿಸಿ, 2300 ಮಧ್ಯಮ ಸೈಜಿನ ಕುಂಡಗಳಲ್ಲಿ ಅಲಂಕಾರಿಕ ಗಿಡಗಳನ್ನು ಅಭಿವೃದ್ದಿಪಡಿಸಿ ಸರ್ಕಾರಿ ಕಛೇರಿ, ಅತಿಥಿ ಗೃಹ, ನ್ಯಾಯಾಲಯಗಳು ಮತ್ತು ಸರ್ಕಾರಿ ಕಾರ್ಯಕ್ರಮ ಮತ್ತು ಸಭೆಗಳಲ್ಲಿ ಗಿಡಗಳನ್ನು ಜೋಡಿಸಿ ಅಲಂಕರಿಸಲಾಗಿರುತ್ತದೆ.

**ರೈತರಿಗೆ ತರಬೇತಿ (ತೋಟಗಾರಿಕೆ ತರಬೇತಿ):** ಈ ಯೋಜನೆಯಡಿ 490 ರೈತ ಮಹಿಳೆಯರಿಗೆ ಹಣ್ಣು ಮತ್ತು ತರಕಾರಿ ಸಂಸ್ಕರಣೆ ಹಾಗೂ ಮೌಲ್ಯವರ್ಧನೆ ಕುರಿತು ತರಬೇತಿ ನೀಡಿ ಪ್ರತಿ ಫಲಾನುಭವಿಗೆ 200/- ರೂ ನಂತೆ ಒಟ್ಟು ರೂ 0.98 ಲಕ್ಷಗಳಷ್ಟು ಪ್ರಗತಿ ಸಾಧಿಸಲಾಗಿರುತ್ತದೆ.

**ವಿಶೇಷ ಘಟಕ ಯೋಜನೆ (ರಾಜ್ಯ):** ಈ ಯೋಜನೆಯಡಿ ಹಿಂದಿನ ಸಾಲಿನ ಪರಿಶಿಷ್ಟ ಜಾತಿಯ ಫಲಾನುಭವಿಗಳ ಜಮೀನಿನಲ್ಲಿ ಒಂದು ಎಕರೆ ತೋಟಗಾರಿಕೆ ಬೆಳೆಯ ತಾಕುಗಳನ್ನು ನಿರ್ವಹಣೆ ಮಾಡಲು ಪ್ರತಿ ತಾಕಿಗೆ ರೂ. 750-00 ರಂತೆ ರೂ. 1.21 ಲಕ್ಷದಷ್ಟು ಸಹಾಯಧನ ನೀಡಲಾಗಿದೆ. 2013-2014 ನೇ ಸಾಲಿಗೆ ಹೊಸದಾಗಿ ತೋಟಗಾರಿಕೆ ಬೆಳೆ ತಾಕನ್ನು ಅಭಿವೃದ್ಧಿಪಡಿಸಲು ರೂ.5.79 ಲಕ್ಷಗಳಷ್ಟು ಸಹಾಯಧನ ನೀಡಲಾಗಿರುತ್ತದೆ.

**ಗಿರಿಜನ ಉಪ ಯೋಜನೆ (ರಾಜ್ಯ):** ಈ ಯೋಜನೆಯಡಿ ಪರಿಶಿಷ್ಟ ಪಂಗಡದ ಫಲಾನುಭವಿಗಳ ಜಮೀನಿನಲ್ಲಿ ಒಂದು ಎಕರೆ ತೋಟಗಾರಿಕೆ ಬೆಳೆಯ ತಾಕುಗಳನ್ನು ನಿರ್ವಹಣೆ ಮಾಡಲು ಪ್ರತಿ ತಾಕಿಗೆ ರೂ. 700-00 ರಂತೆ ರೂ. 0.54 ಲಕ್ಷದಷ್ಟು ಸಹಾಯಧನ ನೀಡಲಾಗಿರುತ್ತದೆ. 2013-2014 ನೇ ಸಾಲಿಗೆ ಹೊಸದಾಗಿ ತೋಟಗಾರಿಕೆ ಬೆಳೆ ತಾಕನ್ನು ಅಭಿವೃದ್ಧಿಪಡಿಸಲು ರೂ. 1.55 ಲಕ್ಷಗಳ ಸಹಾಯಧನ ನೀಡಿದ್ದು, ಒಟ್ಟು ರೂ. 2.09 ಲಕ್ಷಗಳ ಪ್ರಗತಿ ಸಾಧಿಸಲಾಗಿರುತ್ತದೆ.

**ರಾಜ್ಯ ವಲಯ ಯೋಜನೆಗಳ ಪ್ರಗತಿ**

**1) ಸೂಕ್ಷ್ಮ ನೀರಾವರಿ ಯೋಜನೆ:** ಕೇಂದ್ರ ಸರ್ಕಾರದ ಅನುದಾನದೊಂದಿಗೆ ರಾಜ್ಯ ಸರ್ಕಾರದ ಭಾಗಶ: ಅನುದಾನವನ್ನು ಒಳಗೊಂಡಂತೆ ತುಮಕೂರು ಜಿಲ್ಲೆಯ ತೋಟಗಾರಿಕೆ ಬೆಳೆಗಾರರಿಗೆ 2013-2014 ನೇ ಸಾಲಿನಲ್ಲಿ ಹನಿ ನೀರಾವರಿ ಪದ್ದತಿ ಅಳವಡಿಸಿದ ರೈತರಿಗೆ 2 ಹೆಕ್ಟೇರ್ ವರೆಗೆ ಶೇ.90 ಹಾಗೂ 2 ಹೆಕ್ಟೇರ್ ಮೇಲ್ಪಟ್ಟು 5 ಹೆಕ್ಟೇರ್‌ವರೆಗೆ ಶೇ.50 ರಂತೆ ಹನಿ ನೀರಾವರಿ ಸಹಾಯ ಧನ ಪಾವತಿಸಲು ಒಟ್ಟು ರೂ 1012.62 ಲಕ್ಷ ರೂ. ಗಳ ವೆಚ್ಚ ಭರಿಸಿ, 3630.88 ಹೆಕ್ಟೇರ್ ವಿಸ್ತೀರ್ಣದ ತೋಟಗಾರಿಕೆ ಬೆಳೆಗಳಿಗೆ ಹನಿ ನೀರಾವರಿ ಅಳವಡಿಸಲಾಗಿದೆ.

**2) ತೆಂಗಿನಲ್ಲಿ ಸಂಯೋಜಿತ ಬೇಸಾಯ:** ಈ ಯೋಜನೆಯಡಿ ಹೊಸ ಪ್ರಾತ್ಯಕ್ಷತೆಗಳ ತಾಕುಗಳ ನಿರ್ಮಾಣ, ತೆಂಗಿನ ಬೆಳೆಯ ರೋಗ ಮತ್ತು ಕೀಟ ನಿರ್ವಹಣೆ, ರೈತ ಸಹಾಯಕರ ವೆಚ್ಚ ಭರಿಸುವುದು, ಹಳೆ ಪ್ರಾತ್ಯಕ್ಷತೆ ತಾಕುಗಳ ನಿರ್ವಹಣೆ, ಯೋಜನೆಯ ಅನುಷ್ಠಾನದ ಕುರಿತು ತರಬೇತಿ ಕಾರ್ಯಕ್ರಮಗಳಿಗೆ ಒಟ್ಟು ರೂ. 166.79 ಲಕ್ಷಗಳಷ್ಟು ವೆಚ್ಚ ಭರಿಸಿ ಪ್ರಗತಿ ಸಾಧಿಸಲಾಗಿರುತ್ತದೆ.

**3) ಹೂ ಕೃಷಿಗೆ ಉತ್ತೇಜನ :** ಈ ಯೋಜನೆಯಡಿ ಹಸಿರು ಮನೆಯಲ್ಲಿ ಹಳೆಯ ಮತ್ತು ಅನುತ್ಪಾದಕ ಗಿಡಗಳನ್ನು ತೆಗೆದು ಹೊಸ ಗಿಡಗಳನ್ನು ನೆಡುವುದು, ಹಸಿರು ಮನೆಗಳಲ್ಲಿ ಹಾಳಾಗಿರುವ ಪಾಲೀದೀನ್ ಶೀಟ್‌ಗಳ ಬದಲಾವಣೆಗೆ ಸಹಾಯಧನ ವಿತರಿಸುವುದು, ಹೈಟೆಕ್ ಪುಷ್ಪ ಬೆಳೆಗಾರರು ನಿರ್ಮಿಸಿರುವ ಶೀಥಲ ಗೃಹಗಳಿಗೆ ಬಳಸುವ ವಿದ್ಯುತ್‌ಗೆ ಸಹಾಯಧನಕ್ಕಾಗಿ ರೂ. 11.00 ಲಕ್ಷಗಳ ವೆಚ್ಚ ಭರಿಸಿ ಪ್ರಗತಿ ಸಾಧಿಸಲಾಗಿರುತ್ತದೆ.

**4) ತೋಟಗಾರಿಕೆ ವಿಸ್ತರಣೆ:** ಈ ಯೋಜನೆಯಡಿ ಜಿಲ್ಲಾ ಮಟ್ಟದ ತೋಟಗಾರಿಕೆ ಮಾಹಿತಿ ಕೇಂದ್ರದಲ್ಲಿ ತೋಟಗಾರಿಕೆ ವಿಷಯ ತಜ್ಞರು ಹಾಗೂ ಗಣಕಯಂತ್ರ ನಿರ್ವಾಹಕರುಗಳನ್ನು ಇಲಾಖಾ ಮಾರ್ಗಸೂಚಿಯನ್ವಯ ನೇಮಿಸಿಕೊಂಡಿದ್ದು, ಕೇಂದ್ರದಲ್ಲಿ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಹಾಗೂ  ರೈತರ ತಾಕುಗಳಿಗೆ ಭೇಟಿ ನೀಡಿ ರೈತರಿಗೆ ಮಾಹಿತಿ ಹಾಗೂ ಸಲಹೆಗಳನ್ನು ನೀಡಲು ಅವಶ್ಯಕವಾದ ಸಾಮಗ್ರಿಗಳಿಗಾಗಿ   ರೂ. 4.92 ಲಕ್ಷ ವೆಚ್ಚ ಮಾಡಲಾಗಿರುತ್ತದೆ.

**5) ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆ:** ಈ ಯೋಜನೆಯಡಿ ಹಣ್ಣು, ತರಕಾರಿ, ಹೂ ಮತ್ತು ತೋಟದ ಬೆಳೆಗಳ ಅಧಿಕ ಸಾಂದ್ರತೆ, ಸಮಗ್ರ ಬೇಸಾಯ ಕಾರ್ಯಕ್ರಮ, ತೋಟಗಾರಿಕೆ ಉತ್ಪನ್ನಗಳ ಸಂಸ್ಕರಣೆ ಮತ್ತು ಮೌಲ್ಯವರ್ಧನೆ ಕಾರ್ಯಕ್ರಮಗಳಿಗೆ ಹಾಗೂ ಸಿಬ್ಬಂದಿ ವೇತನಕ್ಕಾಗಿ ಒಟ್ಟು ರೂ. 468.25 ಲಕ್ಷಗಳಷ್ಟು ಪ್ರಗತಿ ಸಾಧಿಸಲಾಗಿರುತ್ತದೆ.

**5) ಇಲಾಖೆ ಪ್ರಯೋಗಶಾಲೆಗಳ ಅಭಿವೃದ್ಧಿ** : ಈ ಯೋಜನೆಯಡಿ ತರಕಾರಿ ಬೆಳೆಗಳ ಮಾದರಿಗಳನ್ನು ಸಂಗ್ರಹಿಸಲು ರೂ. 1.50 ಲಕ್ಷಗಳ ವೆಚ್ಚ ಭರಿಸಲಾಗಿದೆ.

**6) ತೋಟಗಾರಿಕೆ ಬೆಳೆಗಳ ಕೀಟ ಮತ್ತು ರೋಗಗಳ ಸಮಗ್ರ ನಿಯಂತ್ರಣ:** ಈ ಯೋಜನೆಯಡಿ ಗೋನಿಯೋಜಸ್ ಪರೋಪಜೀವಿಗಳ ಉತ್ಪಾದನೆ, ಸಿಬ್ಬಂದಿ ವೇತನ, ಮೂಲಭೂತ ಸೌಕರ್ಯ ನಿರ್ವಹಣೆ ಮತ್ತು ಮೇಲ್ವಿಚಾರಣೆ ಮತ್ತು ಸಸ್ಯ ಸಂರಕ್ಷಣಾ ಔಷಧಿ ವಿತರಣೆ ಮತ್ತು ಜಿ.ಎಂ.ಪಿ. ಕಾರ್ಯಕ್ರಮಗಳಿಗೆ ಒಟ್ಟು ರೂ.113.98 ಲಕ್ಷಗಳನ್ನು ವೆಚ್ಚ ಭರಿಸಲಾಗಿದೆ.

**8) ಮಧುವನ ಮತ್ತು ಜೇನು ಸಾಕಾಣಿಕೆ ಅಭಿವೃದ್ಧಿ ಯೋಜನೆ:** ಈ ಯೋಜನೆಯಡಿ ಜೇನು ಕೃಷಿ ತರಬೇತಿ ಹಾಗೂ ಜೇನು ಪೆಟ್ಟಿಗೆಗಳ ವಿತರಣೆ, ಜೇನು ಪೆಟ್ಟಿಗೆ ಹಾಗೂ ಕಾಲೋನಿಗಳ ಖರೀದಿಸಿದ ರೈತರುಗಳಿಗೆ ಶೇ.50 ರ ಸಹಾಯಧನ ಮತ್ತು ಮಧುವನಗಳ ಅಭಿವೃದ್ಧಿಗಾಗಿ ಒಟ್ಟು ರೂ. 5.36 ಲಕ್ಷಗಳಷ್ಟು ಪ್ರಗತಿ ಸಾಧಿಸಲಾಗಿರುತ್ತದೆ.

**9) ರಾಷ್ಟ್ರೀಯ ಔಷಧಿ ಬೆಳೆಗಳ ಮಿಷನ್ ಯೋಜನೆ:** ಈ ಯೋಜನೆಯಡಿ ಔಷಧಿ ಬೆಳೆಗಳನ್ನು ಬೆಳೆಯುವ ಫಲಾನುಭವಿಗಳಿಗೆ ಸಹಾಯಧನ ನೀಡಲಾಗುವುದು. ಮಾರ್ಚ್ 2014 ರ ಅಂತ್ಯಕ್ಕೆ ರೂ. 5.10 ಲಕ್ಷಗಳ ವೆಚ್ಚ ಭರಿಸಿ ಪ್ರಗತಿ ಸಾಧಿಸಲಾಗಿರುತ್ತದೆ.

**10) ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ**

ಎ) **ಬಾಳೆಯಲ್ಲಿ ನಿಖರ ಬೇಸಾಯ ಯೋಜನೆ** : ಈ ಯೋಜನೆಯಡಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ರೈತರು ಸುಧಾರಿತ ತಂತ್ರಜ್ಞಾನಗಳನ್ನು ಅಳವಡಿಸಿಕೊಂಡು ಹೊಸದಾಗಿ ಅಂಗಾಂಶಕೃಷಿ ಬಾಳೆ ತಾಕುಗಳನ್ನು ಅಭಿವೃದ್ಧಿ ಪಡಿಸಲು ರೂ. 25.99 ಲಕ್ಷಗಳ ಸಹಾಯಧನ ವಿತರಿಸಿ ಪ್ರಗತಿ ಸಾಧಿಸಲಾಗಿರುತ್ತದೆ.

ಬಿ) **ತೋಟಗಾರಿಕೆಯಲ್ಲಿ ಯಾಂತ್ರೀಕರಣ** : ಈ ಯೋಜನೆಯಡಿಯಲ್ಲಿ ತೋಟಗಾರಿಕೆಯಲ್ಲಿ ಯಂತ್ರೋಪಕರಣಗಳ ಬಳಕೆಯನ್ನು ಉತ್ತೇಜಿಸಲು ಇಲಾಖಾ ಮಾರ್ಗಸೂಚಿಯನ್ವಯ ಯಂತ್ರೋಪಕರಣಗಳನ್ನು ಖರೀದಿಸಿದ 326 ರೈತ ಫಲಾನುಭವಿಗಳಿಗೆ ರೂ.77.34 ಲಕ್ಷಗಳ ಸಹಾಯಧನ ವಿತರಿಸಿ ಪ್ರಗತಿ ಸಾಧಿಸಲಾಗಿರುತ್ತದೆ

ಸಿ) **ತರಕಾರಿಯಲ್ಲಿ ನಿಖರ ಬೇಸಾಯ ಯೋಜನೆ** : ಈ ಯೋಜನೆಯಡಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ರೈತರಿಗೆ ಸುಧಾರಿತ ತಂತ್ರಜ್ಞಾನಗಳನ್ನು ಅಳವಡಿಸಿಕೊಂಡು ಹೊಸದಾಗಿ ತರಕಾರಿ ತಾಕುಗಳನ್ನು ಅಭಿವೃದ್ಧಿ ಪಡಿಸಲು ರೂ. 9.289 ಲಕ್ಷ ಗಳ ಸಹಾಯಧನ ವಿತರಿಸಿ ಪ್ರಗತಿ ಸಾಧಿಸಲಾಗಿರುತ್ತದೆ.

ಡಿ) **ಸಂರಕ್ಷಿತ ಬೇಸಾಯ** : ಈ ಕಾರ್ಯಕ್ರಮದಡಿ ಸಂರಕ್ಷಿತ ಘಟಕದಲ್ಲಿ ವಿವಿಧ ಹೂ / ತರಕಾರಿ ಬೆಳೆಗಳನ್ನು ಬೆಳೆಯುವ ರೈತರಿಗೆ ಸಂರಕ್ಷಿತ ಘಟಕಗಳ ನಿರ್ಮಾಣಕ್ಕಾಗಿ ಒಟ್ಟು ರೂ. 93.00 ಲಕ್ಷಗಳ ಸಹಾಯಧನ ವಿತರಿಸಿ ಯೋಜನೆಯನ್ನು ಅನುಷ್ಠಾನಗೊಳಿಸಲಾಗಿರುತ್ತದೆ..

ಇ) **ತಾರಸಿ – ಕೈತೋಟ ಉತ್ತೇಜನ ಯೋಜನೆ** : ಈ ಯೋಜನೆಯಡಿ ನಗರ ಮತ್ತು ಪಟ್ಟಣ ಪ್ರದೇಶದ ನಾಗರಿಕರಲ್ಲಿ ತಾರಸಿ ಕೈತೋಟ ಬೆಳೆಸುವ ಕುರಿತು ಅರಿವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಹಾಗೂ ಫಲಾನುಭವಿಗಳಿಗೆ ಸಹಾಯಧನವನ್ನು ಪೂರಕ ಸಾಮಗ್ರಿಗಳ ರೂಪದಲ್ಲಿ ವಿತರಿಸಲು ಒಟ್ಟು ರೂ. 1.50 ಲಕ್ಷಗಳ ವೆಚ್ಚ ಭರಿಸಲಾಗಿರುತ್ತದೆ.

**ಹಣ್ಣಿನ ಬೆಳೆಗಳ ಅಭಿವೃದ್ಧಿ :** ತೋಟಗಾರಿಕೆ ಬೆಳೆಗಳ ಉತ್ಪಾದನೆ ಹಾಗೂ ಉತ್ಪಾದಕತೆಯನ್ನು ಹೆಚ್ಚಿಸಲು, ಈ ಬೆಳೆಗಳ ಪ್ರದೇಶವನ್ನು ವಿಸ್ತರಿಸುವುದು, ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯ ಮೂಲಭೂತ ಉದ್ದೇಶಗಳಲ್ಲಿ ಒಂದಾಗಿರುತ್ತದೆ. ತೋಟಗಾರಿಕೆ ಬೆಳೆಗಳ ಪ್ರದೇಶ ವಿಸ್ತರಣೆ ಮೂಲಕ ತೋಟಗಾರಿಕೆ ಬೆಳೆಗಳನ್ನು/ ಹೊಸ ತಳಿಗಳನ್ನು ಪರಿಚಯಿಸಿ ರೈತರ ಆರ್ಥಿಕ ಆದಾಯವನ್ನು ಹೆಚ್ಚಿಸುವುದರ ಜೊತೆಗೆ ಆಧಾರಿತ ಚಟುವಟಿಕೆಗಳನ್ನು ಸಹ ಅಭಿವೃದ್ಧಿ ಪಡಿಸುವುದರ ಅಗತ್ಯತೆ ಇದೆ. ಈ ಹಿನ್ನೆಲೆಯಲ್ಲಿ ಹಣ್ಣು, ಪುಷ್ಪ, ಸಾಂಬಾರು ಮತ್ತು ಕೋಕೋ ಬೆಳೆಗಳ ಪ್ರದೇಶ ವಿಸ್ತರಣೆ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗಿರುತ್ತದೆ.

ಹೊಸದಾಗಿ ನಾಟಿ ಮಾಡಿದ ಮಾವು (ರೂ. 15444–00), ಸಪೋಟ (ರೂ. 15444–00), ದಾಳಿಂಬೆ (ರೂ. 18000–00) ಮೊಸಂಬಿ (ರೂ.15000–00) ಹಣ್ಣಿನ ಬೆಳೆಗಳಿಗೆ ಪ್ರತಿ ಹೆಕ್ಟೇರ್‌ಗೆ ರೂ. 15442–00 ಗಳಂತೆ ಹಾಗೂ ಪಪ್ಪಾಯ ಬೆಳೆಗೆ ರೂ.22500–00 ಸಹಾಯ ಧನವನ್ನು ರೈತರಿಗೆ ನೀಡಲಾಗಿದೆ. ಸದರಿ ಯೋಜನೆಯಡಿಯಲ್ಲಿ ಒಟ್ಟು 207 ಹೆಕ್ಟೇರ್‌ನಲ್ಲಿ ಹಣ್ಣಿನ ಬೆಳೆಗಳನ್ನು ಅಭಿವೃದ್ಧಿ ಪಡಿಸಿದ ರೈತರಿಗೆ ರೂ. 23.70 ಲಕ್ಷ ಸಹಾಯ ಧನ ವಿತರಿಸಲಾಗಿದೆ.

**ವಾಣಿಜ್ಯ ಪುಷ್ಪಾಭಿವೃದ್ಧಿ** : ಈ ಕಾರ್ಯಕ್ರಮದಡಿಯಲ್ಲಿ ಬಿಡಿ ಹೂಗಳಾದ ಕನಕಾಂಬರ, ಮಲ್ಲಿಗೆ, ಸೇವಂತಿಗೆ, ಆಸ್ಟರ್ ಹಾಗೂ ಗುಲಾಬಿ ಬೆಳೆಯುವ ಸಣ್ಣ ರೈತರಿಗೆ ಮತ್ತು ಇತರೆ ರೈತರಿಗೆ ಸಹಾಯ ಧನ ನೀಡಲಾಗುತ್ತಿದೆ. ಈ ಯೋಜನೆಯಲ್ಲಿ 66.70 ಹೆಕ್ಟೇರ್ ಪ್ರದೇಶದಲ್ಲಿ ವಿವಿಧ ಹೂಗಳನ್ನು ಅಭಿವೃದ್ಧಿ ಪಡಿಸಿದ ರೈತರಿಗೆ ರೂ. 9.374 ಲಕ್ಷಗಳ ಸಹಾಯಧನವನ್ನು ವಿತರಿಸಲಾಗಿದೆ.

**ಸಸ್ಯ ಸಂರಕ್ಷಣೆ ಹಾಗೂ ಪೋಷಕಾಂಶ ನಿರ್ವಹಣೆ:** ಈ ಕಾರ್ಯಕ್ರಮದಡಿ ಸಮಗ್ರ ಕೀಟ ನಿಯಂತ್ರಣಕ್ಕಾಗಿ ಅರ್ಹ ಫಲಾನುಭವಿಗಳಿಗೆ ರೂ 1000 ದಂತೆ 1000 ಫಲಾನುಭವಿಗಳಿಗೆ ಔಷಧಿಗಳನ್ನು ನೀಡಲಾಗಿದೆ. ಸಮಗ್ರ ಪೋಷಕಾಂಶ ನಿರ್ವಹಣೆ ಮಾಡಲಾಗಿದೆ.

**ಸಂರಕ್ಷಿತ ಬೇಸಾಯ:** ಈ ಕಾರ್ಯಕ್ರಮದಡಿ ಕತ್ತರಿಸುವ ಹೂವುಗಳು, ಬಣ್ಣದ ದೊಣ್ಣೆ ಮೆಣಸಿನಕಾಯಿ ಹಾಗೂ ತರಕಾರಿ ಸಸಿಗಳನ್ನು ಸಂರಕ್ಷಿತ ಬೇಸಾಯದಲ್ಲಿ ಬೆಳೆಯಲು ರೈತರನ್ನು ಉತ್ತೇಜಿಸಲಾಗಿ ರೂ. 220.588 ಲಕ್ಷಗಳ ಸಹಾಯಧನ ನೀಡಲಾಗಿದೆ.

**ಮಾನವ ಸಂಪನ್ಮೂಲ ಅಭಿವೃದ್ಧಿ** : ತೋಟಗಾರಿಕೆ ಕ್ಷೇತ್ರದಲ್ಲಿ ಇತ್ತೀಚಿನ ದಿನಗಳಲ್ಲಿ ಅನೇಕ ನೂತನ ಆವಿಷ್ಕಾರಗಳಾಗಿದ್ದು, ಸದರಿ ಆವಿಷ್ಕಾರಗಳು/ ತಂತ್ರಜ್ಞಾನಗಳ ಬಗ್ಗೆ ರೈತರು ಹಾಗೂ ಇಲಾಖಾ ಅಧಿಕಾರಿಗಳಿಗೆ ಆಗಿಂದಾಗ್ಗೆ ಅರಿವು ಮೂಡಿಸಲು ತರಬೇತಿ ಕಾರ್ಯಕ್ರಮಗಳು, ಶೈಕ್ಷಣಿಕ ಪ್ರವಾಸ, ವಿಚಾರ ಸಂಕಿರಣ/ ಕಾರ್ಯಗಾರಗಳನ್ನು ಏರ್ಪಡಿಸುವುದು ಅಗತ್ಯವಿರುತ್ತದೆ. ಈ ವಿಭಾಗದಲ್ಲಿ 2000 ರೈತರಿಗೆ ರಾಜ್ಯದೊಳಗೆ ಶೈಕ್ಷಣಿಕ ಪ್ರವಾಸ, ಒಂದು ದಿನದ ತರಬೇತಿ (ಆಧುನಿಕ ತೋಟಗಾರಿಕೆ ಬಗ್ಗೆ ವಿಚಾರ ಸಂಕಿರಣ, ರೋಗ ಮತ್ತು ಕೀಟಗಳ ಹತೋಟಿ ಬಗ್ಗೆ ತಾಂತ್ರಿಕ ಮಾಹಿತಿಗಳು) ತರಬೇತಿ ನೀಡಲಾಗಿದೆ.

**ಕೃಷಿಹೊಂಡ:** ಮಳೆ ನೀರನ್ನು ಸಂಗ್ರಹಿಸಿ ತೋಟಗಾರಿಕೆ ಬೆಳೆಗಳಿಗೆ ಸಂದಿಗ್ದ ಹಂತಗಳಲ್ಲಿ ಬಳಕೆ ಮಾಡಿ ಬೆಳೆಗಳ ಉತ್ಪಾದಕತೆ ಹೆಚ್ಚಿಸಲು ಕೃಷಿ ಹೊಂಡ ನಿರ್ಮಿಸಲು ರೈತ ಫಲಾನುಭವಿಗಳಿಗೆ ಸಹಾಯ ಧನವನ್ನು ನೀಡಲಾಗಿದೆ.

**ಜೇನು ಸಾಕಾಣಿಕೆ:** ತೋಟಗಾರಿಕೆ ಬೆಳೆಯ ಉತ್ಪಾದಕತೆಯನ್ನು ಪರಾಗ ಸ್ಪರ್ಶದಿಂದ ಹೆಚ್ಚಿಸಲು ಜೇನು ಸಾಕಾಣಿಕೆಯನ್ನು ಉತ್ತೇಜಿಸುವ ಸಲುವಾಗಿ ರೈತರಿಗೆ ಜೇನು ಸಾಕಾಣಿಕೆ ಬಗ್ಗೆ ತರಬೇತಿ ನೀಡಿ 1151 ಜೇನು ಪೆಟ್ಟಿಗೆಗಳನ್ನು ನೀಡಲು ರೂ.9.945 ಲಕ್ಷ ಗಳನ್ನು ಖರ್ಚು ಮಾಡಲಾಗಿದೆ.

**ಕೊಯ್ಲೋತ್ತರ ನಿರ್ವಹಣೆ :** ಕೊಯ್ಲಾದ ಹಣ್ಣು , ತರಕಾರಿ, ಪುಷ್ಪಗಳು ಹಾಗೂ ಇತರ ತೋಟಗಾರಿಕೆ ಪದಾರ್ಥಗಳನ್ನು ವಿಂಗಡಿಸಿ, ಅಗತ್ಯತೆಗೆ ತಕ್ಕಂತೆ ವೈಜ್ಞಾನಿಕ ರೀತಿಯಲ್ಲಿ ವಿವಿಧ ಪ್ರಕಾರದ ಕಂಟೈನರ್‌ಗಳಲ್ಲಿ ಪ್ಯಾಕ್ ಮಾಡುವ ಉದ್ದೇಶದಿಂದ ನಿರ್ಮಿಸಿ,

ಸುಸಜ್ಜಿತಗೊಳಿಸಲಾದ ಕಟ್ಟಡಗಳನ್ನು ಪ್ಯಾಕ್‌ಹೌಸ್ ಎಂದು ಕರೆಯಲಾಗುತ್ತದೆ. ತೋಟಗಾರಿಕೆ ಬೆಳೆಗಳ ಕೊಯ್ಲೋತ್ತರ ನಿರ್ವಹಣೆ ಮಾಡಲು ಜಿಲ್ಲೆಯಲ್ಲಿ ಪ್ಯಾಕ್ ಹೌಸ್‌ಗಳನ್ನು ನಿರ್ಮಿಸಲಾಗಿದೆ.

**ರೇಷ್ಮೆ ಕೃಷಿ:**

ರೇಷ್ಮೆ ಬೇಸಾಯ ಕೃಷಿ ಆಧಾರಿತ ಕಸುಬು. ಕಡಿಮೆ ವೆಚ್ಚದಲ್ಲಿ ಅಧಿಕ ಆದಾಯ ಗಳಿಸುವ ಕಸುಬು. ವರ್ಷದ ಎಲ್ಲಾ ಕಾಲದಲ್ಲೂ ಕೈಗೊಳ್ಳಬಹುದಾದ ಕೃಷಿ. ಗ್ರಾಮೀಣ ಪ್ರದೇಶದಲ್ಲಿ ನಿರುದ್ಯೋಗ ನಿವಾರಣೆಯಲ್ಲಿ ಮಹತ್ತರ ಪಾತ್ರ ವಹಿಸುತ್ತದೆ. ತುಮಕೂರು ಜಿಲ್ಲೆಯ ಭೂಗುಣ ಮತ್ತು ಹವಾಗುಣ ರೇಷ್ಮೆ ಕೃಷಿಗೆ ತುಂಬಾ ಉಪಯುಕ್ತವಾಗಿದ್ದು, ರೇಷ್ಮೆ ಕೃಷಿಯನ್ನು ಅಭಿವೃದ್ಧಿಪಡಿಸಲು ತುಂಬಾ ಸಹಕಾರಿಯಾಗಿದೆ. ತುಮಕೂರು ಜಿಲ್ಲೆಯಲಿ 3321.46 ಹೆಕ್ಟೇರ್ ಪ್ರದೇಶದಲ್ಲಿ ಹಿಪ್ಪುನೇರಳೆ ಇದ್ದು, 8086 ರೈತರು ರೇಷ್ಮೆ ಕೃಷಿಯನ್ನು ಕೈಗೊಂಡಿರುತ್ತಾರೆ. 2013-14 ಸಾಲಿನಲ್ಲಿ 20.967 ಲಕ್ಷ ಮಿಶ್ರತಳಿ 1.014 ಲಕ್ಷ ದ್ವಿತಳಿ ಮತ್ತು 7.059 ಲಕ್ಷ ಮೈಸೂರು ತಳಿ ಮೊಟ್ಟೆ ಸೇರಿದಂತೆ ಒಟ್ಟು 29.04 ಲಕ್ಷ ರೇಷ್ಮೆ ಮೊಟ್ಟೆಗಳನ್ನು ಚಾಕಿ ಮಾಡಲಾಗಿದೆ ಹಾಗೂ 1321.459 ಮೆ.ಟನ್ ಮಿಶ್ರತಳಿ 57.994 ಮೆ.ಟನ್ ದ್ವಿತಳಿ ಮತ್ತು 465.602 ಮೆ.ಟನ್ ಮೈಸೂರು ತಳಿ ಬಿತ್ತನೆ ರೇಷ್ಮೆ ಗೂಡು ಸೇರಿದಂತೆ ಒಟ್ಟು 1845.055 ಮೆ.ಟನ್ ಗೂಡು ಉತ್ಪಾದಿಸಲಾಗಿದೆ.

**ತಾಂತ್ರಿಕ ಸೇವಾ ಕೇಂದ್ರಗಳು** : ಜಿಲ್ಲೆಯಲ್ಲಿ ರೇಷ್ಮೆ ಕೃಷಿಯ ವಿವಿಧ ತಾಂತ್ರಿಕತೆಗಳನ್ನು ಮತ್ತು ಅಭಿವೃದ್ಧಿ ಕಾರ್ಯಕ್ರಮಗಳ ಸೌಲಭ್ಯವನ್ನು 22 ತಾಂತ್ರಿಕ ಸೇವಾ ಕೇಂದ್ರಗಳ ಮೂಲಕ ಒದಗಿಸಲಾಗುತ್ತಿದೆ. ಜಿಲ್ಲಾ ಮಟ್ಟದಲ್ಲಿ ರೇಷ್ಮೆ ಉಪನಿರ್ದೇಶಕರು, ತಾಲ್ಲೂಕು ಮಟ್ಟದಲ್ಲಿ ರೇಷ್ಮೆ ಸಹಾಯಕ ನಿರ್ದೇಶಕರ ಉಸ್ತುವಾರಿಯಲ್ಲಿ ರೇಷ್ಮೆ ವಿಸ್ತರಣಾಧಿಕಾರಿಗಳ ನೇತೃತ್ವದಲ್ಲಿ ವಲಯಾಧಿಕಾರಿಗಳ ಮುಖೇನ ಕೆಳಕಂಡ ಪ್ರಮುಖ ಸೇವೆಗಳನ್ನು ಒದಗಿಸಲಾಗುತ್ತಿದೆ.

1) ಹೊಸತಳಿ ಹಿಪ್ಪುನೇರಳೆ ಬೇಸಾಯ ಕೈಗೊಳ್ಳಲು, ರೈತರಿಗೆ ಮಾರ್ಗದರ್ಶನ ನೀಡಿ ಬೇಕಾದ ಬಿತ್ತನೆ ಕಡ್ಡಿ/ಸಸಿಗಳನ್ನು ಪೂರೈಕೆ ಮಾಡುವುದು.

2) ಉತ್ತಮ ಗುಣಮಟ್ಟದ ಹಿಪ್ಪುನೇರಳೆ ಸೊಪ್ಪು ಉತ್ಪಾದನೆ ಮಾಡಲು ಅಗತ್ಯವಿರುವ ತಾಂತ್ರಿಕ ಮಾಹಿತಿ ನೀಡುವುದು.

3) ಸುಧಾರಿತ ಮತ್ತು ಹೆಚ್ಚು ಇಳುವರಿ ನೀಡುವ ರೇಷ್ಮೆ ತಳಿಗಳನ್ನು ಸಾಕಣೆ ಮಾಡಲು ನೂತನ ತಾಂತ್ರಿಕೆತೆಗಳನ್ನು ನೀಡುವುದು. ರೋಗರಹಿತ ರೇಷ್ಮೆ ಮೊಟ್ಟೆ ಪೂರೈಕೆ ಮಾಡುವುದು.

4) ರೇಷ್ಮೆ ಹುಳುಗಳಿಗೆ ತಗಲುವ ರೋಗಗಳು ಮತ್ತು ಕೀಟಗಳ ಬಾಧೆ ನಿಯಂತ್ರಿಸಲು ಸಲಹೆ - ಮಾರ್ಗದರ್ಶನ ನೀಡುವುದು.

5) ವಿವಿಧ ರೇಷ್ಮೆ ಚಟುವಟಿಕೆಗಳಿಗೆ - ಬ್ಯಾಂಕುಗಳಿಂದ ಸಾಲ ಸೌಲಭ್ಯ ಪಡೆಯಲು ಸಹಕರಿಸುವುದು. ಇಲಾಖೆಯಿಂದ ಲಭ್ಯವಿರುವ ಸಹಾಯಧನ ಪಾವತಿಸುವುದು.

6) ರಾಜ್ಯ-ಕೇಂದ್ರ ಸರ್ಕಾರದ, ಜಿಲ್ಲಾ ಪಂಚಾಯತ್ ಮತ್ತು ತಾಲ್ಲೂಕು ಪಂಚಾಯತ್‌ನ ವಿವಿಧ ಅಭಿವೃದ್ಧಿ ಯೋಜನೆಗಳನ್ನು ಅನುಷ್ಠಾನಗೊಲಿಸುವುದು. ತರಬೇತಿ ಕಾರ್ಯಕ್ರಮ, ರೇಷ್ಮೆ ಬೆಳೆ ಕ್ಷೇತ್ರೋತ್ಸವ ಆಚರಿಸುವುದು. ಮತ್ತಿತರ ಪ್ರಚಾರ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು. ಅಧ್ಯಯನ ಪ್ರವಾಸ ಕೈಗೊಳ್ಳುವುದು.

**ಅ) ಸಲಹಾ ಸೇವೆಗಳು, ಪ್ರದರ್ಶನಗಳು, ಪ್ರಚಾರ ಮತ್ತು ಶ್ರವಣ ದೃಶ್ಯ** : ಇದೊಂದು ಪ್ರಮುಖ ಕಾರ್ಯಕ್ರಮವಾಗಿದ್ದು, ಈ ಕಾರ್ಯಕ್ರಮದಡಿಯಲ್ಲಿ ಜಿಲ್ಲೆಯ ತಾಂತ್ರಿಕ ಸೇವಾ ಕೇಂದ್ರಗಳ ವ್ಯಾಪ್ತಿಯಲ್ಲಿ ಬರುವ ಗ್ರಾಮಗಳಲ್ಲಿ ಹಿಪ್ಪುನೇರಳೆ ತೋಟ ನಿರ್ವಹಣೆ, ರೇಷ್ಮೆ ಹುಳು ಸಾಕಾಣಿಕೆ ಮತ್ತು ರೋಗ ನಿಯಂತ್ರಣದ ಬಗ್ಗೆ ಸೂಕ್ತ ತಂತ್ರಜ್ಞಾನ ಅಳವಡಿಸಿಕೊಂಡು ಉತ್ತಮ ಇಳುವರಿ ಪಡೆಯುವ ಬಗ್ಗೆ ರೇಷ್ಮೆ ಬೆಳೆಗಾರರಿಗೆ ತಿಳುವಳಿಕೆ ನೀಡಲಾಗಿದೆ. ರೇಷ್ಮೆ ಕೃಷಿ ಕ್ಷೇತ್ರೋತ್ಸವಗಳನ್ನು ಆಚರಿಸುವುದರ ಮೂಲಕ ತಾಲ್ಲೋಕು ಮಟ್ಟದಲ್ಲಿ ಕಾರ್ಯಾಗಾರಗಳನ್ನು ಏರ್ಪಡಿಸುವುದು ಮತ್ತು ವಸ್ತುಪ್ರದರ್ಶನವನ್ನು ಏರ್ಪಡಿಸುವುದು. ಹಾಗೂ ಉತ್ತಮ ಪ್ರಾತ್ಯಕ್ಷತಾ ತೋಟ ನಿರ್ವಹಿಸಿದ ಮಹಿಳಾ ರೇಷ್ಮೆ ಬೆಳೆಗಾರರಿಗೆ ಪ್ರೋತ್ಸಾಹಧನ ಹಿಪ್ಪುನೇರಳೆ ತೋಟಗಳ ಮಣ್ಣು ಪರೀಕ್ಷೆ ಮಾಡಿಸುವುದು, ರೈತರನ್ನು ರೇಷ್ಮೆ ಚಟುವಟಿಕೆಗಳ ತಿಳುವಳಿಕೆ ಮೂಡಿಸಲು ಅಧ್ಯಯನ ಪ್ರವಾಸ ಕೈಗೊಳ್ಳುವುದು ಮುಂತಾದ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗಿದೆ.

**ಆ) ದ್ವಿತಳಿ ರೇಷ್ಮೆ ಬೆಳೆಗಾರರಿಗೆ ಸಹಾಯ** : ಜಿಲ್ಲೆಯಲ್ಲಿ ರೇಷ್ಮೆ ಕೃಷಿಯನ್ನು ಅಭಿವೃದ್ಧಿ ಪಡಿಸಲು ಮತ್ತು ಅಂತರ್ರಾಷ್ಟ್ರೀಯ ಗುಣಮಟ್ಟದ ದ್ವಿತಳಿ ಗೂಡು ಉತ್ಪಾದಿಸಲು, ರೇಷ್ಮೆ ಕೃಷಿಕರು ಉತ್ಪಾದಿಸಿದ ದ್ವಿತಳಿ ಗೂಡಿಗೆ ಪ್ರೋತ್ಸಾಹಧನ ನೀಡುವುದು ಅವಶ್ಯಕವಾಗಿದ್ದು, ಈ ಉದ್ದೇಶದಿಂದ ರೇಷ್ಮೆ ಬೆಳೆಗಾರರು ಉತ್ಪಾದಿಸಿದ ಪ್ರತಿ ಕೆ.ಜಿ.ಉತ್ತಮ ಗುಣಮಟ್ಟದ ದ್ವಿತಳಿ ರೇಷ್ಮೆ ಗೂಡಿಗೆ ರೂ.40-00ರಂತೆ ಪ್ರೋತ್ಸಾಹಧನ ನೀಡಲಾಗಿದೆ. ಈ ಕಾರ್ಯಕ್ರಮದಲ್ಲಿ 65000 ಕೆ.ಜಿ. ಗೂಡಿಗೆ ರೂ.26.00 ಲಕ್ಷ ಆರ್ಥಿಕ ಗುರಿ ಇದ್ದು 48076 ಕೆ.ಜಿ. ಗೂಡಿಗೆ ರೂ. 19.23 ಲಕ್ಷ ಆರ್ಥಿಕ ಪ್ರಗತಿಯಾಗಿರುತ್ತದೆ. ಹಾಗೂ ಜಿಲ್ಲೆಯಲ್ಲಿ ಎಲ್ಲಾ ರೇಷ್ಮೆ ಕೃಷಿಕರ ರೇಷ್ಮೆ ಹುಳುಗಳಿಗೆ ತಗಲುವ ರೋಗ ಮತ್ತು ಕೀಟ ಬಾಧೆಗಳ ನಿಯಂತ್ರಣಕ್ಕಾಗಿ ಸೋಂಕು ನಿವಾರಕಗಳನ್ನು ಖರೀದಿಸಿ ರೇಷ್ಮೆ ಹುಳುಸಾಕುವ ಮನೆಗಳು ಮತ್ತು ರೇಷ್ಮೆ ಹುಳು ಸಾಕುವ ಉಪಕರಣಗಳನ್ನು ಸೋಂಕು ನಿವಾರಣೆ ಮಾಡಲು ಉಪಯೋಗಿಸಲಾಗಿದ್ದು ಇದರಲ್ಲಿ ರೂ.6.53 ಲಕ್ಷಗಳ ಆರ್ಥಿಕ ಪ್ರಗತಿಯಾಗಿರುತ್ತದೆ.

## ಅರಣ್ಯ:

ತುಮಕೂರು ಜಿಲ್ಲೆ 10 ತಾಲ್ಲೂಕುಗಳ ಭೌಗೋಳಿಕ ಮೇಲ್ಮೈ ಭಿನ್ನ ವಿಭಿನ್ನವಾಗಿದ್ದು ಹಲವು ಜಾತಿಯ ಮರ-ಗಿಡಗಳು ಬೆಳೆಯಲು ಕಾರಣವಾಗಿದೆ. ಈ ಜಿಲ್ಲೆಯು ಕುರುಚಲು ಕಾಡು, ದಟ್ಟ ಕಾಡು ಹಾಗೂ ಮಟ್ಟಸ್ಥ ತೆಳು ಮರ-ಗಿಡಗಳಿಂದ ಕೂಡಿದೆ. ಹಾಗಾಗಿ ಈ ಕಾಡುಗಳಲ್ಲಿ ಪ್ರಾಣಿ-ಪಕ್ಷಿ ಸಂಕುಲಕ್ಕೂ ಪ್ರೇರಕವಾಗಿವೆ. ಇಲ್ಲಿನ ಸಸ್ಯಗಳಾದ ಶ್ರೀಗಂಧ, ತೂಬರೆ, ಮತ್ತಿ, ಬ್ಯಾಟೆ, ಮರಡಿ, ಕಮರ, ಬಿಕ್ಕೆ, ಜಾಲಿ, ಹೊಂಗೆ, ಬೇವು, ಜಾಲಾರಿ, ದಿಂಡಿಗ, ಬಂದ್ರೆ, ಮುತ್ತುಗ, ಬ್ಯಾಲ ಮುಂತಾದ ಮರಗಳು ಕಂಡುಬರುತ್ತವೆ. ಈ ಕಾಡುಗಳಲ್ಲಿನ ಮರ-ಗಿಡಗಳು ಜನವರಿಯಿಂದ ಮಾರ್ಚಿವರೆಗೆ ತನ್ನ ಎಲೆಗಳನ್ನು ಉದುರಿಸಿ ಏಪ್ರಿಲ್-ಜೂನ್‌ನಲ್ಲಿ ಚಿಗುರುತ್ತವೆ. ಇವುಗಳ ಎಲೆಗಳೇ ಇವುಗಳಿಗೆ ಗೊಬ್ಬರವಾಗಿದೆ. ಸಿರಾ, ಗುಬ್ಬಿ ಈ ತಾಲ್ಲೂಕುಗಳಲ್ಲಿ ಕಂಡುಬರುವ ಮರಡಿ ಎಂಬ ಮರ ದ್ರಾಕ್ಷಿಹಣ್ಣಿನ ಸ್ವರೂಪದಲ್ಲಿಯೇ ಹುಳಿಮಿಶ್ರಿತ ಸಿಹಿ ಹಣ್ಣನ್ನು ಬಿಡುತ್ತದೆ. ಇದರ ಹಣ್ಣುಗಳನ್ನು ಹಕ್ಕಿಪಕ್ಷಿಗಳು ರಸ ಹೀರಿ ಒಳಗಿನ ಬೀಜಗಳನ್ನು ಉದುರಿಸುತ್ತವೆ. ಈ ಬೀಜ ಗಾತ್ರದಲ್ಲಿ ಅವರೆಕಾಳಿನ ಸ್ವರೂಪದಲ್ಲಿದ್ದು ಬಾದಾಮಿ ಕಾಯಿಯಂಥ ಕಠಿಣ ಚಿಪ್ಪಿನಿಂದ ಕೂಡಿರುತ್ತದೆ. ಅದನ್ನು ಒಡೆದರೆ ಒಳಗೆ ಬಾದಾಮಿ ಬೀಜದ ಅಥವಾ ಅದನ್ನೂ ಮೀರಿಸುವ ರುಚಿಕಟ್ಟಾದ ಪಪ್ಪು ಇರುತ್ತದೆ. ಇದನ್ನು ಗ್ರಾಮೀಣರು ವಿಶೇಷವಾಗಿ ಹೋಳಿಗೆ, ಪಾಯಸ ಮುಂತಾದ ಅಡಿಗೆ ತಯಾರಿಕೆಯಲ್ಲಿ ಬಳಸುತ್ತಾರೆ. ಆಕರ್ಷಕ ರುಚಿಯಿರುತ್ತದೆ. ಮರಡಿ ಹಣ್ಣು ಜನವರಿಯಿಂದ ಮೇವರೆಗೆ ಹಣ್ಣು, ಬೀಜದ ಕಾಲವಾಗಿರುತ್ತದೆ. ಇದನ್ನು ಅರಣ್ಯ ಇಲಾಖೆ ಪಚ್ಚಮಾರು ಅಥವಾ ಉದ್ಯಮಿಗಳಿಗೆ ಹರಾಜು ಹಾಕಿ ಮಾರಾಟ ಮಾಡುತ್ತಾರೆ. ಈ ಸಂದರ್ಭದಲ್ಲಿ ಸಾರ್ವಜನಿಕರು ಮರಡಿ ಹಣ್ಣು, ಬೀಜವನ್ನು ಕಾಡಿನಲ್ಲಿ ತಿನ್ನಬಹುದಾಗಿದೆ, ಹೊರಗೆ ತರುವಂತಿಲ್ಲ ಮತ್ತು ಸಂಗ್ರಹಿಸುವಂತಿಲ್ಲ.

**ತುಮಕೂರು ಜಿಲ್ಲೆಯ ಅರಣ್ಯ ಪ್ರದೇಶ** (ಹೆಕ್ಟೇರ್‌ಗಳಲ್ಲಿ)

| | | |
|---|---|---|
| 1) ತುಮಕೂರು ತಾಲ್ಲೂಕು | 15,509 ಎಕರೆ | ಶೇ.6.05 |
| 2) ಗುಬ್ಬಿ | 40,861 | ಶೇ.13.31 |
| 3) ಕುಣಿಗಲ್ | 23,742 | ಶೇ.9.85 |
| 4) ಮಧುಗಿರಿ | 28,546 | ಶೇ.10.21 |
| 5) ಸಿರಾ | 37,494 | ಶೇ.9.68 |
| 6) ಕೊರಟಗೆರೆ | 15,715 | ಶೇ.9.70 |
| 7) ಪಾವಗಡ | 18,425 | ಶೇ.5.4 |
| 8) ತಿಪಟೂರು | 10,807 | ಶೇ.5.42 |
| 9) ಚಿಕ್ಕನಾಯಕನಹಳ್ಳಿ | 29,875 | ಶೇ.10.73 |
| 10) ತುರುವೇಕೆರೆ | 3,951 | ಶೇ.2.03 |
| ಒಟ್ಟು | 2,24,925 | |

ತುಮಕೂರು ಜಿಲ್ಲೆ ಬಹುಮಟ್ಟಿಗೆ ಬಯಲು ನಾಡಾದರೂ ಅರಣ್ಯಗಳು, ಬೆಟ್ಟ-ಗುಡ್ಡ, ಕೊರಕಲು ಭೂ ಪ್ರದೇಶದಲ್ಲಿ ದಟ್ಟವಾಗಿದೆ. ಬುಕ್ಕಾಪಟ್ಟಣ, ಹಾಗಲವಾಡಿ, ಕಿಬ್ಬನಹಳ್ಳಿ, ಕೊಂಡ್ಲಿ, ತೀರ್ಥಪುರ, ದೇವರಾಯನದುರ್ಗ, ನಾಮದಚಿಲುಮೆ, ತೋವಿನಕೆರೆ, ಸೀಬಿ.,

ಅನುಪನಕುಂಟೆ (ಚೇಳೂರು ಹೋಬಳಿ), ಹುಲಿಯೂರು ದುರ್ಗ, ಹುತ್ರಿದುರ್ಗ ಮುಂತಾದ ಕಡೆ ಅರಣ್ಯ ಪ್ರದೇಶವಿದ್ದು ಒಟ್ಟು 883 ಚ.ಕಿ.ಮೀ. ಅರಣ್ಯವಿದೆ.

ಗ್ರಾಮಾಂತರ ಪ್ರದೇಶಗಳಲ್ಲಿ ಉರುವಲು ಹಾಗೂ ಜಾನುವಾರುಗಳಿಗೆ ಮೇವು ಒದಗಿಸಲು, ಸ್ಥಳೀಯರಿಗೆ ಸಣ್ಣ ಮರಮುಟ್ಟುಗಳ ಲಭ್ಯತೆ ಸೃಷ್ಟಿಸಲು ಮತ್ತು ಕೃಷಿ ಅರಣ್ಯ ಅಭಿವೃದ್ಧಿ, ರೈತ ಬಾಂಧವರಿಗೆ ಮರ–ಮುಟ್ಟು, ಮತ್ತು ವ್ಯವಸಾಯಕ್ಕೆ ಉಪಯೋಗವಾಗುವ ಮರಗಳು, ಪಕ್ಷಿಗಳಿಗೆ ಹಣ್ಣು–ಹಂಪಲು ಮತ್ತು ಪಶುಗಳಿಗೆ ಮೇವು ಕೊಡುವ ಮರಗಳ ಸಸಿಗಳನ್ನು ಬೆಳೆಸಿಕೊಟ್ಟು ಪರಿಸರ ಅಭಿವೃದ್ಧಿ ಪಡಿಸುವುದರ (ಹಸಿರು) ಜೊತೆಗೆ ಗ್ರಾಮಾಂತರ ಪ್ರದೇಶದಲ್ಲಿ ಮಹಾತ್ಮಗಾಂಧಿ ರ‍್ರಾಯ ಉದ್ಯೋಗಖಾತ್ರಿ ಯೋಜನೆ ಮತ್ತು ಇತರೆ ಯೋಜನೆಗಳಲ್ಲಿ ಕೂಲಿಗಾರರಿಗೆ ಉದ್ಯೋಗ ಒದಗಿಸುವಂತಹ ಮುಖ್ಯ ಉದ್ದೇಶಗಳನ್ನೊಳಗೊಂಡಂತಿದೆ. ಈ ಕಾರ್ಯಕ್ರಮಗಳಲ್ಲಿ ಸುಮಾರು 3.354ಲಕ್ಷ ಮಾನವ ದಿನಗಳ ಕೂಲಿಯ ಉದ್ಯೋಗ ಒದಗಿಸಲಾಗಿದೆ. ವಿಶೇಷವಾಗಿ 1.106 ಲಕ್ಷ ಮಾನವ ದಿನಗಳಷ್ಟು ಉದ್ಯೋಗವನ್ನು ಗ್ರಾಮೀಣ ಕೃಷಿ ಮಹಿಳಾ ಕಾರ್ಮಿಕರಿಗೆ ಒದಗಿಸಲಾಗಿದೆ.

**ಕಾರ್ಯಕ್ರಮಗಳು:**

1) ನೆಡುತೋಪು ಬೆಳೆಸುವುದು (ಸಾಮಾಜಿಕ ಅರಣ್ಯ ಯೋಜನೇತರ ಹಾಗೂ ಸಾಮಾಜಿಕ ಅರಣ್ಯ ಯೋಜನೆ)
2) ಸಸಿಗಳನ್ನು ನೆಡುವುದು
3) ಸಸಿಗಳನ್ನು ಮಳೆಗಾಲದಲ್ಲಿ ರೈತರ ಜಮೀನಿನಲ್ಲಿ ಗಿಡ ನೆಡುವುದು (ಒಉಓಖಇಉಂ)
4) ಮಳೆಗಾಲದಲ್ಲಿ ಇಲಾಖೆ ಹಾಗೂ ರೈತರ ಜಮೀನಿನಲ್ಲಿ ನೆಡುವ ಸಲುವಾಗಿ ಅವಶ್ಯಕವಿರುವ ಸಸಿಗಳನ್ನು ಬೆಳೆಸಿರುವುದು

ಮೇಲ್ಕಂಡ ಅರಣ್ಯೀಕರಣ ಕಾಮಗಾರಿಗಳನ್ನು ಸಾಮಾಜಿಕ ಅರಣ್ಯ ಯೋಜನೆ ಸಾಮಾಜಿಕ ಅರಣ್ಯ ಯೋಜನೇತರ, ರಸ್ತೆಬದಿ ನೆಡುತೋಪು, ಹಾಗೂ ಎಂ.ಜಿ.ಎನ್.ಆರ್.ಇ.ಜಿ.ಎ ಯೋಜನೆಗಳಡಿ ಪೂರ್ಣಗೊಳಿಸಲಾಗಿದೆ.

ಎಂ.ಜಿ.ಎನ್.ಆರ್.ಇ.ಜಿ.ಎ ಯೋಜನೆಯಲ್ಲಿ ಮಳೆಗಾಲದಲ್ಲಿ ಗ್ರಾಮ ಪಂಚಾಯ್ತಿಗಳ ವ್ಯಾಪ್ತಿಯಲ್ಲಿ ಬರುವ ಸಮುದಾಯ/ಸರ್ಕಾರಿ/ಶಾಲೆ/ರಸ್ತೆಬದಿಗಳಲ್ಲಿ ಒಟ್ಟು 321 ಹೆಕ್ಟೇರ್‌ನಲ್ಲಿ ನೆಡುತೋಪು ಬೆಳೆಸಲಾಗಿರುತ್ತದೆ. ಅಲ್ಲದೆ 4.467 ಲಕ್ಷ ಸಸಿಗಳನ್ನು ರೈತರ ಜಮೀನುಗಳಲ್ಲಿ ನೆಟ್ಟು ಕೊಡಲಾಗಿದೆ. ಮುಂದಿನ ಮಳೆಗಾಲದಲ್ಲಿ ಇಲಾಖೆಗೆ ಉಪಯೋಗಿಸಲು ಹಾಗೂ ರೈತರ ಜಮೀನಿನಲ್ಲಿ ನೆಡಲು ಈ ಸಾಲಿನಲ್ಲಿ ಒಟ್ಟು 13.45 ಲಕ್ಷ ಸಸಿಗಳನ್ನು ವಿವಿದ ಗಾತ್ರದ ಪಾಲಿಥೀನ್ ಚೀಲಗಳಲ್ಲಿ ಬೆಳೆಸಿಟ್ಟುಕೊಳ್ಳಲಾಗಿದೆ. ಈ ಯೋಜನೆಯಲ್ಲಿ ಒಟ್ಟು 247581 ಮಾನವ ದಿನಗಳ ಕೂಲಿ ಸೃಜಿಸಲಾಗಿದೆ.

ತುಮಕೂರು ಜಿಲ್ಲೆಯ ಒಳನಾಡಿನ ಭೂಪ್ರದೇಶಗಳೂ ಸೇರಿದಂತೆ ಇಲ್ಲಿನ ಅರಣ್ಯ ಪ್ರದೇಶಗಳಲ್ಲಿ ಪ್ರಾಣಿಗಳಾದ ನರಿ, ಮೊಲ, ಜಿಂಕೆ, ಕಾಡುಹಂದಿ, ಹುಲಿ, ಕರಡಿ, ಕಡವೆ, ಕಾಡುಕುರಿ, ಚಿರತೆ, ತೋಳ, ಆನೆ, ಇಲಿ, ಬೆಕ್ಕು, ಮುಂಗುಸಿ, ತೋಳ, ಮಂಗಗಳು ಕಂಡುಬರುತ್ತವೆ. ಪಕ್ಷಿಗಳಾದ ಗಿಳಿ, ಗೊರವಂಕ, ಕಾಗೆ, ಕೋಗಿಲೆ, ಕಾಗೆಸಿಳ್ಳ, ಬೆಳವ, ಕೊಕ್ಕರೆ, ಗಿಡುಗ, ಪಾರಿವಾಳ, ನವಿಲು, ಕಾಜಾಣ, ಗುಬ್ಬಚ್ಚಿ, ಸೆರ್ಲೆ ಹಕ್ಕಿ, ಪಿಟ್ಟೆಹಕ್ಕಿ, ಕೊರ್ಲೆ ಹಕ್ಕಿ, ಸೆರ್ಲೆ ಹಕ್ಕಿಗಳು ಕಂಡುಬರುತ್ತವೆ. ಇವು ಕಾಡು ಪ್ರದೇಶದಲ್ಲಿ ಮರಗಳಲ್ಲಿ ಗೂಡು ಕಟ್ಟಿಕೊಂಡೋ ಇಲ್ಲವೇ ಮರಗಳ ಪೊಟರೆಯಲ್ಲಿ ಕೆಲವು ಹಕ್ಕಿಗಳು ಭೂಮಿಯ ಬಿಲಗಳಲ್ಲಿ, ಕೆಲವು ನೆಲದಲ್ಲಿ ಕಲ್ಲುಗೂಡು ಮಾಡಿಕೊಂಡು, ಇನ್ನೂ ಕೆಲವು ನೀರಿನ ಒಳಗೆ ದಡದಲ್ಲಿ ಹುಲ್ಲು ಪೊದೆಗಳಲ್ಲಿ ವಾಸಿಸುತ್ತವೆ. ಇವು ಸಂತತಿಗಾಗಿ ಒಂದು ಕಡೆಯಿಂದ ಮತ್ತೊಂದು ಕಡೆಗೆ ವಲಸೆ ಹೋಗುವುದುಂಟು. ಬುಕ್ಕಾಪಟ್ಟ, ತಾವರೇಕೆರೆ, ಪಂಜಿಗಾನಹಳ್ಳಿ, ಬೂವನಹಳ್ಳಿ, ದೇವರಾಯನ ದುರ್ಗದ ಅಕ್ಕಪಕ್ಕದ ಹಳ್ಳಿ, ಮಧುಗಿರಿಯ ಕಡೆಯ ಕಾಡಿನ ಸಮೀಪದ ತೋಟ, ಕೆರೆ ಬಯಲಿಗೆ ಮೇವು ನೀರನ್ನು ಆಶ್ರಯಿಸಿ ನವಿಲುಗಳು ಬರುತ್ತವೆ. ಮಾತ್ರವಲ್ಲ ಇಲ್ಲಿನ ಮರ, ಪೊದೆಗಳಲ್ಲಿ ಮೊಟ್ಟೆಯಿಟ್ಟು ಸಂತಾನಾಭಿವೃದ್ಧಿಪಡಿಸುವುದು ಇದೆ. ವಿಷಜಂತುಗಳಾದ ನಾಗರಹಾವು, ಹೆಬ್ಬಾವು, ಕೇರೆ ಹಾವು, ಮಂಡಲದ ಹಾವು, ಹಸಿರು ಹಾವು, ಚೇಳು, ಮಂಡರಗಪ್ಪೆಗಳು, ಓತಿ, ಉಡ, ಹಾವುರಾಣಿ, ಗೊದ್ದ, ಇರುವೆ, ಕಟ್ಟಿರುವೆ, ಕೆಂಜಿಗ, ಜೇನುನೊಣ, ಕಣಜ ಮುಂತಾದ ಕೀಟಜಾತಿಯ ಪ್ರಾಣಿಗಳಿವೆ.

## ಮೀನುಗಾರಿಕೆ:

ತುಮಕೂರು ಜಿಲ್ಲೆಯಲ್ಲಿ ಮೀನುಗಾರಿಕೆಗೆ ವಿಫುಲವಾದ ಅವಕಾಶಗಳು ಇರುತ್ತವೆ. ತೆಂಗಿನ ನಾಡೆಂದು ಕರೆಯಲಾದ ತುಮಕೂರು ಜಿಲ್ಲೆಯನ್ನು ಕೆರೆಗಳ ಬೀಡೆಂದು ಸಹ ಕರೆಯಬಹುದು. ತುಮಕೂರು ಜಿಲ್ಲೆ 1691 ನೀರಾವರಿ ಕೆರೆಗಳನ್ನು ಹೊಂದಿದ್ದು ರಾಜ್ಯದಲ್ಲಿ

ಎರಡನೇ ಸ್ಥಾನದಲ್ಲಿ ಇರುತ್ತದೆ. ಇತ್ತೀಚಿನ ವರ್ಷಗಳಲ್ಲಿ ಹೇಮಾವತಿ ನಾಲಾ ಪಾದಾರ್ಪಣೆ ಮಾಡಿರುವುದರಿಂದ ಮೀನುಗಾರಿಕೆ ಅಭಿವೃದ್ಧಿಗೆ ವಿಫುಲವಾದ ಅವಕಾಶಗಳನ್ನು ಕಲ್ಪಿಸಿದೆ.

40 ಹೆಕ್ಟೇರ್ಗಿಂತ ಕಡಿಮೆ ಅಚ್ಚುಕಟ್ಟುವುಳ್ಳ ಕೆರೆಗಳನ್ನು ಸರ್ಕಾರದ ಆದೇಶ ಸಂಖ್ಯೆ/ಗ್ರಾಅಪ/165/ಜಿಪಸ/02 ದಿನಾಂಕ: 1–3–2004 ಮತ್ತು ದಿನಾಂಕ: 05–04–2004ರ ಮೇರೆಗೆ ಆಯಾ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿರುವ ಕೆರೆಗಳನ್ನು ಆಯಾ ಗ್ರಾಮ ಪಂಚಾಯತಿಗಳಿಗೆ ಈಗಾಗಲೇ ವರ್ಗಾಯಿಸಲಾಗಿರುತ್ತದೆ. ಸದರಿ ಕೆರೆಗಳನ್ನು ಗುತ್ತಿಗೆ ನೀಡುವ ಹಾಗೂ ಹರಾಜು ಮೂಲಕ ವಿಲೇವಾರಿ ಮಾಡುವ ಪ್ರಕ್ರಿಯೆಯನ್ನು ಆಯಾ ಗ್ರಾಮ ಪಂಚಾಯತಿ ವತಿಯಿಂದಲೇ ನಿರ್ವಹಿಸಲಾಗುವುದಲ್ಲದೆ ಅಂತಹ ಕೆರೆಗಳಿಂದ ಬರುವಂತಹ ಆದಾಯವನ್ನು ಗ್ರಾಮ ಪಂಚಾಯತಿಗಳ ಆರ್ಥಿಕ ಅಭಿವೃದ್ಧಿಗೆ ವಿನಿಯೋಗಿಸಿಕೊಳ್ಳುವುದಲ್ಲದೆ ಇತರೆ ಗ್ರಾಮಾಭಿವೃದ್ಧಿ ಕಾರ್ಯಗಳಿಗೆ ಖರ್ಚು ಮಾಡಲಾಗುವುದು. ಮೀನುಗಾರಿಕೆ ಇಲಾಖೆ ವತಿಯಿಂದ ಕೆರೆಗಳ ಅಭಿವೃದ್ಧಿ ಬಗ್ಗೆ ತಾಂತ್ರಿಕ ಸಲಹೆಯನ್ನು ನೀಡುವುದಲ್ಲದೆ ಕೆರೆಗಳಿಗೆ ಬೇಡಿಕೆಗನುಸಾರವಾಗಿ ಮೀನುಮರಿಗಳನ್ನು ಪೂರೈಸಲಾಗುವುದು.

ಜಿಲ್ಲೆಯಲ್ಲಿ ಕೆರೆ ಕಟ್ಟೆ ಜಲಾಶಯಗಳಲ್ಲಿ ಉತ್ತಮ ತಳಿಯ ಮೀನುಮರಿಗಳನ್ನು ವೈಜ್ಞಾನಿಕ ಪದ್ಧತಿಯನ್ನು ಅಳವಡಿಸಿ ಬಿತ್ತನೆ ಮಾಡಿ ಹೆಚ್ಚು ಮೀನು ಬೆಳೆಯುವುದು ಮತ್ತು ಪೌಷ್ಠಿಕ ಆಹಾರವನ್ನು ಹೆಚ್ಚು ಉತ್ಪಾದಿಸಿ ಸಾರ್ವಜನಿಕರಿಗೆ ಪೌಷ್ಠಿಕ ಆಹಾರ ಕೊರತೆ ನೀಗಿಸುವುದು ಈ ಇಲಾಖೆಯ ಮುಖ್ಯ ಉದ್ದೇಶ.

ಗ್ರಾಮೀಣ ಜನತೆಗೆ ಉದ್ಯೋಗವಕಾಶ ಕಲ್ಪಿಸಿಕೊಟ್ಟು ತನ್ಮೂಲಕ ಅವರ ಆರ್ಥಿಕ ಮತ್ತು ಸಾಮಾಜಿಕ ಜೀವನ ಮಟ್ಟವನ್ನು ಉತ್ತಮಪಡಿಸುವುದು ಈ ಇಲಾಖೆಯ ಜವಾಬ್ದಾರಿಗಳಲ್ಲಿ ಒಂದಾಗಿದೆ.

**ಜಿಲ್ಲೆಯ ಒಳನಾಡು ಮೀನುಗಾರಿಕೆ ಸಂಪನ್ಮೂಲಗಳು**

| ಕ್ರಮ ಸಂಖ್ಯೆ | ಸಂಪನ್ಮೂಲಗಳ } ವರ | ಕೆರೆಗಳ ಸಂಖ್ಯೆ | ಜಲ} "ತ್ರಣ~ (ಹೆಕ್ಟೇರ್‌ಗಳ ಲ್ಲ) |
|---|---|---|---|
| 1 | ಗ್ರಾಮ ಪಂಚಾಯತಿ ವ್ಯಾRತ್ತಕೆರೆಗಳು (40 ಹೆಕ್ಟೇರ್ಗಿಂತ ಅಚ್ಚುಕಟ್ಟು ಕಡಿಮೆ ವ್ಯಾಪ್ತಿಯ ಕೆರೆಗಳು) | 1319 | 17458 |
| 2 | ಇಲಾಖಾ ವ್ಯಾRತ್ತ ಕೆರೆಗಳು (40 ಹೆಕ್ಟೇರ್ ಕ್ಕಿಂತ ಹೆಚ್ಚು ವ್ಯಾಪ್ತಿಯ ಕೆರೆಗಳು) | 370 | 31292.00 |
| 3 | ಜಲಾಶಯಗಳು | 02 | 2682.00 |
| | **ಒಟ್ಟು** | **1691** | **51432.00** |

ಮೇಲ್ಕಂಡ ಜಲಾವೃತ್ತ ಪ್ರದೇಶಗಳಲ್ಲಿ ಉತ್ತಮ ತಳಿಯ ಮೀನುಗಳಾದ ಕಾಟ್ಲಾ, ರೋಹು, ಮೃಗಾಲ್, ಸಾಮಾನ್ಯಗೆಂಡೆ, ಬೆಳ್ಳಿಗೆಂಡೆ, ಮತ್ತು ಹುಲ್ಲುಗೆಂಡೆ ಮೀನುಮರಿಗಳನ್ನು ತಾಂತ್ರಿಕವಾಗಿ ಆಧುನಿಕ ಪದ್ಧತಿಯಲ್ಲಿ ಬಿತ್ತನೆ ಮಾಡಲಾಗುತ್ತದೆ. ಸರ್ವಕಾಲಿಕ ಮತ್ತು ದೀರ್ಘಾವಧಿ ನೀರುಳ್ಳ ಕೆರೆಗಳ ಮೀನು ಪಾಶುವಾರು ಹಕ್ಕನ್ನು ಟೆಂಡರ್ ಹರಾಜು ಮೂಲಕ ಹಾಗೂ ಅಲ್ಪಾವಧಿ ನೀರುಳ್ಳ ಕೆರೆಗಳನ್ನು ವಾರ್ಷಿಕ ಹರಾಜುಗಳ ಮೂಲಕ ವಿಲೇವಾರಿ ಮಾಡಲಾಗುತ್ತದೆ. ಇದರ ಜೊತೆಗೆ ಗ್ರಾಮ ಪಂಚಾಯತಿಗಳಿಗೆ ಮೀನುಗಾರರ ಸಹಕಾರ ಸಂಘಗಳಿಗೆ ಮತ್ತು ಇತರೆ ಸಂಘ ಸಂಸ್ಥೆಗಳಿಗೆ ಮೀನು ಪಾಶುವಾರು ಹಕ್ಕನ್ನು ಗುತ್ತಿಗೆ ಆಧಾರದ ಮೇಲೆ ನೀಡಲಾಗುತ್ತಿದೆ. ಜಿಲ್ಲೆಯ 8 ತಾಲ್ಲೂಕುಗಳಲ್ಲಿ 82 ಮೀನುಮರಿ ಪಾಲನಾ ಕೊಳಗಳಲ್ಲಿ 21.31 ಲಕ್ಷ ಮರಿಗಳನ್ನು ಪಾಲನೆ ಮಾಡಿ ವಿತರಿಸಲಾಗಿರುತ್ತದೆ. ಜಿಲ್ಲೆಯಲ್ಲಿ ಸುಮಾರು 30,000 ವೃತ್ತಿಪರ ಮೀನುಗಾರರು ಮೀನುಗಾರಿಕೆಯಲ್ಲಿ ಕಾರ್ಯನಿರತರಾಗಿರುತ್ತಾರೆ.

ಒಟ್ಟು 2 ಮೀನುಮರಿ ಉತ್ಪಾದನಾ ಕೇಂದ್ರಗಳಾದ ಮಾರ್ಕೋನಹಳ್ಳಿ, ಮೀನುಗಾರಿಕೆ ಇಲಾಖೆಯಡಿ ಊರುಕೆರೆ ಮೀನುಮರಿ ಉತ್ಪಾದನಾ ಕೇಂದ್ರ ಮೀನುಕೃಷಿಕರ ಅಭಿವೃದ್ಧಿ ಸಂಸ್ಥೆಯ ವಶದಲ್ಲಿ ಕಾರ್ಯನಿರ್ವಹಿಸುತ್ತಿವೆ. ಇವುಗಳಲ್ಲದೆಯೇ ಖಾಸಗಿ ಮೀನು ಮರಿ ಉತ್ಪಾದನಾ ಕೇಂದ್ರಗಳಾದ ಶ್ರೀ ಮಂಜುನಾಥ ಮೀನುಮರಿ ಉತ್ಪಾದನಾ ಕೇಂದ್ರ, ಚಿಕ್ಕನಹಳ್ಳಿ ಸಿರಾ ತಾಲ್ಲೂಕು, ಹಾಗೂ ಶ್ರೀ.ರಾಘವೇಂದ್ರ ಮೀನುಮರಿ ಉತ್ಪಾದನಾ ಕೇಂದ್ರ, ಮೇಳೆಕೋಟೆ, ತುಮಕೂರು ತಾಲ್ಲೂಕು ಇವು ಉತ್ಪಾದನೆಯನ್ನು ಕೈಗೊಂಡಿವೆ.

## ಕೈಮಗ್ಗ ಮತ್ತು ಜವಳಿ:

ಜಿಲ್ಲೆಯಲ್ಲಿ ಕೈಮಗ್ಗ ಮತ್ತು ಜವಳಿ ಇಲಾಖೆಯ ಜಿಲ್ಲಾ ಮಟ್ಟದ ಕಛೇರಿಯಿದ್ದು, ಸ್ವತಂತ್ರವಾಗಿ 1992 ರಿಂದ ಕಾರ್ಯನಿರ್ವಹಿಸುತ್ತಿದೆ. ಜಿಲ್ಲಾ ಮಟ್ಟದಲ್ಲಿ ಈ ಇಲಾಖೆಯು ಜಿಲ್ಲಾ ಪಂಚಾಯಿತಿಯ ಆಡಳಿತ ವ್ಯಾಪ್ತಿಯಲ್ಲಿ ಕೆಲಸ ಮಾಡುತ್ತಿದೆ. ತಾಲ್ಲೂಕು ಮಟ್ಟದಲಿ ಕಛೇರಿಯಾಗಲಿ, ಸಿಬ್ಬಂದಿಯಾಗಲಿ ಇರುವುದಿಲ್ಲ. ಹಾಲಿ ಇಲಾಖೆಯ ಜಿಲ್ಲಾ ಮಟ್ಟದ ಕಛೇರಿಯು ತುಮಕೂರಿನ ಟೂಡಾ ಕಚೇರಿ ಎದುರು, ಬೆಳಗುಂಬ ರಸ್ತೆಯಲ್ಲಿ ಖಾಸಗಿ ಕಟ್ಟಡವೊಂದರಲ್ಲಿ ಕೆಲಸ ನಿರ್ವಹಿಸುತ್ತಿದೆ. ಜಂಟಿ ನಿರ್ದೇಶಕರು, ಕೈಮಗ್ಗ ಮತ್ತು ಜವಳಿ ಇಲಾಖೆ ಇವರು ಕಛೇರಿಯ ಮುಖ್ಯಸ್ಥರಾಗಿದ್ದು ಮೂರು ತಾಂತ್ರಿಕ ಸಿಬ್ಬಂದಿ ಹಾಗೂ ಸಹಾಯಕ ಸಿಬ್ಬಂದಿ ಕಾರ್ಯನಿರ್ವಹಿಸುತ್ತಿದ್ದಾರೆ.

ಜಿಲ್ಲೆಯಲ್ಲಿ ಕೈಮಗ್ಗ ನೇಕಾರಿಕೆ ಹಾಗೂ ಜವಳಿ ಆಧಾರಿತ ಉತ್ಪಾದನಾ ಚಟುವಟಿಕೆಗಳ ಅಭಿವೃದ್ಧಿಗಾಗಿ ಇಲಾಖೆಯ ಕಛೇರಿ ಕಾರ್ಯನಿರ್ವಹಿಸುತ್ತಿದ್ದು, ಇದಕ್ಕಾಗಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ರೂಪಿಸಿರುವ ಅನೇಕ ಅಭಿವೃದ್ಧಿ ಯೋಜನೆಯಗಳನ್ನು ಅನುಷ್ಠಾನಗೊಳಿಸುತ್ತಿದೆ. ಕೇಂದ್ರ ವಲಯ ಯೋಜನೆಗಳಾದ ಆರೋಗ್ಯ ವಿಮೆ, ಮಹಾತ್ಮಗಾಂಧಿ ಬುನ್ಕರ್ ಬೀಮಾ ಯೋಜನೆ ಮತ್ತು ರಾಜ್ಯ ಸರ್ಕಾರದ ಯೋಜನೆಗಳಾದ ನೇಕಾರರ ಕಲ್ಯಾಣ ಯೋಜನೆ, ಹೊಸ ವಿನ್ಯಾಸ ಮತ್ತು ಪ್ರೌವೃತ್ತಿ ಯೋಜನೆ, ಕೈಮಗ್ಗ ಉತ್ಪನ್ನಗಳ ಮಾರಾಟದ ಮೇಲೆ ಶೇ.20 ರ ಪ್ರೋತ್ಸಾಹ ಮತ್ತು ವಿದ್ಯುತ್‌ಮಗ್ಗ ನೇಕಾರರಿಗೆ ರಿಯಾಯಿತಿ ಧರದಲ್ಲಿ ವಿದ್ಯುತ್ ಪೂರೈಕೆ, ವಿದ್ಯುತ್ ಮಗ್ಗಗಳ ಆಧುನೀಕರಣ ಇವೇ ಮುಂತಾದ ಯೋಜನೆಗಳು ಪ್ರಮುಖ ಯೋಜನೆಗಳಾಗಿವೆ. ಇದೇ ರೀತಿ ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಪಂಚಾಯತಿಯ ಮೂಲಕ ಅನುಷ್ಠಾನಗೊಳಿಸುತ್ತಿರುವ ಕೈಮಗ್ಗಗಳ ಆಧುನೀಕರಣ ಮತ್ತು ದುಡಿಯುವ ಬಂಡವಾಳ ಇತ್ಯಾದಿ ಪ್ರಮುಖ ಯೋಜನೆಗಳಿವೆ.

ತುಮಕೂರು ಜಿಲ್ಲೆಯಲ್ಲಿ ಪ್ರಮುಖವಾಗಿ ಉಣ್ಣೆ ಕೈಮಗ್ಗ ನೇಕಾರಿಕೆಯು ಸಾಂಪ್ರದಾಯಿಕ ಕಸುಬಾಗಿ ನಡೆಯುತ್ತಿದ್ದು, ಸ್ಥಳೀಯವಾಗಿ ದೊರೆಯುವ ಕುರಿಗಳ ತುಪ್ಪಟದಿಂದ ಕಂಬಳಿಗಳನ್ನು ಕೈಮಗ್ಗಗಳಲ್ಲಿ ತಯಾರಿಸಿ ಮಾರಾಟ ಮಾಡಲಾಗುತ್ತಿದೆ. ಉಣ್ಣೆ ಕಂಬಳಿ ತಯಾರಿಕೆಯ ಈ ಉದ್ಯೋಗವನ್ನು ಅವಲಂಭಿಸಿ ಜಿಲ್ಲೆಯಲ್ಲಿ ಸುಮಾರು 13360 ಕುಟುಂಬಗಳು ಜೀವನ ಸಾಗಿಸುತ್ತಿವೆ. ಜಿಲ್ಲೆಯ ಸಿರಾ, ಪಾವಗಡ, ಚಿಕ್ಕನಾಯಕನಹಳ್ಳಿ ಹಾಗೂ ತಿಪಟೂರು ಸಿರಾ ತಾಲ್ಲೂಕಿನ ಬೇವಿನಹಳ್ಳಿ, ನಿಡುಗಲ್, ಗುಬ್ಬಿಯ ಮೂಗನಾಯಕನಕೋಟೆ, ಇಡುಕನಹಳ್ಳಿ, ಶೂಲಯ್ಯನಪಾಳ್ಯಗಳಲ್ಲಿ ಉಣ್ಣೆ ಕಂಬಳಿ ಉತ್ಪಾದನೆ ಚಟುವಟಿಕೆಯು ಗಣನೀಯ ಪ್ರಮಾಣದಲ್ಲಿದೆ.

ಕಂಬಳಿ ಉತ್ಪಾದನೆಯ ನೇಕಾರರಿಗೆ ಅವರು ಕಸುಬನ್ನು ಮುಂದುವರಿಸಲು ಅನುಕೂಲವಾಗುವಂತೆ ಘನಸರ್ಕಾರದಿಂದ ಹಲವಾರು ಸವಲತ್ತುಗಳನ್ನು ಅವರ ಕಸುಬಿಗೆ ಪೂರಕವಾಗಿ ಒದಗಿಸಲಾಗುತ್ತಿದೆ. ತಯಾರಾದ ಕಂಬಳಿಗಳನ್ನು ಮಾರಾಟ ಮಾಡುವ ಜವಾಬ್ದಾರಿಯನ್ನು ನೇಕಾರರೇ ಸ್ಥಾಪಿಸಿಕೊಂಡ ಸ್ಥಳಿಯ ಸಹಕಾರ ಸಂಘಗಳು ವಹಿಸಿಕೊಳ್ಳುತ್ತವೆ. ನೇಕಾರರು ತಯಾರಿಸಿದ ಕಂಬಳಿಗಳನ್ನು ಸಂಘದ ವತಿಯಿಂದ ಖರೀದಿಸಿ, ದಾಸ್ತಾನಿಟ್ಟುಕೊಂಡು ಉತ್ತಮ ಬೆಲೆ ಬಂದಾಗ ಎಸ್ಟೇಟುಗಳಿಗೆ ಅವುಗಳನ್ನು ಮಾರಾಟ ಮಾಡುತ್ತಾರೆ. ನೇಕಾರರ ಬೆನ್ನುಲುಬಾಗಿ ನಿಂತಿರುವ ಈ ಸಹಕಾರ ಸಂಘಗಳಿಗೆ ದುಡಿಮೆ ಬಂಡವಾಳ, ಮಗ್ಗ ಸಲಕರಣೆಗಳಿಗೆ ಸಹಾಯಧನ ಇತ್ಯಾದಿ ರೂಪದಲ್ಲಿ ಆರ್ಥಿಕ ಸಹಾಯವನ್ನು ಒದಗಿಸಲಾಗುತ್ತಿದೆ. ವಸತಿ ಸಹಿತ ಕಾರ್ಯಾಗಾರವು ಇಂತಹ ಒಂದು ಪ್ರಮುಖ ಸೌಲಭ್ಯವಾಗಿದ್ದು, ವಾಸಿಸಲು ಮನೆ ಇಲ್ಲದ ನೇಕಾರರಿಗೆ ವಾಸಕ್ಕಾಗಿ ಮನೆ ಮತ್ತು ಮಗ್ಗ ಅಳವಡಿಸಿಕೊಳ್ಳುವುದಕ್ಕಾಗಿ ಒಂದು ಕಾರ್ಯಾಗಾರವನ್ನು ಈ ಯೋಜನೆಯಡಿ ಒದಗಿಸಲಾಗುವುದು. ಇದರ ಲಾಭ ಪಡೆದ ಅನೇಕ ಉಣ್ಣೆ ನೇಕಾರರು ಸೂರು ಹೊಂದಿದವರಾಗಿ ನೆಮ್ಮದಿಯ ಜೀವನ ಸಾಗಿಸುತ್ತಿದ್ದಾರೆ.

ಉಣ್ಣೆ ಕಂಬಳಿ ತಯಾರಿಕೆ ಬಿಟ್ಟರೆ ಜಿಲ್ಲೆಯಲ್ಲಿ ವ್ಯಾಪಕವಾಗಿ ನಡೆಯುತ್ತಿರುವ ಕೈಮಗ್ಗ ಚಟುವಟಿಕೆಯೆಂದರೆ ರೇಷ್ಮೆ ಸೀರೆ ಉತ್ಪಾದನೆ. ಜಿಲ್ಲೆಯ ಗುಬ್ಬಿ ಮತ್ತು ಚಿಕ್ಕನಾಯಕನಹಳ್ಳಿ ತಾಲ್ಲೂಕುಗಳ ಬಿದರೆ, ಕಲ್ಲೂರು, ಚೇಳೂರುಗಳಲ್ಲಿ ಹಾಗೂ ತಿಪಟೂರು ತಾಲ್ಲೂಕಿನ ಹಳೇಪಾಳ್ಯ, ಪಾವಗಡ ತಾಲ್ಲೂಕಿನ ವೈ.ಎನ್. ಹೊಸಕೋಟೆಗಳಲ್ಲಿ ರೇಷ್ಮೆ ಸೀರೆ ಉತ್ಪಾದನೆ ಗಣನೀಯ ಪ್ರಮಾಣದಲ್ಲಿ ನಡೆಯುತ್ತಿದೆ. ಕುಣಿ ಕೈಮಗ್ಗಗಳನ್ನು ಉಪಯೋಗಿಸಿಕೊಂಡು ಸಾಂಪ್ರದಾಯಿಕ ಮಾದರಿಯ ಅಪ್ಪಟ ರೇಷ್ಮೆ ಮತ್ತು ಜರಿ ಸೀರೆಗಳನ್ನು ತಯಾರಿಸುತ್ತಾರೆ.

ಇತ್ತೀಚಿನ ದಿನಗಳಲ್ಲಿ ಅತ್ಯಾಧುನಿಕ ವಿದ್ಯುತ್ ಚಾಲಿತ ಮಗ್ಗಗಳಿದ್ದರೂ ಸಹ ಕೈಮಗ್ಗಗಳಲ್ಲಿ ತಯಾರಾಗುವ ಅಪ್ಪಟ ರೇಷ್ಮೆ ಸೀರೆಗಳಿಗೆ ತನ್ನದೇ ಆದ ವಿಶೇಷ ಸ್ಥಾನವಿದ್ದು, ಮಾರುಕಟ್ಟೆಯಲ್ಲಿ ಉತ್ತಮ ಬೇಡಿಕೆ ಇದೆ.

ಕೈಮಗ್ಗ ಉತ್ಪಾದನೆಗಳಲ್ಲಿ ಹತ್ತಿ ಬಟ್ಟೆ ಉತ್ಪಾದನೆಯೂ ಪ್ರಮುಖ ಸ್ಥಾನ ಹೊಂದಿದೆಯಾದರೂ ತುಮಕೂರು ಜಿಲ್ಲೆಯಲ್ಲಿ ಹತ್ತಿ ಬಟ್ಟೆ ಉತ್ಪಾದನೆಯಾಗುತ್ತಿಲ್ಲ. ಜಿಲ್ಲೆಯಲ್ಲಿ ಪ್ರಮುಖವಾಗಿ ಕಾಣಸಿಗುವ ಮತ್ತೊಂದು ಜವಳಿ ಚಟುವಟಿಕೆಯೆಂದರೆ ವಿದ್ಯುತ್‌ಮಗ್ಗ ನೇಕಾರಿಕೆ, ಜಿಲ್ಲೆಯ ತಿಪಟೂರು, ತುರುವೇಕೆರೆ, ಮತ್ತು ಗುಬ್ಬಿ ತಾಲ್ಲೂಕುಗಳಲ್ಲಿ ಈ ಉದ್ದಿಮೆ ಇರುತ್ತದೆ. ಇದರಲ್ಲಿ ತಿಪಟೂರು ತಾಲ್ಲೂಕಿನಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯುತ್ ಮಗ್ಗಗಳಿದ್ದು, ಜಿಲ್ಲೆಯಾದ್ಯಂತ ಸುಮಾರು 8800 ವಿದ್ಯುತ್ ಮಗ್ಗಗಳಿವೆ. ಬಹುತೇಕ ಎಲ್ಲಾ ಮಗ್ಗಗಳಲ್ಲಿ ಪಾಲಿಯಸ್ಟರ್ /ಆರ್ಟ್ ಸಿಲ್ಕ್ ಸೀರೆಗಳನ್ನು ಉತ್ಪಾದನೆ ಮಾಡಲಾಗುತ್ತಿದೆ. ವಿದ್ಯುತ್‌ಮಗ್ಗ ನೇಕಾರರಿಗಾಗಿ ಕೇಂದ್ರ ಸರ್ಕಾರದಿಂದ ತಾಂತ್ರಿಕತೆ ಉನ್ನತೀಕರಣ ಯೋಜನೆ ಜಾರಿಯಲ್ಲಿದ್ದು ಜಾಗತಿಕ ಮಾರುಕಟ್ಟೆಗೆ ಹೊಂದುವಂತಹ ಉತ್ಪನ್ನಗಳ ತಯಾರಿಕೆಗೆ ಅವಶ್ಯವಿರುವ ಆಧುನಿಕ ಮಗ್ಗಗಳನ್ನು ಅಳವಡಿಸಿಕೊಳ್ಳುವ ನೇಕಾರರಿಗೆ ಆರ್ಥಿಕ ಸೌಲಭ್ಯವನ್ನು ಈ ಯೋಜನೆಯಡಿ ಒದಗಿಸಲಾಗುತ್ತಿದೆ. ಇದಲ್ಲದೆ ರಾಜ್ಯ ಸರ್ಕಾರದಿಂದ ವಿದ್ಯುತ್ ಮಗ್ಗ ನೇಕಾರರಿಗೆ ಇವರು ವಿನಿಯೋಗಿಸುವ ವಿದ್ಯುತ್‌ನ್ನು ರಿಯಾಯಿತಿ ದರದಲ್ಲಿ ಒದಗಿಸಲಾಗುತ್ತಿದೆ. ಮಗ್ಗಗಳನ್ನು ಆಧುನೀಕರಿಸಿಕೊಳ್ಳುವ ನೇಕಾರರಿಗೆ ಸಹಾಯ ಧನವನ್ನು ಒದಗಿಸಲಾಗುತ್ತಿದೆ.

ಜಿಲ್ಲೆಯಲ್ಲಿ ಒಟ್ಟು 40 ಕೈಮಗ್ಗ ನೇಕಾರರ ಸಹಕಾರ ಸಂಘಗಳು ಮತ್ತು 07 ವಿದ್ಯುತ್ ಮಗ್ಗ ನೇಕಾರರ ಸಹಕಾರ ಸಂಘಗಳು ಕಾರ್ಯ ನಿರ್ವಹಿಸುತ್ತಿವೆ. ಗ್ರಾಮೀಣ ಪ್ರದೇಶದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಉದ್ಯೋಗವನ್ನು ಒದಗಿಸಿರುವ ಕೈಮಗ್ಗ ನೇಕಾರಿಕೆಯನ್ನು ಉಳಿಸಿ ಬೆಳೆಸುವುದು ಹಾಗು ಮತ್ತೊಂದು ಕಡೆ ಮಾರುಕಟ್ಟೆ ಜಾಗತೀಕರಣದ ಹಿನ್ನೆಲೆಯಲ್ಲಿ ವಿದ್ಯುತ್ ಮಗ್ಗ ನೇಕಾರರನ್ನು ತಾಂತ್ರಿಕತೆ ಉನ್ನತೀಕರಣಕ್ಕೆ ಪ್ರೋತ್ಸಾಹಿಸಿ ಜಾಗತಿಕ ಮಾರುಕಟ್ಟೆಗೆ ಅವರ ಉತ್ಪನ್ನಗಳು ಹೊಂದುವಂತೆ ಮಾಡಲಾಗುತ್ತಿದೆ.

**ಜಿಲ್ಲೆಯಲ್ಲಿರುವ ತಾಲ್ಲೂಕುವಾರು ಕೈಮಗ್ಗ / ವಿದ್ಯುತ್‌ಮಗ್ಗಗಳ ಅಂಕಿ-ಅಂಶಗಳು**

| ಕ್ರಸಂ | ತಾಲ್ಲೂಕು | ರೇಷ್ಮೆ | ಉಣ್ಣೆ | ಹತ್ತಿ | ವಿದ್ಯುತ್‌ಮಗ್ಗ | ಒಟ್ಟು |
|---|---|---|---|---|---|---|
| 1 | ಚಿಕ್ಕನಾಯಕನಹಳ್ಳಿ | 500 | 2500 | 30 | 350 | 3380 |
| 2 | ಗುಬ್ಬಿ | 2000 | – | 20 | 1150 | 3170 |
| 3 | ಪಾವಗಡ | 3000 | 2500 | 0 | 50 | 5550 |
| 4 | ಶಿರಾ | – | 1500 | – | – | 1500 |
| 5 | ತಿಪಟೂರು | 2200 | 200 | 20 | 6000 | 8420 |
| 6 | ತುರುವೇಕೆರೆ | 300 | 0 | 0 | 1200 | 1500 |
| 7 | ಕೊರಟಗೆರೆ | 20 | – | – | 15 | 35 |
| 8 | ಮಧುಗಿರಿ | 25 | – | – | 30 | 55 |
| 9 | ತುಮಕೂರು | 8 | – | – | 12 | 20 |
| | **ಒಟ್ಟು** | **8053** | **6700** | **70** | **8807** | 23630 |

**ಜಿಲ್ಲೆಯಲ್ಲಿ ಅಸ್ತಿತ್ವದಲ್ಲಿರುವ ನೊಂದಾಯಿತ ನೇಕಾರ ಸಹಕಾರ ಸಂಘಗಳ ಅಂಕಿ-ಅಂಶಗಳು**

| ಕ್ರ.ಸಂ. | ತಾಲ್ಲೂಕು | ರೇಷ್ಮೆ | ಉಣ್ಣೆ | ವಿದ್ಯುತ್ ಮಗ್ಗ | ಒಟ್ಟು |
|---|---|---|---|---|---|
| 1 | ತಿಪಟೂರು | 16 | 01 | 04 | 21 |
| 2 | ಪಾವಗಡ | 03 | 06 | – | 09 |
| 3 | ಗುಬ್ಬಿ | 05 | – | 01 | 06 |
| 4 | ಚಿಕ್ಕನಾಯಕನಹಳ್ಳಿ | 01 | 02 | – | 03 |
| 5 | ತುರುವೇಕೆರೆ | – | – | 02 | 02 |
| 6 | ಶಿರಾ | 0 | 06 | – | 06 |
| | **ಒಟ್ಟು** | **25** | **15** | **07** | **47** |

ನೇಕಾರರ ಆರೋಗ್ಯದ ಭದ್ರತೆಗಾಗಿ ಕೇಂದ್ರ ಸರ್ಕಾರವು ನೇಕಾರರ ಆರೋಗ್ಯ ವಿಮಾ ಯೋಜನೆಯನ್ನು 2005-06 ನೇ ಸಾಲಿನಿಂದ ಜಾರಿಗೆ ತಂದಿರುತ್ತದೆ. ಮೆ:ಐ.ಸಿ.ಐ.ಸಿ.ಐ ಸಂಸ್ಥೆಯ ಸಹಯೋಗದೊಂದಿಗೆ ಈ ಯೋಜನೆಯನ್ನು ಜಾರಿಗೊಳಿಸಲಾಗಿದ್ದು, ವಾರ್ಷಿಕ ರೂ. 50/- ರ ವಂತಿಕೆಯನ್ನು ನೇಕಾರರು ಪಾವತಿಸಿದಲ್ಲಿ, ಇದಕ್ಕೆ ಕೇಂದ್ರ ಸರ್ಕಾರದಿಂದ ಹಾಗೂ ರಾಜ್ಯ ಸರ್ಕಾರದಿಂದ ವಂತಿಕೆಯನ್ನು ವಿಮಾ ಕಂಪನಿಗೆ ಪಾವತಿಸಲಾಗುವುದು. ಈ ವಂತಿಕೆಗೆ ವಾರ್ಷಿಕ ರೂ. 15,000/-ಗಳವರೆಗೆ ಆರೋಗ್ಯ ಭದ್ರತೆಯನ್ನು ಕಂಪನಿಯು ನೇಕಾರರಿಗೆ ಒದಗಿಸುವುದು. ಈ ಒಂದು ವರ್ಷದ ಅವಧಿಯಲ್ಲಿ ನೇಕಾರ ಮತ್ತು ಅವನ ಹೆಂಡತಿ ಹಾಗೂ ಇಬ್ಬರು ಮಕ್ಕಳಿಗೆ ಈ ಭದ್ರತೆ ಲಭ್ಯವಿದ್ದು, ಆಸ್ಪತ್ರೆ ಮತ್ತು ಔಷಧ ಖರೀದಿಗಾಗಿ ಅವರು ವೆಚ್ಚ ಮಾಡುವ ಸಂಪೂರ್ಣ ಹಣವನ್ನು ವಿಮಾ ಕಂಪನಿಯು ಮರುಪಾವತಿ ಮಾಡುತ್ತದೆ. ಜಿಲ್ಲೆಯ ಸುಮಾರು 850 ನೇಕಾರರು ಈ ಯೋಜನೆಯ ಲಾಭವನ್ನು ಪಡೆದುಕೊಂಡಿರುತ್ತಾರೆ.

## ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ :

**ಸಮಗ್ರ ಶಿಶು ಅಭಿವೃದ್ಧಿ ಯೋಜನೆ:** ತುಮಕೂರು ಜಿಲ್ಲೆಯಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯು ಮಹಿಳೆಯರ ಹಾಗೂ ಮಕ್ಕಳ ಕ್ಷೇಮಾಭಿವೃದ್ಧಿಗಾಗಿ ಹಮ್ಮಿಕೊಂಡಿರುವ ಕಾರ್ಯಕ್ರಮಗಳಲ್ಲಿ ಸಮಗ್ರ ಶಿಶು ಅಭಿವೃದ್ಧಿ ಯೋಜನೆಯು (ಐ.ಸಿ.ಡಿ.ಎಸ್) ಸಹ ಒಂದಾಗಿರುತ್ತದೆ.

ಜಿಲ್ಲೆಯಲ್ಲಿ ಒಟ್ಟು 11 ಐ.ಸಿ.ಡಿ.ಎಸ್. ಯೋಜನೆಗಳು ಇದ್ದು ಅಂದರೆ, 10 ತಾಲ್ಲೂಕುಗಳಾದ ತುಮಕೂರು (ಗ್ರಾ), ಶಿರಾ, ಚಿ.ನಾ.ಹಳ್ಳಿ ತಿಪಟೂರು ತುರುವೇಕೆರೆ, ಕೊರಟಗೆರೆ, ಕುಣಿಗಲ್, ಗುಬ್ಬಿ ಪಾವಗಡ ಮಧುಗಿರಿ ಹಾಗೂ ತುಮಕೂರು (ನಗರ) ಇವು ಕಾರ್ಯನಿರತ ಯೋಜನೆಗಳಾಗಿರುತ್ತದೆ. ಒಟ್ಟು 11 ಯೋಜನೆಗಳಲ್ಲಿ 4081 ಅಂಗನವಾಡಿ ಕೇಂದ್ರಗಳು ಮಂಜೂರಾಗಿದ್ದು, ಎಲ್ಲಾ 4081 ಅಂಗನವಾಡಿ ಕೇಂದ್ರಗಳೂ ಕಾರ್ಯನಿರ್ವಹಿಸುತ್ತಿವೆ.

**ಪೂರಕ ಪೌಷ್ಠಿಕ ಆಹಾರ ಕಾರ್ಯಕ್ರಮ:** ಈ ಕಾರ್ಯಕ್ರಮದಲ್ಲಿ ಜಿಲ್ಲೆಯ ಎಲ್ಲಾ ಅಂಗನವಾಡಿ ಕೇಂದ್ರಗಳಿಗೆ ಬರುವ 6 ವರ್ಷದೊಳಗಿನ ಮಕ್ಕಳಿಗೆ ಹಾಗೂ ಗರ್ಭಿಣಿ, ಬಾಣಂತಿ, ಕಿಶೋರಿ, ಅಂಗನವಾಡಿ ಕಾರ್ಯಕರ್ತೆ/ಸಹಾಯಕಿಯರಿಗೆ ಪೂರಕ ಆಹಾರ ಒದಗಿಸಲಾಗುತ್ತಿದೆ. ಪ್ರಯೋಜನ ಪಡೆದ ಫಲಾನುಭವಿಗಳ ಗುರಿ/ ಸಾಧನೆ ಕೆಳಕಂಡಂತಿರುತ್ತದೆ.

| ಕ್ರಸಂ | ವಿವರ | ಗುರಿ | ಸಾಧನೆ | ಶೇಕಡ |
|---|---|---|---|---|
| 1 | 6 ತಿಂಗಳಿಂದ 3 ವರ್ಷದ ಮಕ್ಕಳು | 88489 | 88394 | 99 |
| 2 | 3 ವರ್ಷದಿಂದ 6 ವರ್ಷದ ಮಕ್ಕಳು | 73439 | 71123 | 90 |
| 3 | ಗರ್ಭಿಣಿಯರು | 19278 | 18398 | 95 |
| 4 | ಬಾಣಂತಿಯರು | 19645 | 19311 | 98 |
| 5 | ಅಂ.ಕಾ.ಕ/ಸಹಾಯಕಿಯರು | 7643 | 7573 | 99 |
| 6 | ಕಿಶೋರಿಶಕ್ತಿ ಯೋಜನೆ | 8156 | 8149 | 99 |
| | ಒಟ್ಟು | 216640 | 212948 | 95 |

**ಗಿರಿಜನ ಉಪಯೋಜನೆ:**

| ಕ್ರಸಂ | ತಾಲ್ಲೂಕಿನ ಹೆಸರು | ಗಿರಿಜನ ಉಪಯೋಜನೆಯಡಿ ಅನುಷ್ಠಾನಗೊಂಡ ಕಾರ್ಯಕ್ರಮದ ವಿವರ | ನಿಗದಿಪಡಿಸಿದ ಗುರಿ | | ಸಾಧಿಸಿದ ಪ್ರಗತಿ | |
|---|---|---|---|---|---|---|
| | | | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ |
| 1 | 2 | 3 | 4 | 5 | 6 | 7 |
| | ಗುಬ್ಬಿ | ವೃತ್ತಿ ಆಧಾರಿತ ಬಡಗಿ/ಗಾರೆ ಉಪಕರಣ ವಿತರಣೆ | 0.20 | 04 | 19,960 | 4 |
| 2 | ಪಾವಗಡ | ವೃತ್ತಿ ಆಧಾರಿತ ಬಡಗಿ/ಗಾರೆ ಉಪಕರಣ ವಿತರಣೆ | 0.25 | 05 | 24,950 | 5 |
| 3 | ಮಧುಗಿರಿ | ವೃತ್ತಿ ಆಧಾರಿತ ಬಡಗಿ/ಗಾರೆ ಉಪಕರಣ ವಿತರಣೆ | 0.30 | 06 | 27,180 | 6 |
| 4 | ಕೊರಟಗೆರೆ | ವೃತ್ತಿ ಆಧಾರಿತ ಬಡಗಿ/ಗಾರೆ ಉಪಕರಣ ವಿತರಣೆ | 0.30 | 06 | 29,940 | 6 |
| 5 | ತುರುವೇಕೆರೆ | ವೃತ್ತಿ ಆಧಾರಿತ ಬಡಗಿ/ಗಾರೆ ಉಪಕರಣ ವಿತರಣೆ | 0.15 | 03 | 14,970 | 3 |
| 6 | ಶಿರಾ | ವೃತ್ತಿ ಆಧಾರಿತ ಬಡಗಿ/ಗಾರೆ ಉಪಕರಣ ವಿತರಣೆ | 0.40 | 08 | 39,920 | 8 |
| 7 | ಚಿಕ್ಕನಾಯಕನಹಳ್ಳಿ | ಹೊಲಿಗೆ ಯಂತ್ರ ವಿತರಣೆ | 0.10 | 02 | 9,980 | 2 |
| | **ಒಟ್ಟು** | | **1.70** | **34** | **1,66,900** | **34** |

| ಅ್ರಾ.ಖ | ತಾಲ್ಲೂಕಿನ ಹೆಸರು | }ಶೇಷ ಒಟಿಅ ಘ್ಟ ತ್ರೈಘ್ಟಿ ಅನುಷ್ಠಾನಗೊ "ದ ಕಾಯ~ಕ್ರಂತ್ಲಿ ೨}ವರ | 9ಗ' ಘ ಲ್ಲು೨ಗುರಿ | | ಸಾ', "ದ ಪ್ರಗ0 | |
|---|---|---|---|---|---|---|
| | | | ಆ'್ಡ~ಕ | ಭೌ0ಕ | ಆ'್ಡ~ಕ | ಭೌ0ಕ |
| 1 | 2 | 3 | 4 | 5 | 6 | 7 |
| | ಗುಬ್ಬಿ | ವೃ0್ತ ಆಧಾರಿತ ಬಡ /ಗಾರೆ ಉಪಕರಣ 9ೀಡು}ಕೆ | 0.80 | 16 | 79,840 | 16 |
| 2 | ಪಾವಗಡ | ವೃ0್ತ ಆಧಾರಿತ ಬಡ /ಗಾರೆ ಉಪಕರಣ 9ೀಡು}ಕೆ | 1.00 | 20 | 99,800 | 20 |
| 3 | ಮಧು ರಿ | ವೃ0್ತ ಆ್ಲ,ಾರಿತ ಬಡ /ಗಾರೆ ಉಪಕರಣ 9ೀಡು}ಕೆ | 1.00 | 20 | 99,600 | 20 |
| 4 | ಶ್ರೀ್ರಿ ಗ್ರಿ | ವೃ0್ತ ಆಧಾರಿತ ಬಡ /ಗಾರೆ ಉಪಕರಣ 9ೀಡು}ಕೆ | 1.00 | 20 | 99,800 | 20 |
| 5 | ್ರ ಷ್ಟು ಗ್ರಿ | ವೃ0್ತ ಆಧಾರಿತ ಬಡ /ಗಾರೆ ಉಪಕರಣ 9ೀಡು}ಕೆ | 0.77 | 15 | 74,850 | 15 |
| 6 | ್ಗ ಗಿಂ | ವೃ0್ತ ಆಧಾರಿತ ಬಡ /ಗಾರೆ ಉಪಕರಣ 9ೀಡು}ಕೆ | 1.00 | 20 | 99,800 | 20 |
| 7 | ್ಬ ಆ್ಯೂಖ್ಷ್ಟ್ರ೨ಯಿ | ಹೊ ಗೆ ಘ್ಟಾಖ9ೀಡು}ಕೆ/ಬಡ /ಗಾರೆ | 0.40 | 08 | 39,920 | 8 |
| 8 | ಶ್ರೀ್ರಿ್ರತ್ರಿ | ವೃ0್ತ ಆಧಾರಿತ ಬಡ /ಗಾರೆ ಉಪಕರಣ 9ೀಡು}ಕೆ | 0.60 | 12 | 59,880 | 12 |
| 9 | ಕುಣಿಗಲ್ | ವೃ0್ತ ಆಧಾರಿತ ಬಡ /ಗಾರೆ ಉಪಕರಣ 9ೀಡು}ಕೆ | 0.60 | 12 | 59,880 | 12 |
| 10 | ಕೊರಟಗೆರೆ | ವೃ0್ತ ಆಧಾರಿತ ಬಡ /ಗಾರೆ ಉಪಕರಣ 9ೀಡು}ಕೆ | 0.50 | 10 | 49,000 | 10 |
| | ರಲ್ರಿ | | **7.67** | **153** | **7,62,370** | **153** |

**2014–15 ನೇ ಸಾಲಿನಲ್ಲಿರುವಂತೆ ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ನೊಂದಾಯಿಸಿರುವ ಅಭ್ಯರ್ಥಿಗಳ ಸಂಖ್ಯೆ:**

| ತಾಲ್ಲೂಕುಗಳು | ಓ್ಯ\.ಓ್ಯ\.ಓಫಿ\.ಲ್ಬ ಷಾ೨ಅ್ರಂ್ತ }ದ್ಯಾಹ~ತೆ | | ಓ್ಯ\.ಓ್ಯ\.ಓಫಿ\.ಉ ಉ0್ತೀಣ~ರಾದವರು | | ಹ.ಘ್ರಿ.ಉ ಉ0್ತೀಣ~ರಾದವರು | |
|---|---|---|---|---|---|---|
| | ಹುಡುಗರು | ಹುಡು ಯರು | ಹುಡುಗರು | ಹುಡು ಯರು | ಹುಡುಗರು | ಹುಡು ಯರು |
| ಬ ಭ ಷ್ಟಿ೨ಯಿ | 21 | 20 | 94 | 33 | 66 | 31 |
| ಗುಬ್ಬಿ | 22 | 18 | 92 | 30 | 64 | 33 |
| ಕೊರಟಗೆರೆ | 20 | 17 | 93 | 37 | 72 | 25 |
| ಕುಣಿಗಲ\ | 19 | 16 | 89 | 30 | 66 | 31 |
| ಮದು ರಿ | 22 | 19 | 93 | 33 | 71 | 25 |
| ಪಾವಗಡ | 23 | 18 | 85 | 24 | 62 | 24 |
| ಉಾಹಿ | 21 | 20 | 83 | 33 | 56 | 36 |
| ್ರ ಷ್ಟಿ ಗ್ರಿ | 22 | 19 | 85 | 35 | 71 | 31 |
| ಶ್ರಿ್ರಿಗ್ರಿ | 31 | 22 | 120 | 48 | 79 | 48 |
| ಶ್ರಿ್ರಿ್ರತ್ರಿ | 21 | 18 | 77 | 31 | 69 | 27 |
| ಲ್ಲಾವೊತ್ತ | **222** | **187** | **911** | **334** | **696** | **311** |

## ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ:

ತುಮಕೂರು ಜಿಲ್ಲೆಯಲ್ಲಿ ಪಶುಪಾಲನಾ ಇಲಾಖೆಯು ಜಾನುವಾರು ಆರೋಗ್ಯ ರಕ್ಷಣೆ ಹಾಗೂ ಸಂಪತ್ತಿನ ಅಭಿವೃದ್ಧಿಗೆ ಸಂಬಂಧಿಸಿದಂತೆ ವಿವಿಧ ಕಾರ್ಯಗಳನ್ನು ಅನುಷ್ಠಾನಗೊಳಿಸಲು 233 ಪಶು ಸಂಸ್ಥೆಗಳಿರುತ್ತವೆ. ರೈತಾಪಿ ಜನರ ಆರ್ಥಿಕ ಅಭಿವೃದ್ಧಿಗಾಗಿ ಇಲಾಖೆಯು ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುತ್ತದೆ. ಇಲಾಖೆಯಲ್ಲಿ ಒಟ್ಟು 878 ಹುದ್ದೆಗಳು ಮಂಜೂರಾಗಿದ್ದು, ಅದರಲ್ಲಿ 612 ಹುದ್ದೆಗಳು ಭರ್ತಿಯಾಗಿರುತ್ತದೆ. ಅಲ್ಲದೆ ಜಿಲ್ಲೆಯಲ್ಲಿ ಪಶುವೈದ್ಯಕೀಯ ಪರೀಕ್ಷಕರ ತರಬೇತಿ ಕೇಂದ್ರ, ಹಳ್ಳಿಕಾರ್ ತಳಿಅಭಿವೃದ್ಧಿ ಕ್ಷೇತ್ರ ಹಾಗೂ ಕುರಿ ಮಂಡಳಿ ಘಟಕಗಳು ಕಾರ್ಯನಿರ್ವಹಿಸುತ್ತಿವೆ. 19ನೇ ಜಾನುವಾರು ಗಣತಿ ಪ್ರಕಾರ ಜಿಲ್ಲೆಯಲ್ಲಿ 589226 ದನಗಳು, 241907 ಎಮ್ಮೆಗಳು, 1067719 ಕುರಿಗಳು, 517763 ಮೇಕೆಗಳು, 711273 ಕೋಳಿಗಳು ಹಾಗೂ 7718 ಹಂದಿಗಳು ಪಶು ಸಂಪತ್ತಿನ ಗಣತಿಯಲ್ಲಿದ್ದು, ಕುರಿಗಳ ಸಂಖ್ಯೆಯಲ್ಲಿ ರಾಜ್ಯದಲ್ಲಿ ಮೊದಲನೆಯ ಸ್ಥಾನ ಹೊಂದಿರುತ್ತದೆ. ಮಧುಗಿರಿ ತಾಲ್ಲೂಕಿನ ತಿಮ್ಮಲಾಪುರ ಕರಡಿಧಾಮ, ಮೈದುನಹಳ್ಳಿ ಕೃಷ್ಣಮೃಗಧಾಮ ಹಾಗೂ ಸಿರಾ ತಾಲ್ಲೂಕು ಕಗ್ಗಲಡು ಪಕ್ಷಿ ಸಂರಕ್ಷಣಾ ಧಾಮಗಳಿವೆ. ದೇವರಾಯನದುರ್ಗ, ಬುಕ್ಕಾಪಟ್ಟಣ ಈ ಮೊದಲಾದ ಕಾಡುಗಳಲ್ಲಿ ಕಾಡುಪ್ರಾಣಿಗಳು ಅಧಿಕವಾಗಿವೆ.

**ಜಿಲ್ಲೆಯಲ್ಲಿನ ಪಶುಚಿಕಿತ್ಸಾ ಸಂಸ್ಥೆಗಳ ವಿವರ:**

| | | |
|---|---|---|
| 1) | ಪಶು ಆಸ್ಪತ್ರೆಗಳು | – 18 |
| 2) | ಪಶು ಚಿಕಿತ್ಸಾಲಯಗಳು | – 104 |
| 3) | ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರಗಳು | – 85 |
| 4) | ಸಂಚಾರಿ ಪಶು ಚಿಕಿತ್ಸಾಲಯಗಳು | – 10 |
| 5) | ಕೃತಕ ಗರ್ಭಧಾರಣಾ ಉಪ ಕೇಂದ್ರಗಳು. | – 16 |

**ಇತರೆ ಸಂಸ್ಥೆಗಳು:**

| | | |
|---|---|---|
| 6) | ಕೋಳಿ ವಿಸ್ತರಣಾ ಕೇಂದ್ರ | – 1 |
| 7) | ಕುರಿ ಪೋಷಕರ ಸಂಘ | – 1 |
| 8) | ದೊಡ್ಡರೋಗ ತಡೆ ಉಕ್ಕಡ | – 1 |
| 9) | ದೊಡ್ಡರೋಗ ನಿವಾರಣಾ ಯೋಜನೆ | – 1 |
| 10) | ವಿಶೇಷ ಜಾನುವಾರು ತಳಿ ಅಭಿವೃದ್ಧಿ ಯೋಜನೆ | – 1 |
| 11) | ಪಶುವೈದ್ಯಕೀಯ ಪರೀಕ್ಷಕರ ತರಬೇತಿ ಕೇಂದ್ರ (ರಾಜ್ಯವಲಯ) | – 1 |
| 12) | ಕುರಿ ಅಭಿವೃದ್ಧಿ ಮಂಡಳಿ | – 1 |
| 13) | ಹಳ್ಳಿಕಾರ್ ತಳಿ ಸಂವರ್ಧನಾ ಕೇಂದ್ರ ಕುಣಿಕೇನಹಳ್ಳಿ ತುರುವೇಕೆರೆ ತಾಲ್ಲೂಕು (ರಾಜ್ಯ ವಲಯ) | – 1 |

ಜಿಲ್ಲೆಯ ಪಶು ಆಸ್ಪತ್ರೆಗಳು ಮತ್ತು ಪಶುಚಿಕಿತ್ಸಾಲಯಗಳಲ್ಲಿ ಪದವೀಧರ ಪಶುವೈದ್ಯಾಧಿಕಾರಿಗಳು ಕಾರ್ಯನಿರ್ವಹಿಸುತ್ತಿರುತ್ತಾರೆ. ಇವರ ಸಹಾಯಕ್ಕೆ ಪ್ರತಿ ಕೇಂದ್ರಗಳಲ್ಲಿ ಜಾನುವಾರು ಅಧಿಕಾರಿಗಳು, ಹಿರಿಯ ಪಶುವೈದ್ಯಕೀಯ ಪರೀಕ್ಷಕರು, ಪಶುವೈದ್ಯಕೀಯ ಪರೀಕ್ಷಕರು, ಪಶುವೈದ್ಯಕೀಯ ಸಹಾಯಕರು ಹಾಗೂ ಡಿ. ದರ್ಜೆ ನೌಕರರ ಸಿಬ್ಬಂದಿ ವರ್ಗವಿರುತ್ತದೆ. ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರ ಮತ್ತು ಕೃತಕ ಗರ್ಭಧಾರಣೆ ಕೇಂದ್ರಗಳು ಆಯಾ ಸಂಸ್ಥೆಯ ವ್ಯಾಪ್ತಿಯ ಪಶು ಆಸ್ಪತ್ರೆ ಮತ್ತು ಪಶುಚಿಕಿತ್ಸಾಲಯದ ನಿಯಂತ್ರಣದಲ್ಲಿ ಕೆಲಸ ನಿರ್ವಹಿಸುತ್ತಿವೆ. ಈ ಇಲಾಖೆಯಲ್ಲಿ ಜಾನುವಾರುಗಳ ಚಿಕಿತ್ಸೆ, ಕೃತಕ ಗರ್ಭಧಾರಣೆ ಹಾಗೂ ರೋಗಗಳ ವಿರುದ್ಧ ಲಸಿಕೆ ಕಾರ್ಯಕ್ರಮ ಮತ್ತು ಪಶು ಸಂಪತ್ತಿನ ಅಭಿವೃದ್ಧಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

## ನೀರಾವರಿ:

ತುಮಕೂರು ಜಿಲ್ಲೆ ಬಯಲುನಾಡಿನ, ಗುಡ್ಡಗಾಡು ಮಿಶ್ರಿತ ಭೂಪ್ರದೇಶ. ಕೃಷಿ ಇಲ್ಲಿನ ಪ್ರಧಾನ ಕಸುಬು. ಕೃಷಿಗೆ ಮಳೆಯೇ ಆಧಾರ. ಆದರೂ ಮಳೆಯು ಕಳೆದ 5 ವರ್ಷಗಳಿಂದಲೂ ವರ್ಷದಿಂದ ವರ್ಷಕ್ಕೆ ಕಡಿಮೆಯಾಗುತ್ತಲೇ ಇದೆ. ನೀರಾವರಿಗೆ ಹೆಚ್ಚಾಗಿ ಕೆರೆ, ಕಟ್ಟೆ ಹಾಗೂ ತಲಪರಿಗೆಗಳನ್ನು ಅವಲಂಬಿಸಿದ್ದಾರೆ. ಈ ಜಿಲ್ಲೆಯ ಎರಡು ಜಲಾಶಯಗಳಿವೆ. ಕುಣಿಗಲ್ ತಾಲ್ಲೂಕಿನ ಅಮೃತೂರಿನ ಬಳಿ ಶಿಂಷಾ ನದಿಗೆ ಅಡ್ಡಲಾಗಿ ಕಟ್ಟಿರುವ, ಮಾರ್ಕೋನಹಳ್ಳಿ ಜಲಾಶಯ ಒಂದಾದರೆ ಎರಡನೆಯದು ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಸುವರ್ಣಮುಖಿ ನದಿಗೆ ಬೋರನಕಣಿವೆಯ ಬಳಿ ಅಡ್ಡಲಾಗಿ ಕಟ್ಟಿರುವ ಬೋರನಕಣಿವೆ ಜಲಾಶಯ ಮುಖ್ಯವಾದವುಗಳು. ಜೊತೆಗೆ ಕುಣಿಗಲ್ ತಾಲ್ಲೂಕಿನ ಮಂಗಳ ಗ್ರಾಮದ ಬಳಿ ನಾಗಿನಿ ನದಿ ಜಲಾಶಯ ಹಾಗೂ ಕೆಂಪಾಂಬುದಿ ಕೆರೆ ಈ ಭಾಗದ ಕೆಲವು ಭಾಗಕ್ಕೆ ನೀರೊದಗಿಸುತ್ತದೆ. ಜೊತೆಗೆ ಹಾಸನ ಜಿಲ್ಲೆಯ ಗೊರೂರು ಬಳಿಯ ಹೇಮಾವತಿ ಜಲಾಶಯದ ಎಡದಂಡೆ ನಾಲೆ ಮೊದಲಿಗೆ ತುಮಕೂರು ಜಿಲ್ಲಾ ಕೇಂದ್ರಕ್ಕೆ ಕುಡಿಯುವ ನೀರು ಒದಗಿಸುವ ಸಲುವಾಗಿ ನೀರು ಹರಿಸಿದರೂ, ಇಂದು ತುರುವೇಕೆರೆ, ತಿಪಟೂರು, ಗುಬ್ಬಿ ತಾಲ್ಲೂಕಿನ ಈ ನಾಲೆಯ ಬಲಬದಿಯ ಬಹುತೇಕ ಕೆರೆಗಳು ತುಂಬುತ್ತವೆ. ಕುಡಿಯುವ ನೀರಿನ ಸಲುವಾಗಿ ಕೃಷ್ಣಾ ಕೊಳ್ಳದ ವ್ಯಾಪ್ತಿಯ ಸಿರಾ, ಕಳ್ಳಂಬೆಳ್ಳ ಕೆರೆಗಳು ಹೇಮಾವತಿ ನೀರಿನಿಂದ ತುಂಬಿಕೊಂಡು ಕಳ್ಳಂಬೆಳ್ಳ ತೋಟ, ಗದ್ದೆಗಳಿಗೆ ನೀರು ಬಳಕೆಯಾಗುತ್ತದೆ. ಕುಣಿಗಲ್, ಮಾರ್ಕೋನಹಳ್ಳಿ ಜಲಾಶಯಗಳು ಹೇಮಾವತಿ ನೀರಿನಿಂದ ತುಂಬಿಕೊಳ್ಳುತ್ತಿವೆ. ಈ ವ್ಯಾಪ್ತಿಯ ಕಡಬ, ಗುಬ್ಬಿ, ಬಿದರೆ, ಈಚನೂರು, ತಿಪಟೂರು, ನಿಟ್ಟೂರು, ಬುಗುಡನಹಳ್ಳಿ, ಮೂಕನಹಳ್ಳಿ ಪಟ್ಟಣ, ಕಲ್ಲೂರು ಕೆರೆಗಳು ಹೇಮಾವತಿ ನೀರಿನಿಂದ ತುಂಬಿ ಆ ಭಾಗದ ರೈತರ ಬದುಕಿನಲ್ಲಿ ಚೈತನ್ಯ ಮೂಡಿಸಿದೆ. ಅಷ್ಟರಮಟ್ಟಿಗೆ ಹೇಮಾವತಿ ತುಮಕೂರು ಜಿಲ್ಲೆಯ ಜನಗಳ ಪಾಲಿಗೆ ವರದಾನವಾಗಿದೆ. ಮಧುಗಿರಿ,

ಕೊರಟಗೆರೆ, ಪಾವಗಡ ಈ ತಾಲ್ಲೂಕಿನ ಕೆರೆಗಳಿಗೂ ಕುಡಿಯುವ ಸಲುವಾಗಿ ಹೇಮಾವತಿ ನೀರು ಬಳಕೆಯಾಗುತ್ತಿರುವುದು ಉತ್ತಮ ಬೆಳವಣಿಗೆಯಾಗಿದೆ. ಜಯಮಂಗಲಿ, ಶಿಂಷಾ, ಸುವರ್ಣಮುಖಿ, ಗರುಡಾಚಲ ಮತ್ತು ಉತ್ತರ ಪಿನಾಕಿನಿ ತುಮಕೂರು ಜಿಲ್ಲೆಯ ನದಿಗಳು. ಇವು ಮಳೆಯನ್ನು ಆಶ್ರಯಿಸಿ ಹರಿಯುತ್ತವೆ. ಬೇಸಿಗೆಯಲ್ಲಿ ಬತ್ತಿಹೋಗಿ ನದಿ ದಂಡೆಯ ತೋಟಗಳಿಗೆ ತಲಪುರಿಗೆಗಳಾಗಿಯೂ, ಕುಟ್ಟೋ ಬೋರ್ ಮೂಲಕವೂ ನೀರು ಒದಗಿಸುತ್ತವೆ.

ಸುವರ್ಣಮುಖಿ ನದಿ ಕೊರಟಗೆರೆ ತಾಲ್ಲೂಕಿನ ಚನ್ನರಾಯನ ದುರ್ಗದಲ್ಲಿ ಹುಟ್ಟಿ 24 ಕಿಮೀ ದೂರ ಹರಿದು ಮುಂದೆ ರಾಂಪುರದ ಬಳಿ ಜಯಮಂಗಲಿನ ನದಿಯನ್ನು ಸೇರುತ್ತದೆ. ಜಯಮಂಗಲಿ ನದಿ ದೇವರಾಯನದುರ್ಗ ಜಲದಗೊಂಡಿ ಎಂಬಲ್ಲಿ ಹುಟ್ಟಿ, ಉತ್ತರಾಭಿಮುಖವಾಗಿ ಹರಿದು ಮಧುಗಿರಿ ತಾಲ್ಲೂಕಿನಲ್ಲಿ ಹರಿಯುತ್ತದೆ. ಈ ಜಿಲ್ಲೆಯಲ್ಲಿ ಅತಿ ಹೆಚ್ಚು ದೂರ ಹರಿಯುವ ಜಯಮಂಗಲಿ (64 ಕಿ.ಮೀ) ಮುಂದೆ ಉತ್ತರ ಪಿನಾಕಿನಿಯನ್ನು ಸೇರುತ್ತದೆ. ಗರುಡಾಚಲ ತೊರೆ ದೇವರಾಯನದುರ್ಗದ ಆಗ್ನೇಯದಲ್ಲಿ ಹುಟ್ಟಿ ಕೊರಟಗೆರೆ ತಾಲ್ಲೂಕಿನಲ್ಲಿ ಹರಿದು ಹೊಳವನಹಳ್ಳಿ ಬಳಿ ಜಯಮಂಗಲಿಯನ್ನು ಸೇರುತ್ತದೆ. ಕೋಲಾರ ನಂದಿಬೆಟ್ಟದಲ್ಲಿ ಹುಟ್ಟುವ ಉತ್ತರ ಪಿನಾಕಿನಿ ನದಿ ಪಾವಗಡ ತಾಲ್ಲೂಕಿನ ಮೂಲಕ ಹಾದು ಮುಂದೆ ಆಂಧ್ರಪ್ರದೇಶದತ್ತ ಹರಿಯುತ್ತದೆ. ಮಧುಗಿರಿ ತಾಲ್ಲೂಕಿನಲ್ಲಿ ಹರಿಯುವ ಕುಮುದ್ವತಿ ಉತ್ತರ–ಪೂರ್ವ ಭಾಗದ ಗ್ರಾಮಗಳಿಗೆ ಅನುಕೂಲವಾಗಿದೆ. ದೇವರಾಯನದುರ್ಗದಲ್ಲಿ ಹುಟ್ಟುವ ಶಿಂಷಾ ನದಿ ತುಮಕೂರು, ಗುಬ್ಬಿ, ತುರುವೇಕೆರೆ, ಕುಣಿಗಲ್ ಮೂಲಕ ಹರಿದು ಕಾವೇರಿ ನದಿಯನ್ನು ಸೇರುತ್ತದೆ. ಇದರ ವ್ಯಾಪ್ತಿ 99 ಕಿ.ಮೀ ದೂರಕ್ಕೆ ವ್ಯಾಪಿಸಿದೆ. ನಾಗಿನಿ ನದಿ ಕುಣಿಗಲ್ ತಾಲ್ಲೂಕಿನಲ್ಲಿ ಹುಟ್ಟಿ ಇದರ ವ್ಯಾಪ್ತಿಯಲ್ಲಿ 10 ಕಿಮೀ ದೂರದ ಹರಿದು ಶಿಂಷಾ ನದಿಯನ್ನು ಕೂಡಿಕೊಳ್ಳುತ್ತದೆ.

ಸಿರಾ, ಬುಕ್ಕಾಪಟ್ಟಣ, ಹುಲಿಯೂರುದುರ್ಗ, ಹೆಬ್ಬೂರು, ನಾಗವಲ್ಲಿ, ತುಮಕೂರು, ಗುಬ್ಬಿ, ಕಡಬ, ಹುಳಿಯಾರು, ಹಂದನಕೆರೆ, ನಿಟ್ಟೂರು, ಕಲ್ಲೂರು, ಕಳ್ಳಂಬೆಳ್ಳ, ಚೇಳೂರು, ಬಿದರೆ. ಹಲಸಿನಕೆರೆ (ಬ್ಯಾಡನಕಟ್ಟೆ), ಮೂಗನಾಯಕನಕೋಟೆ, ಸಂಪಿಗೆಯ ಕೆರೆಗಳು ಮಳೆಯಾಶ್ರಿತವಾಗಿದ್ದು ತುಂಬಿದರೆ ಸಾವಿರ ಎಕರೆ ಭೂ ಪ್ರದೇಶಕ್ಕೆ, ಜನ–ಜಾನುವಾರುಗಳಿಗೆ ನೀರಿನ ಸೌಕರ್ಯ ಒದಗಿಸುತ್ತವೆ.

## ಗಣಿ ಮತ್ತು ಭೂವಿಜ್ಞಾನ:

ಹಿರಿಯ ಭೂ ವಿಜ್ಞಾನಿಯವರ ಕಛೇರಿ, ಗಣಿ ಮತ್ತು ಭೂ ವಿಜ್ಞಾನ ಇಲಾಖೆ, ಅಂತರ್ಜಲ ವಿಭಾಗವು ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿ 1978ರಿಂದ ಕಾರ್ಯ ನಿರ್ವಹಿಸುತ್ತಿದ್ದು ಭೂ ವೈಜ್ಞಾನಿಕ ಹಾಗೂ ಭೂ ಭೌತ ಸರ್ವೇಕ್ಷಣೆಗಳಿಂದ ನೀರಾವರಿ, ಕುಡಿಯುವ ನೀರು ಪೂರೈಕೆ, ಕೈಗಾರಿಕೆಗಳ ಉದ್ದೇಶಕ್ಕಾಗಿ, ಖಾಸಗಿ, ಸರ್ಕಾರಿ ಹಾಗೂ ಅರೆ ಸರ್ಕಾರಿ ವಲಯಗಳಿಂದ ಮನವಿಗಳನ್ನು ಸ್ವೀಕರಿಸಿದ ಪ್ರಕರಣಗಳಲ್ಲಿ ತೋಡುಬಾವಿಗಳಿಗೆ/ಕೊಳವೆ ಬಾವಿಗಳಿಗೆ ನಿರ್ಮಿಸಲು ಸೂಕ್ತ ಸ್ಥಳ ಆಯ್ಕೆ ಮಾಡುವುದು ಈ ಕಛೇರಿಯ ಮುಖ್ಯ ಉದ್ದೇಶವಾಗಿದೆ. ಜಿಲ್ಲೆಯಲ್ಲಿನ 94 ಅಧ್ಯಯನ ಕೊಳವೆ ಬಾವಿಗಳಲ್ಲಿ ಪ್ರತಿ ಮಾಹೆ ಜಲಮಟ್ಟ ಮಾಪನ ಮಾಡುವುದು ಮತ್ತು ಮಾಹಿತಿ ಕ್ರೋಡೀಕರಿಸಿ ಕೇಂದ್ರ ಕಛೇರಿಗೆ ಹಾಗೂ ಸರ್ಕಾರದ ವಿವಿಧ ಇಲಾಖೆಗಳಿಗೆ ರವಾನಿಸಲಗುವುದು. ಈ ಅಧ್ಯಯನ ಕೊಳವೆ ಬಾವಿಗಳ ಪ್ರದೇಶಗಳಲ್ಲಿ 94 ನೀರಿನ ಮಾದರಿಗಳನ್ನು ಪೂರ್ವ ಮುಂಗಾರಿನಲ್ಲಿ ಸಂಗ್ರಹಿಸಿ ವಿಶ್ಲೇಷಣೆ ವರದಿಗಳನ್ನು ಪಡೆದು ವಿವರವಾದ ವರದಿಯನ್ನು ಕೇಂದ್ರ ಕಛೇರಿಗೆ ಸಲ್ಲಿಸಲಾಗುವುದು. ಈ ನೀರಿನ ಮಾದರಿಗಳಲ್ಲಿ ಬಹಳಷ್ಟು ವ್ಯತ್ಯಾಸವಿರುವ ಪ್ರದೇಶಗಳಲ್ಲಿ ಜನವರಿ ಮಾದರಿಗಳಲ್ಲಿ ಪುನಃ ನೀರಿನ ಮಾದರಿಗಳನ್ನು ವಿಶ್ಲೇಷಣೆ ಮಾಡಿಸಿ ವರದಿಗಳನ್ನು ತಯಾರಿಸಿ ಕೇಂದ್ರ ಕಛೇರಿಗೆ ಸಲ್ಲಿಸಲಾಗುವುದು. ಜಿಲ್ಲೆಯಲ್ಲಿನ ವಿಫಲ ತೋಡು ಬಾವಿ ಪ್ರಕರಣಗಳನ್ನು ವಿಫಲ ಬಾವಿ ಸಮಿತಿ ಅಧ್ಯಕ್ಷರಾದ ತಹಶೀಲ್ದಾರರ ಸಹಯೋಗದೊಂದಿಗೆ ಸ್ಥಳ ತನಿಖೆ ನಡೆಸಿ ವಿಲೇವಾರಿ ಮಾಡುವುದು.

ನಿರ್ದೇಶಿತ ಜಲಾನಯನ ಪ್ರದೇಶದ ನೀರಾವರಿ ಬಾವಿಗಳ ವಿವರ ಸಂಗ್ರಹಿಸಿ ಜಲಾನಯನ ಪ್ರದೇಶದ ಅಂತರ್ಜಲ ಮೌಲೀಕರಣ ಮಾಡುವುದು, ಅಂತರ್ಜಲ ಸಮೀಕ್ಷೆ ಮಾಡಿದ ಪ್ರದೇಶಗಳಲ್ಲಿ ತೋಡು ಬಾವಿ ಹಾಗೂ ಕೊಳವೆ ಬಾವಿಗಳಲ್ಲಿ ನೀರಿನ ಮಾದರಿಗಳನ್ನು ಸಂಗ್ರಹಿಸಿ ಅವುಗಳ ರಾಸಾಯನಿಕ ವಿಶ್ಲೇಷಣೆ ನಡೆಸಿ ಗುಣ ಮಟ್ಟ ನಿರ್ಧರಿಸಲಾಗುವುದು. ಮಿತಿ ಮೀರಿದ ಅಂತರ್ಜಲ ಬಳಕೆಯಿಂದಾಗಿ ಅಂತರ್ಜಲ ಮಟ್ಟ ಕುಸಿಯುತ್ತಿರುವುದನ್ನು ಗಮನಿಸಿ ಅಂತರ್ಜಲ ಪುನಃಶ್ಚೇತನಕ್ಕಾಗಿ ಕೃತಕ ಮರು ಪೂರೈಕೆ ರಚನೆಗಳನ್ನು ನಿರ್ಮಿಸುವ ಕಾರ್ಯ ಕ್ರಮಗಳನ್ನು ಕೇಂದ್ರ ಕಛೇರಿಯ ನಿರ್ದೇಶನದಂತೆ ಹಮ್ಮಿಕೊಂಡಿದೆ. ಸರ್ಕಾರದ ಆದೇಶದ ಸಂಖ್ಯೆ:ಸಿಐ.24..ಎಂಜಿಎಸ್.87.ದಿನಾಂಕ: 10–03–1987ರ ಮೂಲಕ ಈ ಕಾರ್ಯಾಲಯವು ದಿನಾಂಕ.01.04.1987 ರಿಂದ ಅನ್ವಯವಾಗುವಂತೆ ಜಿಲ್ಲಾ ಪಂಚಾಯತ್ ವ್ಯಾಪ್ತಿಗೆ ಒಳ ಪಟ್ಟಿದ್ದು ಅದರ ಆಡಳಿತಾತ್ಮಕ ನಿಯಂತ್ರಣದಲ್ಲಿ ಕಾರ್ಯ ನಿರ್ವಹಿಸುತ್ತಿದೆ.

**ಖನಿಜ:**

ಜಿಲ್ಲೆಯು ಅಪಾರ ಪ್ರಮಾಣದ ಖನಿಜ ಸಂಪತ್ತನ್ನು ಹೊಂದಿದೆ. ಮ್ಯಾಂಗನೀಸ್, ಸುಣ್ಣದ ಕಲ್ಲು, ಕಬ್ಬಿಣದ ಅದಿರು, ಬೆಣಚುಕಲ್ಲು, ಕೊರಂಡಂ, ಸಿಲ್ವರ್ ಸ್ಯಾಂಡ್, ಡಾಲ್ಮೈಟ್, ಗ್ರಾನೈಟ್, ಚಿನ್ನದ ಅದಿರು, ಸೋಪ್‌ಸ್ಟೋನ್, ಮರಳು ಹಾಗೂ ಜೇಡಿಮಣ್ಣು ಹೀಗೆ ಬಹುಬಗೆಯ ಸ್ವರೂಪ ಹೊಂದಿದೆ. ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಪೂರ್ವಕ್ಕೆ ಕರಡಿಗುಡ್ಡ, ತಿಮ್ಮನಗುಡ್ಡ, ಬಸವನಗುಡ್ಡ, ಕರಡಿಕಾಲು ಗುಡ್ಡದಿಂದ ಹಾಯ್ದು ತೀರ್ಥಪುರ, ಅಜ್ಜಿಗುಡ್ಡೆ, ಮದನಮಡು ಮಾರ್ಗವಾಗಿ ಹತ್ಯಾಳು ನರಸಿಂಹಸ್ವಾಮಿ ದೇವಾಲಯದ ಬೆಟ್ಟದವರೆಗೆ ಕೊಂಡ್ಲಿ ಸೇರಿದಂತೆ ಮ್ಯಾಂಗನೀಸ್ ಕಲ್ಲಿನ ಉತ್ಕೃಷ್ಟ ಗಣಿಯಿದೆ. ಬೆಳ್ಳಾರ ಹಾಗೂ ಸಿರಾ ತಾಲ್ಲೂಕು ಬುಕ್ಕಾಪಟ್ಟಣ ಹೋಬಳಿಯ ಅಜ್ಜೇನಹಳ್ಳಿಯ ಚಿನ್ನದ ಅದಿರು ನಿಕ್ಷೇಪಗಳನ್ನು ಗುರುತಿಸುವ, ಖನಿಜವನ್ನು ತೆಗೆಯುವ ಕೆಲಸವೂ ಆಗಿತ್ತು. ಸಿರಾ, ಹಿರಿಯೂರು ತಾಲ್ಲೂಕುಗಳ ಗಡಿರಾಮನಹಳ್ಳಿ, ಕರಿಯಾಲದ ಬಳಿಯ ಚಿನ್ನದ ಗಣಿಕಾರ್ಯ ಇತ್ತೀಚಿನವರೆಗೂ ನಡೆದು ಇಲ್ಲಿ ತೆಗೆದ ಕಚ್ಚಾ ಅದಿರನ್ನು ಚಿತ್ರದುರ್ಗ ಚಿನ್ನ ಸಂಸ್ಕರಣೆ ಹಾಗೂ ಹಟ್ಟಿ ಚಿನ್ನದ ಗಣಿಗೆ ಕಳಿಸಿಕೊಡುವ ಕೆಲಸ ನಡೆದಿತ್ತು. ಸಧ್ಯ ಕಾರ್ಯ ಸ್ಥಗಿತವಾಗಿದೆ. ಕೊಂಡ್ಲಿ, ಮುಸಕೊಂಡ್ಲಿ, ರಾಂಪುರ, ತೀರ್ಥಪುರ, ದೊಡ್ಡಗುಣಿ ಈ ಭಾಗಗಳಲ್ಲಿ ಉಪಲಬ್ಧವಾಗಿರುವ ಸುಣ್ಣದ ಕಲ್ಲುಗಳಿಂದ ತುರುವೇಕೆರೆ ತಾಲ್ಲೂಕು ಅಮ್ಮಸಂದ್ರದ ಡೈಮಂಡ್ ಸಿಮೆಂಟ್ ಕಾರ್ಖಾನೆಯ ಉಗಮ ಹಾಗೂ ಸಿಮೆಂಟ್ ತಯಾರಿಕೆಯ ಪ್ರಮುಖ ಸರಕಾಗಿದೆ.

## ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ತುಮಕೂರು

ಈ ಹಿಂದೆ ಪಿ.ಹೆಚ್.ಇ. ವಿಭಾಗವಾಗಿ (ಸಾರ್ವಜನಿಕ ಜನಾರೋಗ್ಯ ಇಂಜಿನಿಯರಿಂಗ್ ಇಲಾಖೆ) ಕಾರ್ಯ ನಿರ್ವಹಿಸುತ್ತಿದ್ದ ತುಮಕೂರು ವಿಭಾಗವನ್ನು ಎರಡು ವಿಭಾಗಗಳಾಗಿ ವಿಭಜಿಸಿ ದಿನಾಂಕ: 1.4.1987 ರಿಂದ ತುಮಕೂರು ಮತ್ತು ಮಧುಗಿರಿ ಜಿಲ್ಲಾ ಪಂಚಾಯತ್ ಇಂಜಿನಿಯರಿಂಗ್ ವಿಭಾಗಗಳೆಂದು ಪುನರ್ ವಿಂಗಡಿಸಲಾಗಿದೆ. ನಂತರ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ ಎಂಬುದಾಗಿ ದಿನಾಂಕ:1.6.2005 ರಂದು ಮರು ನಾಮಕರಣ ಮಾಡಲಾಗಿದೆ.

ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ತುಮಕೂರು ಇದು ಜಿಲ್ಲಾ ಕೇಂದ್ರದ ವಿಭಾಗವಾಗಿರುತ್ತದೆ. ಈ ವಿಭಾಗದ ಕಾರ್ಯವ್ಯಾಪ್ತಿಯಲ್ಲಿ ತುಮಕೂರು, ಗುಬ್ಬಿ, ಕುಣಿಗಲ್, ತಿಪಟೂರು ಮತ್ತು ತುರುವೇಕೆರೆ ತಾಲ್ಲೂಕುಗಳು ಒಳಗೊಂಡಿರುತ್ತವೆ. ಈ ಎಲ್ಲಾ ಐದೂ ತಾಲ್ಲೂಕುಗಳನ್ನು ದಿನಾಂಕ:1.4.1987 ರಿಂದ ಉಪ ವಿಭಾಗಗಳೆಂದು ಹೆಸರಿಸಲಾಗಿದೆ. ಈ ವಿಭಾಗದ ವ್ಯಾಪ್ತಿಯಲ್ಲಿ 5 ಉಪ ವಿಭಾಗಗಳಿರುತ್ತವೆ.

ಈ ವಿಭಾಗದಲ್ಲಿ ಬರುವ ತುಮಕೂರು, ಗುಬ್ಬಿ, ಕುಣಿಗಲ್, ತಿಪಟೂರು ಮತ್ತು ತುರುವೇಕೆರೆ ಉಪ ವಿಭಾಗಗಳನ್ನೊಳಗೊಂಡ 162 ಗ್ರಾಮ ಪಂಚಾಯತಿಗಳ ವಿವರ ಕೆಳಕಂಡಂತಿದೆ.

1. ತುಮಕೂರು ಉಪ ವಿಭಾಗ : 41 ಗ್ರಾಮ ಪಂಚಾಯತಿಗಳು
2. ಗುಬ್ಬಿ ಉಪ ವಿಭಾಗ : 33 ಗ್ರಾಮ ಪಂಚಾಯತಿಗಳು
3. ಕುಣಿಗಲ್ ಉಪ ವಿಭಾಗ : 36 ಗ್ರಾಮ ಪಂಚಾಯತಿಗಳು
4. ತಿಪಟೂರು ಉಪ ವಿಭಾಗ : 26 ಗ್ರಾಮ ಪಂಚಾಯತಿಗಳು
5. ತುರುವೇಕೆರೆ ಉಪ ವಿಭಾಗ : 26 ಗ್ರಾಮ ಪಂಚಾಯತಿಗಳು

**1) ಇಲಾಖೆಯ ಪ್ರಮುಖ ಜವಾಬ್ದಾರಿಗಳು:**

ಗ್ರಾಮೀಣ ಪ್ರದೇಶಗಳಲ್ಲಿನ ಜನರಿಗೆ ವಿವಿಧ ಅಭಿವೃದ್ಧಿ ಯೋಜನೆಗಳಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ಅನುಷ್ಠಾನಕ್ಕೆ ತರುವ ಮೂಲಕ ಗ್ರಾಮೀಣ ಪ್ರದೇಶಗಳನ್ನು ಅಭಿವೃದ್ಧಿ ಪಡಿಸುವುದೇ ಈ ಇಲಾಖೆಯ ಮೂಲ ಉದ್ದೇಶವಾಗಿರುತ್ತದೆ. ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳಡಿಯಲ್ಲಿ ಗ್ರಾಮೀಣ ಪ್ರದೇಶಗಳ ಜನರಿಗೆ ಸ್ವಚ್ಛ ಮತ್ತು ಆರೋಗ್ಯಕರವಾದ ನೀರನ್ನು ನಿಗದಿತ ಪ್ರಮಾಣದಲ್ಲಿ ಒದಗಿಸುವುದು, ರೈತರಿಗೆ ವ್ಯವಸಾಯದ ಅನುಕೂಲಕ್ಕಾಗಿ ನೀರಾವರಿ ಸೌಲಭ್ಯಗಳನ್ನು ಒದಗಿಸುವುದು (40 ಹೆಕ್ಟೇರುಗಳಿಗಿಂತ ಕಡಿಮೆ ಅಚ್ಚುಕಟ್ಟು ಇರುವ ಕೆರೆಗಳು), ಎನ್.ಆರ್.ಡಿ.ಡಬ್ಲ್ಯೂಪಿ ಯೋಜನೆ, 2702 ಮತ್ತು 4702 ಸಣ್ಣ ನೀರಾವರಿ ಕೆರೆಗಳ ಕಾಮಗಾರಿ, ರಸ್ತೆಗಳಿಲ್ಲದ ಜನವಸತಿಗಳಿಗೆ ಹೊಸ ರಸ್ತೆಗಳನ್ನು ನಿರ್ಮಿಸುವುದು, ಅಲ್ಲದೆ ಗ್ರಾಮಾಂತರ ಪ್ರದೇಶಗಳಲ್ಲಿ ಅತಿ ಬಡವರಿಗೆ ಉದ್ಯೋಗ ಒದಗಿಸುವ ಕಾರ್ಯಕ್ರಮಗಳಾದ ಎನ್.ಆರ್.ಇ.ಜಿ.ಎ. ಯೋಜನೆ, ಬರಪರಿಹಾರ ಯೋಜನೆ, ಸಂಸತ್ ಸದಸ್ಯರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆ, ವಿಧಾನಸಭಾ ಸದಸ್ಯರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆ, 13ನೇ ಹಣಕಾಸು ಯೋಜನೆಯಲ್ಲಿ ವಿವಿಧ

ಅಭಿವೃದ್ಧಿ ಕಾಮಗಾರಿಗಳ ಅನುಷ್ಠಾನ, ಮುಖ್ಯ ಮಂತ್ರಿ ರಸ್ತೆ ಅಭಿವೃದ್ಧಿ (3054–ಸಿಎಂಜಿಎಸ್‌ವೈ) ಯೋಜನೆಯಡಿ, ಗ್ರಾಮೀಣ ಪ್ರದೇಶಗಳ ರಸ್ತೆ ಅಭಿವೃದ್ಧಿ ಕಾಮಗಾರಿಗಳನ್ನು ತೆಗೆದುಕೊಂಡು ಯೋಜನೆಗಳ ನಿಯಮಾವಳಿಗಳನ್ನು ಪಾಲಿಸಿ, ನಿಯಮಾವಳಿಗಳಂತೆ ತೃಪ್ತಿಕರವಾದ ರಸ್ತೆಗಳನ್ನು ನಿರ್ವಹಣೆ ಮಾಡುವುದು, ನಬಾರ್ಡ್ ಯೋಜನೆಯಲ್ಲಿ ರಸ್ತೆಗಳ ಹಾಗೂ ಕಟ್ಟಡಗಳ ನಿರ್ಮಾಣದ ಕಾರ್ಯಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಗ್ರಾಮಾಂತರ ಪ್ರದೇಶಗಳಲ್ಲಿ ಶಾಲಾ ಕಟ್ಟಡ, ಅಂಗನವಾಡಿ ಕಟ್ಟಡ, ಸಾರ್ವಜನಿಕ ಶಿಕ್ಷಣ ಇಲಾಖಾ ಕಟ್ಟಡ ದುರಸ್ತಿ, ಆರೋಗ್ಯ ಇಲಾಖಾ ಕಟ್ಟಡ, ಪಶುವೈದ್ಯ ಇಲಾಖಾ ಕಟ್ಟಡ ತೋಟಗಾರಿಕೆ, ಕೃಷಿ, ಮೀನುಗಾರಿಕೆ, ಹಿಂದುಳಿದ ವರ್ಗ ಮತ್ತು ಅಲ್ಪ ಸಂಖ್ಯಾತರ ಇಲಾಖೆ, ಸಮಾಜ ಕಲ್ಯಾಣ ಇಲಾಖೆ ಮತ್ತು ವಿದ್ಯಾರ್ಥಿನಿಲಯದ ಕಟ್ಟಡಗಳ ದುರಸ್ತಿ ಕಾಮಗಾರಿ, ಬಯಲು ಸೀಮೆ ಪ್ರದೇಶಾಭಿವೃದ್ಧಿ ಯೋಜನೆ, ಟಾಸ್ಕ್‌ಫೋರ್ಸ್ ಕಾಮಗಾರಿಗಳು, ಜಿಲ್ಲಾ ಪಂಚಾಯತ್ ಅಭಿವೃದ್ಧಿ ಅನುದಾನ ಯೋಜನೆ ಕಾಮಗಾರಿಗಳ ಕೆಲಸಗಳನ್ನೂ ಸಹ ನಿರ್ವಹಿಸಲಾಗುತ್ತಿದೆ.

ಇತ್ತೀಚಿನ ಸಾಲುಗಳಲ್ಲಿ ಮಳೆಯ ಪ್ರಮಾಣ ಕಡಿಮೆಯಾಗಿರುವುದರಿಂದ ಅಂತರ್ಜಲದ ಮಟ್ಟ ಕುಸಿದಿರುವ ಕಾರಣಗಳಿಂದ ಕೊಳವೆ ಬಾವಿಗಳ ಪಕ್ಕದಲ್ಲಿ ಇಂಗು ಗುಂಡಿಗಳನ್ನು ಹಾಗೂ ಇತರೆ ಜಲಾನಯನ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ. ಅಲ್ಲದೆ ನೀರಿನ ಗುಣಮಟ್ಟವನ್ನು ಪರೀಕ್ಷೆ ಮಾಡಲು ಜಿಲ್ಲಾ ಮಟ್ಟದಲ್ಲಿ ನೀರು ಪರೀಕ್ಷಣಾ ಪ್ರಯೋಗಾಲಯವೂ ಸಹ ಕಾರ್ಯನಿರ್ವಹಿಸುತ್ತಿದೆ.

ಸುವರ್ಣ ಗ್ರಾಮೋದಯ ಯೋಜನೆಯಡಿ ಆಯ್ಕೆಯಾಗಿರುವ ಗ್ರಾಮಗಳ ಗ್ರಾಮಾಭಿವೃದ್ಧಿ ಯೋಜನೆಗಳನ್ನು ಸರ್ಕಾರದಿಂದ ಒದಗಿಸಲಾದ ಯೋಜನಾ ಮಾರ್ಗಸೂಚಿಗಳನ್ವಯ ಅನುಷ್ಠಾನಗೊಳಿಸಲಾಗುತ್ತಿದೆ.

## ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಮಧುಗಿರಿ

ಈ ವಿಭಾಗದಲ್ಲಿ ಬರುವ ಮಧುಗಿರಿ, ಶಿರಾ, ಕೊರಟಗೆರೆ, ಪಾವಗಡ ಮತ್ತು ಚಿಕ್ಕನಾಯ್ಕನಹಳ್ಳಿಯ 5 ಉಪವಿಭಾಗಗಳನ್ನೊಳಗೊಂಡಿರುವ 162 ಗ್ರಾಮ ಪಂಚಾಯಿತಿಗಳ ವಿವರಗಳು ಈ ರೀತಿ ಇದೆ.

| | | | | |
|---|---|---|---|---|
| 1. | ಶಿರಾ ಉಪವಿಭಾಗ | :: | 36 | ಗ್ರಾಮ ಪಂಚಾಯಿತಿಗಳು |
| 2. | ಮಧುಗಿರಿ ಉಪವಿಭಾಗ | :: | 39 | --"-- |
| 3. | ಕೊರಟಗೆರೆ ಉಪವಿಭಾಗ | :: | 24 | --"-- |
| 4. | ಪಾವಗಡ ಉಪವಿಭಾಗ | :: | 34 | --"-- |
| 5. | ಚಿಕ್ಕನಾಯಕನಹಳ್ಳಿ ಉಪವಿಭಾಗ | :: | 28 | --"-- |
| | | | **161** | |

## ಜಲಾನಯನ ಅಭಿವೃದ್ಧಿ:

ತುಮಕೂರು ಜಿಲ್ಲೆಯು 10 ತಾಲ್ಲೂಕುಗಳನ್ನೊಳಗೊಂಡು 10.65ಲಕ್ಷ ಹೆಕ್ಟೇರು ಭೌಗೋಳಿಕ ವಿಸ್ತೀರ್ಣವನ್ನು ಹೊಂದಿದ್ದು, 5.08 ಲಕ್ಷ ಹೆಕ್ಟೇರು ಸಾಗುವಳಿಗೆ ಯೋಗ್ಯ ಭೂಮಿ ಮತ್ತು 1.52 ಲಕ್ಷ ಹೆಕ್ಟೇರು ಸಾಗುವಳಿಗೆ ಯೋಗ್ಯವಲ್ಲದ ಭೂಮಿಯನ್ನು ಹೊಂದಿರುತ್ತದೆ. ಕೃಷಿಗೆ ಯೋಗ್ಯವಾದ ಭೂಮಿಯಲ್ಲಿ ಕೇವಲ 1.49ಲಕ್ಷ ಹೆಕ್ಟೇರ್ ನೀರಾವರಿ ಭೂಮಿಯನ್ನು ಹೊಂದಿದ್ದು, ಉಳಿದ 3.59ಲಕ್ಷ ಹೆಕ್ಟೇರ್ ಸಾಗುವಳಿ ಖುಷ್ಕಿ ಭೂಮಿಯನ್ನು ಹೊಂದಿರುತ್ತದೆ. ಸಾಗುವಳಿ ಭೂಮಿಯು ಅತಿ ತೀವ್ರವಾಗಿ ಸವಕಳಿಯಾಗುತ್ತಿದ್ದು, ಪೋಷಕಾಂಶಗಳ ಕೊರತೆ ಉಂಟಾಗಿ ಬೆಳೆ ಉತ್ಪಾದನೆಯು ಕುಂಠಿತಗೊಂಡಿರುತ್ತದೆ. ದಿನೇ ದಿನೇ ಮಳೆ ಪ್ರಮಾಣ ಕಡಿಮೆಯಾಗುತ್ತಿರುವುದರಿಂದ ಹಾಗೂ ಬಂದಂತಹ ಮಳೆ ನೀರನ್ನು ಸಂರಕ್ಷಣೆ ಮಾಡದೆ ಇರುವುದರಿಂದ ನೀರು ಇಂಗುವಿಕೆ ಕಡಿಮೆಯಾಗಿ, ಭೂ ಕೊಚ್ಚಣೆ ಜಾಸ್ತಿಯಾಗಿ ಬಹುತೇಕ ಕೆರೆಗಳು ಶೇ.30 ರಿಂದ 53ಷ್ಟು ಹೂಳು ತುಂಬಿಕೊಂಡಿರುತ್ತವೆ ಹಾಗೂ ಅಂತರ್ಜಲಮಟ್ಟ 600 ರಿಂದ 1000 ಅಡಿಗೆ ಕುಸಿದಿದ್ದು ತೆರೆದ ಬಾವಿಗಳು ಒಣಗಿಹೋಗಿದ್ದು, ಕೊಳವೆ ಬಾವಿಗಳಲ್ಲಿ ನೀರಿನ ಇಳುವರಿಯು ಕಡಿಮೆಯಾಗಿರುತ್ತದೆ. ಇದರ ಪರಿಣಾಮದಿಂದ ಅರಣ್ಯ ಸಂಪತ್ತು ಹಾಳಾಗಿ ನೈಸರ್ಗಿಕ ಅಸಮತೋಲನ ಉಂಟಾಗಿರುತ್ತದೆ.

**ಈ ಜಲಾನಯನ ಅಭಿವೃದ್ಧಿ ಯೋಜನೆಯ ಮುಖ್ಯ ಉದ್ದೇಶಗಳು:–**

1. ನೈಸರ್ಗಿಕ ಸಂಪನ್ಮೂಲಗಳಾದ ನೀರು, ಮಣ್ಣು, ಪರಿಸರ ಸಂರಕ್ಷಣೆ ಮತ್ತು ಅಭಿವೃದ್ಧಿ

2. ಕೃಷಿ ಅರಣ್ಯ ಮತ್ತು ಖುಷ್ಕಿ ತೋಟಗಾರಿಕೆ ಮೂಲಕ "ಹಸಿರು ಹೊದಿಕೆ 'ಯನ್ನು ವೃದ್ಧಿಗೊಳಿಸುವುದು.
3. ಜಲಾನಯನ ಪ್ರದೇಶದಲ್ಲಿ ಬರುವ ಜನರ ಜೀವನ ಮಟ್ಟದಲ್ಲಿ ಸುಧಾರಣೆ ಮಾಡುವುದು ಮತ್ತು ಬಡತನ ನಿವಾರಣೆ
4. ಕೃಷಿ ಉತ್ಪಾಧನೆ ಮತ್ತು ಉತ್ಪಾದಕತೆಗಳನ್ನು ಹೆಚ್ಚಿಸುವುದು.
5. ಸ್ಥಳೀಯ ಸಂಘ-ಸಂಸ್ಥೆಗಳ ಸಾಮರ್ಥ್ಯ ಬಲವರ್ಧನೆ ಹಾಗೂ ನೈಸರ್ಗಿಕ ಸಂಪನ್ಮೂಲಗಳನ್ನು ಸುಸ್ಥಿರ ಅಭಿವೃದ್ಧಿಪಡಿಸಿ ಅವರೇ ಸಂರಕ್ಷಿಸುವಂತೆ ಮಾಡುವುದು.

6. ಜಲಾನಯನ ಪ್ರದೇಶದಲ್ಲಿ ಬರುವ ದುರ್ಬಲ ವರ್ಗದವರ ಕೌಶಲ್ಯತೆಯನ್ನು ಹೆಚ್ಚಿಸಿ ಬದಲಿ ಜೀವನೋಪಾಯವನ್ನು ಕಲ್ಪಿಸುವುದು.

**ಜಲಾನಯನ ಅಭಿವೃದ್ಧಿ ಇಲಾಖೆಯಲ್ಲಿ ಅನುಷ್ಠಾನಗೊಳಿಸುತ್ತಿರುವ ಯೋಜನೆಗಳು**

1) ಸಮಗ್ರ ಜಲಾನಯನ ನಿರ್ವಹಣಾ ಯೋಜನೆ 2) ಜಲಸಿರಿ ಯೋಜನೆ 3) ವಿಶೇಷ ಘಟಕ ಯೋಜನೆ 4) ಗಿರಿಜನ ಉಪ ಯೋಜನೆ

ಈ ಮೇಲ್ಕಂಡ ಯೋಜನೆಗಳಲ್ಲಿ ಕ್ರ.ಸಂ 1 ರ ಸಮಗ್ರ ಜಲಾನಯನ ನಿರ್ವಹಣಾ ಯೋಜನೆ ಯನ್ನು ಜಲಾನಯನ ಉಪಸಮಿತಿ ಮೂಲಕ ಅನುಷ್ಠಾನಗೊಳಿಸುತ್ತಿದ್ದು, ಈ ಉಪಸಮಿತಿಯನ್ನು ಸಂಬಂಧಪಟ್ಟ ಗ್ರಾಮ ಪಂಚಾಯತಿ ಅಡಿಯಲ್ಲಿ ರಚಿಸಿ ಅದಕ್ಕೆ ಆಯಾ ಗ್ರಾಮ ಪಂಚಾಯಿತಿ ಅಧ್ಯಕ್ಷರು ಅಧ್ಯಕ್ಷರಾಗಿ ಹಾಗೂ ಜಲಾನಯನ ಅಭಿವೃದ್ಧಿ ಇಲಾಖೆಯ ಸಹಾಯಕ ಕೃಷಿ ಅಧಿಕಾರಿಗಳು ಖಜಾಂಚಿಯಾಗಿ ಕಾರ್ಯ ನಿರ್ವಹಿಸುತ್ತಾರೆ. ಜಲಾನಯನ ಕಾರ್ಯಕಾರಿ ಸಮಿತಿಯ ಮೂಲಕ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ.

ಈ ಎಲ್ಲಾ ಯೋಜನೆಗಳ ಅಡಿಯಲ್ಲಿ ನೈಸರ್ಗಿಕ ಸಂಪನ್ಮೂಲಗಳಾದ ಮಣ್ಣು, ನೀರು ಮತ್ತು ಪರಿಸರ ಸಂರಕ್ಷಣೆಗೆ ಹೆಚ್ಚಿನ ಒತ್ತು ನೀಡಿದ್ದು, ಅದಕ್ಕೆ ಪೂರಕವಾಗಿ ನೀರು ಸಂಗ್ರಹಣಾ ವಿನ್ಯಾಸಗಳು, ಕೃಷಿ ಅರಣ್ಯ ಮತ್ತು ಖುಷ್ಕಿ ತೋಟಗಾರಿಕೆ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಅನುಷ್ಠಾನಗೊಳಿಸಲಾಗಿದೆ. ಅಲ್ಲದೆ ಪಶುಸಂಗೋಪನಾ ಕಾರ್ಯಕ್ರಮಕ್ಕೂ ಸಹಾ ಆಧ್ಯತೆಯನ್ನು ನೀಡಲಾಗಿದೆ.

**ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ (ರಿ.)**

ಈ ಸಂಸ್ಥೆ ಕರ್ನಾಟಕದಾದ್ಯಂತ ಹಲವಾರು ಜನಪರ ಸೇವಾ ಕೇಂದ್ರಗಳನ್ನು ತೆರೆದಿದೆ. ಇದರಡಿಯಲ್ಲಿ 2011 ನೇ ಜನವರಿಯಿಂದ ತುಮಕೂರು ಜಿಲ್ಲೆಯಲ್ಲಿ ಎರಡು ವಲಯಗಳನ್ನು ವರ್ಗೀಕರಿಸಿ ತುಮಕೂರು 1 ಹಾಗೂ ತುಮಕೂರು 2 (ಸಿರಾ) ಎಂದು ಎರಡು ವಿಭಾಗದಲ್ಲಿ ಒಬ್ಬೊಬ್ಬರು ನಿರ್ದೇಶಕರನ್ನು ನೇಮಿಸಿದೆ. ತುಮಕೂರು ನಗರ, ಕುಣಿಗಲ್, ಗುಬ್ಬಿ, ತುರುವೇಕೆರೆ ಹಾಗೂ ತಿಪಟೂರು ಈ ತಾಲ್ಲೂಕುಗಳನ್ನು ಒಂದು ಅಭಿವೃದ್ಧಿ ವಲಯ ಎಂದು ವಿಭಾಗಿಸಿ ಶ್ರೀ ಗಂಗಾಧರ ರೈ ಅವರನ್ನು ನಿರ್ದೇಶಕರನ್ನಾಗಿಯೂ, ಸಿರಾ ಕೇಂದ್ರವಾಗಿಸಿ ಇದರ ವ್ಯಾಪ್ತಿಯಲ್ಲಿ ಮಧುಗಿರಿ, ಪಾವಗಡ, ಕೊರಟಗೆರೆ ಹಾಗೂ ಚಿಕ್ಕನಾಯಕನಹಳ್ಳಿ ತಾಲ್ಲೂಕುಗಳ ಸಿರಾ ಕೇಂದ್ರದ ಅಡಿಯಲ್ಲಿ ಇದಕ್ಕೆ ಜಿಲ್ಲಾ ನಿರ್ದೇಶಕರಾಗಿ ಶ್ರೀ ಪಿ.ಕೆ. ಪುರುಷೋತ್ತಮ ಅವರು ಕಾರ್ಯ ನಿರ್ವಹಿಸುತ್ತಿದ್ದಾರೆ. ಈ ಎರಡೂ ಕೇಂದ್ರ ವಲಯಗಳೂ ಸೇರಿದಂತೆ ಒಟ್ಟು 250 ಖಾಯಂ ಸಿಬ್ಬಂದಿಗಳಿದ್ದು ತುಮಕೂರು ಜಿಲ್ಲೆಯಾದ್ಯಂತ 25 ಸಾವಿರ ಶ್ರೀ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಸಂಘಗಳಿವೆ. ಇವರುಗಳು 2,60,000 ಸದಸ್ಯರನ್ನು ನೇಮಿಸಿಕೊಂಡು 16 ಯೋಜನೆಗಳನ್ನು ರೂಪಿಸಿಕೊಂಡು ಅವುಗಳನ್ನು ಅನುಷ್ಠಾನಕ್ಕೆ ತರಲಾಗಿದೆ. ಅವುಗಳೆಂದರೆ 1) ಪ್ರಗತಿ ಬಂಧು ಸ್ವಸಹಾಯ ರಚನೆ 2) ಪ್ರಗತಿ ನಿಧಿ ವಿತರಣೆ ಮತ್ತು ಉಳಿತಾಯ 3) ಒಕ್ಕೂಟಗಳ ರಚನೆ 4) ಹೈನುಗಾರಿಕೆ ಮತ್ತು ಕೃಷಿ ಅಭಿವೃದ್ಧಿ 5) ತಾಂತ್ರಿಕ ತರಬೇತಿ ಕಾರ್ಯಾಗಾರ 6) ನಾಗರೀಕ ಪ್ರಜ್ಞಾ ಅಭಿಯಾನ 7) ಕಾಲೋನಿ ಅಭಿವೃದ್ಧಿ ಕಾರ್ಯಕ್ರಮ 8) ಜೀವನ ಮಧುರ (ಐಖಅ/ಓಕಖ) ಉಳಿತಾಯ ಯೋಜನೆ 9) ಜನಜಾಗೃತಿ (ವಿಶೇಷವಾಗಿ ಮದ್ಯವರ್ಜನ ಶಿಬಿರ) 10) ಮಹಿಳಾ ಜ್ಞಾನ ವಿಕಾಸ ಕಾರ್ಯಕ್ರಮ 11) ಬಾಡಿಗೆ ಆಧಾರಿತ ಕೃಷಿ ಉಪಕರಣ ವಿತರಣೆ, ಪ್ರೇರಣೆ, ನೆರವು ಕೇಂದ್ರ 12) ಸ್ವಉದ್ಯೋಗ ಕೌಶಲ 13) ಶೌಚಾಲಯ ನಿರ್ಮಾಣ ಸಹಾಯ ಸಬ್ಸಿಡಿ 14) ಗೋಬರ್ ಗ್ಯಾಸ್ ನಿರ್ಮಾಣ ಸಬ್ಸಿಡಿ 15) ಸೋಲಾರ್ ಅಳವಡಿಕೆ ಪ್ರೇರಣೆ, ಪ್ರೋತ್ಸಾಹ. ಉಪಕರಣ ಹಂಚಿಕೆ ಹಾಗೂ ಶುದ್ಧ ಗಂಗಾ ಕುಡಿಯುವ ನೀರಿನ ಯೋಜನೆ ಈ ಯೋಜನೆ ಪಾವಗಡ, ಕೊರಟಗೆರೆ, ಮಧುಗಿರಿ, ಸಿರಾದಂತಹ ತೀರ ಹಿಂದುಳಿದ ಹಾಗೂ ಫ್ಲೋರೈಡ್‌ಯುಕ್ತ ಕುಡಿಯುವ ನೀರಿನ ದೊಡ್ಡ ಸಮಸ್ಯೆಗೆ ಕೊಂಚಮಟ್ಟಿನ ಪರಿಹಾರ ದೊರೆತಿದೆ. 60 ರೂಪಾಯಿಗಳಿಗೆ ದಿನಕ್ಕೊಂದು

ಕ್ಯಾನ್ 25 ಲೀಟರ್ ಶುದ್ಧ, ಫ್ಲೋರೈಡ್‌ಮುಕ್ತ ನೀರನ್ನು ಒದಗಿಸಿರುವುದು ಗ್ರಾಮೀಣರ ಬದುಕಿಗೆ ಹೊಸ ಆಶಾಕಿರಣವಾಗಿದೆ. ತುಮಕೂರು ಜಿಲ್ಲೆಯಲ್ಲಿ 16 ಸ್ಥಳಗಳಲ್ಲಿ ಶುದ್ಧ ಗಂಗಾ ಕುಡಿಯುವ ನೀರಿನ ಘಟಕಗಳು ವ್ಯವಸ್ಥಿತವಾಗಿ ಕಾರ್ಯನಿರ್ವಹಿಸುತ್ತಿವೆ.

ಕರ್ನಾಟಕ ಗ್ರಾಮ ಚರಿತ್ರೆ ಕೋಶದಲ್ಲಿ ತುಮಕೂರು ಜಿಲ್ಲೆಯ ಕಂದಾಯ, ಮಜರೆ ಜನವಸತಿ ಗ್ರಾಮ ಮಾತ್ರವಲ್ಲದೆ ಬೇಚರಕ್ ಗ್ರಾಮಗಳ ಪರಿಚಯವನ್ನೂ ನೀಡಲಾಗಿದೆ. ಬಹುಬಗೆಯ ಪ್ರಶ್ನೆಗಳ ಮಾದರಿ ಒಂದಾದರೆ, ಆ ಪ್ರಶ್ನೆಗಳಿಗೆ ಉತ್ತರ ರೂಪವಾಗಿ ಜಿಲ್ಲೆಯ 5312 ಹಳ್ಳಿಗಳ ಸಮಗ್ರ ಮಾಹಿತಿಯನ್ನು ಇಲ್ಲಿ ಒದಗಿಸಲಾಗಿದೆ. ಈ ಹಿಂದೆ ಕರ್ನಾಟಕ ಗೆಜೆಟ್, ವಿಶ್ವಕೋಶ ಈ ಬಗೆಯ ಕೆಲವು ಪುಸ್ತಕಗಳಲ್ಲಿ ಜಿಲ್ಲೆ, ತಾಲ್ಲೂಕು ಕೇಂದ್ರ ಸ್ಥಳಗಳ ಬಗೆಗೆ ಮಾತ್ರ ಪರಿಚಯಾತ್ಮಕ ಮಾಹಿತಿ ಸೀಮಿತವಾಗಿ ಪ್ರಕಟವಾಗಿದೆ. ಇಲ್ಲಿ ತುಮಕೂರು ಜಿಲ್ಲೆಯ ಪ್ರತಿಯೊಂದು ಹಳ್ಳಿಗಳ ಇತಿಹಾಸ, ನೆಲ-ಜಲ, ಭೌಗೋಳಿಕ ವ್ಯಾಪ್ತಿ, ಪಶು-ಪಕ್ಷಿ, ಆಹಾರ, ಕೃಷಿ, ಮಳೆ, ಕಸುಬು, ಊಟ, ಆಡಳಿತ, ಸಾಮಾಜಿಕ ಸೌಲಭ್ಯ, ಜಾತಿ, ಶಿಕ್ಷಣ, ಸಾಹಿತ್ಯ, ಕಲೆ, ಧರ್ಮ, ದೇವರು, ಸಂಸ್ಕೃತಿ, ಸಂಘ-ಸಂಸ್ಥೆ ಈ ಬಗೆಯ ಬಹುಮುಖಿ ಮಾಹಿತಿಗಳ ವಿವರ ಈ ಪುಸ್ತಕದಿಂದ ಲಭ್ಯವಾಗುತ್ತಿದೆ. ಕರ್ನಾಟಕ ಜಾನಪದ ವಿಶ್ವವಿದ್ಯಾನಿಲಯದ ಈ ಯೋಜನೆಯಲ್ಲಿ ಎರಡು ವರ್ಷಗಳಿಂದ ಕ್ಷೇತ್ರ ತಜ್ಞರಾಗಿ ವಿವಿಧ ತಾಲ್ಲೂಕುಗಳಲ್ಲಿ ಅಲ್ಲಿನ ಹಳ್ಳಿಗಳ ಮಾಹಿತಿ ಸಂಗ್ರಹಿಸುವಲ್ಲಿ ನೆರವಾಗಿದ್ದಾರೆ. ಈ ಎಲ್ಲ 23 ಜನ ಕ್ಷೇತ್ರತಜ್ಞರ ಆಚೆಗೂ ಹಲವಾರು ವಿದ್ವಾಂಸರು, ಕಲಾವಿದರು, ಆಸಕ್ತಿಯಿಂದ ಮಾಹಿತಿ ಒದಗಿಸಿದ್ದಾರೆ. ಈ ಎಲ್ಲರನ್ನೂ ಕೃತಜ್ಞತೆಯಿಂದ ನೆನೆಯುತ್ತೇನೆ. ಇದು ಬಹುದೊಡ್ಡ ಕೆಲಸ. ಕಳೆದ ಎರಡೂವರೆ ವರ್ಷಗಳಿಂದ ಪರಿಶ್ರಮದಿಂದ ಕೆಲಸ ಮಾಡಿದ್ದೇನೆ. ನಾನು ಮಾಡಿರುವ ಈ ಬೃಹತ್ ಕೆಲಸ ಹಲವರಿಗೆ ದೊಡ್ಡದಾಗಿ ಕಣಿಸಿದೆ, ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ತುಮಕೂರು ಜಿಲ್ಲೆಗೆ ಬಹುದೊಡ್ಡ ಸಾಹಿತ್ಯ ಆಕರ, ಅಪೂರ್ವ ದಾಖಲಾತಿ ಪುಸ್ತಕ ಎಂದು ಹಿರಿಯ ಅಧಿಕಾರಿಗಳು, ತಜ್ಞರು ಮೆಚ್ಚುಗೆ ಸೂಚಿಸಿದ್ದಾರೆ. ಇದೇ ನನಗೆ ಬಂಡವಾಳ, ನನ್ನ ಶ್ರಮಕ್ಕೆ ಹರ್ಷಿಸಬಹುದಾದ ಸಂಗತಿ. ಈ ಕೆಲಸವನ್ನು ಕಳೆದ ಒಂದೂವರೆ ವರ್ಷದಿಂದ ತುಂಬಾ ತಾಳ್ಮೆಯಿಂದ ಟೈಪ್ ಮಾಡಿ, ಮುದ್ರಣ ಕಾರ್ಯದಲ್ಲಿ ನೆರವಾದ ಶ್ರೀಮತಿ ಮಾನಸ ಅವರ ಸಹನೆಗೆ ನಾನೆಂದಿಗೂ ಋಣಿ. ಇದಕ್ಕೆ ಮಾರ್ಗದರ್ಶನ, ಸಹಕಾರ ನೀಡಿದ ಕರ್ನಾಟಕ ಜಾನಪದ ವಿಶ್ವವಿದ್ಯಾಲಯದ ಕುಲಪತಿ ಡಾ.ಅಂಬಳಿಕೆ ಹಿರಿಯಣ್ಣ ಅವರಿಗೆ, ಸಂಯೋಜಕ ಸಂಪಾದಕರಾದ ಡಾ.ಚಕ್ಕೆರೆ ಶಿವಶಂಕರ್, ಕಾರ್ಯನಿರ್ವಾಹಕ ಸಂಪಾದಕರಾದ ಶ್ರೀ ಕಾ.ತ. ಚಿಕ್ಕಣ್ಣ, ವಿಶ್ವವಿದ್ಯಾನಿಲಯದ ಸಂಯೋಜನಾಧಿಕಾರಿ ಡಾ.ಕೆ. ಪ್ರೇಮಕುಮಾರ್ ಇವರಿಗೆ ನನ್ನ ನಮನಗಳು ಸಲ್ಲುತ್ತವೆ.

ಇದೊಂದು ಬಹುಮುಖಿ ನೆಲೆಯ, ಹಲವರ ಕೂಡು ಕೆಲಸ. ಹಾಗಾಗಿ ಇಲ್ಲಿ ಆಗಿರುವುದೆಲ್ಲವೂ ಶ್ರೇಷ್ಠ ಎಂದು ನಾನು ಭಾವಿಸುವುದಿಲ್ಲ. ಏಳು ಸಾವಿರಕ್ಕೂ ಪುಟಗಳ ಇಷ್ಟೊಂದು ಬೃಹತ್ ಕೆಲಸ ತುಮಕೂರು ಜಿಲ್ಲೆಯ 5312 ಹಳ್ಳಿಗಳ ಪರಿಚಯಾತ್ಮಕ ವಿವರ ನೀಡಿದ ಮೊದಲ ಗ್ರಂಥ ಇದಾಗಿರುವುದರಿಂದ ಜಿಲ್ಲಾ ಸಂಸ್ಕೃತಿ, ಆಡಳಿತಾತ್ಮಕ ಅಧ್ಯಯನ, ಮಾಹಿತಿಗೆ ಒಂದು ಪ್ರವೇಶಿಕೆ ದೊರೆತಿದೆ. ಕುಗ್ರಾಮದ ವಿವರವೂ ಇಲ್ಲಿರುವುದೇ ಇದರ ರೋಚಕತೆ. ಅದುವೇ ನಮ್ಮ ಹೆಮ್ಮೆ. ಎಲ್ಲ ಬಗೆಯ ಅಭಿಪ್ರಾಯ, ಸಲಹೆಗಳನ್ನು ಪ್ರೀತಿಯಿಂದ ಸ್ವಾಗತಿಸುತ್ತೇನೆ.

**ಡಾ. ಚಿಕ್ಕಣ್ಣ ಯಣ್ಣೆಕಟ್ಟೆ**
ಪ್ರಾಧ್ಯಾಪಕ ಮತ್ತು ಪಿ.ಎಚ್‌ಡಿ ಮಾರ್ಗದರ್ಶಕ
ಸರ್ಕಾರಿ ಪ್ರ.ದ. ಕಾಲೇಜು, ಸಿರಾ
ತುಮಕೂರು ಜಿಲ್ಲೆ